# ಅಪರಂಜಿ

ತಿಳಿನಗೆಯ ಕಾರಂಜಿ



ಫೆಬ್ರವರಿ - 2014





# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 31
ಸಂಚಿಕೆ – 5
ಫೆಬ್ರವರಿ – 2014

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಂಬಿ ಕೆಟ್ಟವರಿಲ್ಲವೆ? | **ಅ ರಾ ಮಿತ್ರ** | 3 |
| ಲಾಂಗ್ ಲಿವ್ ಯಾಲಂಟಮ್ಮ | **ಸಿ.ಆರ್. ಸತ್ಯ** | 6 |
| ಒಂದು ನಿಮಿಷ | **ಎಸ್.ಎನ್. ಸುಬ್ಬರಾವ್** | 10 |
| ಸಾಯೋ ಸೀನ್‌ಗೆ..... | **ಕೃಷ್ಣ ಸುಬ್ಬರಾವ್** | 13 |
| ಉಪ್ಪಿಟ್ಟಿನ ರುಚಿ | **ಬೇಲೂರು ರಾಮಮೂರ್ತಿ** | 15 |
| ಹಿಗ್ಗುವ ಈ ಪರಿ | **ನಂನಾಗ್ರಾಜ್** | 21 |
| ನಾಯಿಯ ಫೈಸ್ಲಾ | **ಅನಿತಾ ನರೇಶ್ ಮಂಚಿ** | 22 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 27 |
| ತುಂತುರು | **ದಂನಾಳ** | 28 |
| ಸ್ವಡಿ ಟೂರ್ ಅಥವಾ.... | **ಗಣೇಶ ಹೆಗ್ಗಡೆ** | 29 |
| ಅಕ್ರಮ – ಸಕ್ರಮ | **ವೈ.ಎನ್. ಗುಂಡೂರಾವ್** | 33 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 36 |
| ಶುದ್ಧ ಅಸುದ್ದಿ | **ಎಚ್ಚೆನ್ನೆ** | 39 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಏಪ್ರಿಲ್‌ನಲ್ಲಿ ಮಹಾ ಚುನಾವಣೆ – ಶೀರ್ಷಿಕೆ

**● ಒಂದನೇ ತಾರೀಖು ಮಾಡುಲ್ಲವಂತೆ !!**

★★★

ಮಕ್ಕಳಲ್ಲಿ ಒಳ್ಳೆಯ ಮೌಲ್ಯಗಳನ್ನು ಹೆಚ್ಚಿಸಿ – ಹೇಳಿಕೆ

**● ಹೌದು, ಮರಗಳು ಬಗ್ಗುವುದಿಲ್ಲ !!**

★★★

ಲಾಲ್‌ಬಾಗ್‌ನಲ್ಲಿ ಬಿ.ಎಸ್.ಎಫ್. ಸಿಬ್ಬಂದಿ ಪುಂಡಾಟ – ಸುದ್ದಿ

**● ಅವರನ್ನು ಬಾರ್ಡರ್ ಹೊರಕ್ಕೆ ಹಾಕಬೇಕು !!**

★★★

ಕಾಳಿದಾಸನಿಗಿಂತಲೂ ಹಿಂದಿನ ನಾಟಕಕಾರ ಭಾಸ – ಹೇಳಿಕೆ

**● ನಮಗೂ ಹಾಗೇ ಭಾಸವಾಗುತ್ತೆ !!**

★★★

ಈ ವರ್ಷದ ಚುನಾವಣೆಯಲ್ಲಿ ''ಕೈ–ಬರಹ'' ಏನಾಗುತ್ತೋ ನೋಡಬೇಕು !!

★★★

ಇನ್ನಷ್ಟು ಅಸ್ತ್ರಗಳು ನನ್ನ ಬಳಿ ಇವೆ – ಶ್ರೀ ಹಿರೇಮಠ

**● ಮಹಾಭಾರತ ಮರುಕಳಿಸಲಿ !!**

★★★

ಪ್ರತಿಪಕ್ಷ ಸ್ಥಾನ ಉಳಿಸಿಕೊಳ್ಳಲು ವಾಮಮಾರ್ಗ ಇಲ್ಲ – ಎಚ್.ಡಿ.ಕೆ.

**● ಅವರು ಯಾವ ಮಾರ್ಗದಿಂದ ಹೇಳಿಕೆ ಕೊಟ್ಟರು ?!**

★★★

ಕಿವೀಸ್ ಬಳಗವನ್ನು ಲಘುವಾಗಿ ಪರಿಗಣಿಸಿಲ್ಲ – ಧೋನಿ

**● ಅನುಭವದ ಮಾತು !!**

★★★

# ನಂಬಿ ಕೆಟ್ಟವರಿಲ್ಲವೆ?

**- ಅ ರಾ ಮಿತ್ರ**

**ಮಾ**ವ, ಮೂಢನಂಬಿಕೆ ಎಂದರೇನು?

ಅದು ನಮ್ಮ ಅಪ್ಪ ಅಜ್ಜಪಜ್ಜರ ಕಾಲದಲ್ಲಿ ಅವರ ಅಜ್ಜಪಜ್ಜರುಗಳು ತಮ್ಮ ಹಿಂದಿನವರು ಮಾಡಿದಂತೆ ಭ್ರಮಿಸುವ ಒಂದು ವಂಶವಾಹಿನಿ ರೋಗ.

ನಾವೇಕೆ ನಂಬಬೇಕು?

ಚೆನ್ನಾಯ್ತು! ನಂಬದಿದ್ದರೆ ಈ ಸಾವಿರಾರು ವರ್ಷಗಳಿಂದ ಅವು ಹೇಗೆ ಉಳಿದುಕೊಂಡು ಬರುತ್ತಿದ್ದವು?

ಒಂದು ಉದಾಹರಣೆ ಕೊಡು.

ಒಂದೇ ಏಕೆ? ಸ್ವರ್ಗನರಕಗಳಿವೆ ಎಂದು ಹೇಳಿಕೊಂಡು ಬರುವುದು. ನಾವು ಹಿಂದಿನ ಜನ್ಮ ಮಾಡಿದ ಕಾರ್ಯಗಳಿಗೆ ಅನುಗುಣವಾಗಿ ನಮಗೆ ಫಲ ಸಿಗುತ್ತದೆ ಎಂದು ನಂಬಿಸುವುದು. ಮದುವೆಯಾದವರು 'ಗಂಡನೇ ದೇವರು' ಎಂದು ನಂಬುವುದು. ಅಪ್ಪಮ್ಮಂದಿರು ಮುಪ್ಪಿನಲ್ಲಿ ಮಕ್ಕಳು ಸಾಕುತ್ತಾರೆ ಎಂದು ನಂಬುವುದು. ಎಲ್ಲ ರಾಜಕಾರಣಿಗಳೂ ದೇಶಕ್ಕೆ ಒಳ್ಳೆಯದನ್ನೇ ಮಾಡುತ್ತಾರೆ ಎಂದು ನಂಬುವುದು. ಪ್ರಜಾಪ್ರಭುತ್ವವೇ ಅತ್ಯಂತ ಶ್ರೇಷ್ಠವಾದ ರಾಜಕೀಯ ಮಾರ್ಗ ಎಂದು ನಂಬುವುದು. ಭಾರತವೇ ಅತ್ಯಂತ ನೈತಿಕ ಧಾರ್ಮಿಕ ಸಂಪತ್ತನ್ನು ಹೊಂದಿದೆ ಎಂದು ಪ್ರಚಾರ ಮಾಡುವುದು. ನಾಲ್ಕು ವರ್ಷದ ಹೆಣ್ಣು ಮಗುವೂ ಕೂಡ ಕಾಮುಕರಿಗೆ ಆಹಾರವಾಗುತ್ತಿದ್ದರೂ ಲಕ್ಷಿಸದೆ ಯತ್ರ ನಾರ್ಯಸ್ತು ಪೂಜ್ಯತೆ.. ಎಂದು ಸಾರ್ವಜನಿಕವಾಗಿ ಹಾಡಿ ಹೊಗಳುವುದು. ಇವೆಲ್ಲಾ ಉದಾಹರಣೆಗಳೇ ಅಲ್ಲವೆ? ನೀನು ಒಂದು ಉದಾಹರಣೆ ಕೇಳಿದರೆ ನಾನು ಹತ್ತು ಕೊಟ್ಟಿದ್ದೇನೆ ಸಾಕೆ?

**ಯಾವುದು ಮೂಢನಂಬಿಕೆ?**
**ಯಾವುದು ಸುಂದರ ಬುರುಡೆ?**

ಹಾಗೆಂದರೆ ರಾಮರಾಜ್ಯ ಇತ್ತು ಎಂದು ಹೇಳುವುದೂ ಒಂದು ಮೂಢನಂಬಿಕೆ ಅಲ್ಲವೆ ಮಾವ?

ಛೆ! ಛೆ! ಅದನ್ನು ಮೂಢನಂಬಿಕೆ ಎಂದು ಕರೆಯಬಾರದು ಮರಿ. ಅದು ಒಂದು ಸುಂದರ ಬುರುಡೆ ಅಂತ ಹೇಳಬೇಕು ಗೊತ್ತೆ?

ಹೇಗೆ ಸ್ವಲ್ಪ ವಿವರಣೆ ಕೊಡು.

ಅಲ್ಲ ಮರಿ ರಾಕ್ಷಸರನ್ನೆಲ್ಲಾ ಇಟ್ಟಾಡಿಸಿ ಕೊಂದಮೇಲೆ ರಾಕ್ಷಸರ ಸಂಖ್ಯೆಯೇನೂ ಕಡಿಮೆಯಾಗಲಿಲ್ಲವಲ್ಲ? ಸೀತೆಯ ಚಾರಿತ್ರ್ಯದ ಬಗೆಗೆ ಉತ್ತರ ರಾಮಾಯಣವು ಶಂಕೆ ಹೊರಿಸುತ್ತದಲ್ಲ,

ಅದಕ್ಕೆ ಒಬ್ಬ ಅಗಸನ ಹೇಳಿಕೆ ಕಾರಣ ಎನ್ನುತ್ತಾರೆ. ಆದರೆ ನನಗೇನೋ ಅದು ಅಗಸನ ಮಾತು ಎನ್ನಿಸುವುದಿಲ್ಲ. ನಮ್ಮ ಭವ್ಯ ಸಾಮಾಜಿಕರೇ ಆ ಅಪವಾದವನ್ನು ಮಾಡಿ ಅದನ್ನು ಅಗಸನು ಹೇಳಿದ ಮಾತು ಎಂದು ಪ್ಲೇಟು ತಿರುಗಿಸಿಬಿಟ್ಟಿದ್ದಾರೆ.

ಅಗಸ ಅಲ್ಲ ಅಂತೀಯ ಮಾವ?

ಖಂಡಿತ ಅಲ್ಲ. ನಮ್ ಸಮಾಜದಲ್ಲಿ ಕೊಳಕನ್ನು ತೆಗೆಯುವ ನಿಷ್ಠಾವಂತ ಕಸುಬಿನ ಅಗಸರು ಇಂಥ ಕೊಳಕು ಸುದ್ದಿ ಸೃಷ್ಟಿಸಿದ್ದಾರೆ ಎಂದರೆ ನನಗಂತೂ ನಂಬಿಕೆಯಿಲ್ಲ. ಸೀತೆಗ ಮತ್ತೆ ಅರಣ್ಯವಾಸ ವಿಧಿಸುವ ಬುದ್ಧಿ ಉತ್ತರ ರಾಮಾಯಣಕಾರರಿಗೆ ಯಾಕೆ ಬಂತೋ ನನಗಂತೂ ಗೊತ್ತಿಲ್ಲ. ಹಾಗೆ ನೋಡಿದರೆ ಉತ್ತರ ರಾಮಾಯಣ ಎಂಬ ಕಥೆಯೇ ನಡೆದಿಲ್ಲ ಎಂದು ವಿದ್ವಾಂಸರೆಲ್ಲ ಧೈರ್ಯವಾಗಿ ಹೇಳಿಬಿಟ್ಟಿದ್ದಾರಲ್ಲ.

ಹಾಗೆ ಲವಕುಶ ಇದ್ದಿದ್ದೂ ಸುಳ್ಳೇನು ಮಾವ?

ಬರೀ ಸುಳ್ಳಲ್ಲಪ್ಪ ಅದು ಶುದ್ಧ ಸುಳ್ಳು. ಸುಳ್ಳನ್ನು ಕಾವ್ಯದಲ್ಲಿ ಹೇಳಿದರೆ ಅದು ರಮಣೀಯ ಕಲ್ಪನೆಯಾಗುತ್ತದೆ. ರಾಮನು ಸೀತೆಯ ಬಗ್ಗೆ ನಡೆದುಕೊಂಡ ರೀತಿ ನೋಡಿ ಯಾವನೋ ಬುದ್ಧಿವಂತ ಕವಿ ಹೀಗೆ ಲವಕುಶರನ್ನು ಸೃಷ್ಟಿಸಿ ರಾಮನ ಮೇಲೆ ಸೇಡು ತೀರಿಸಿಕೊಂಡಿರುವ ಸುಂದರ ನಂಬಿಕೆಯ ಕಥೆ ಅದು. ಅದು ಕೂಡ ಒಂದು ಸುಂದರ ಕವಿಯ ನಂಬಿಕೆ. ಮೂಢನಂಬಿಕೆಯ ಸಂತಾನದ್ದೇ!

ಈಗ ಯಾವುದು ಮೂಢನಂಬಿಕೆ ಹೇಳಿ ಮತ್ತೆ.

ಹಾಗೆ ಕೇಳು. ಎಂಜನಿಯರಿಂಗ್ ಮೆಡಿಕಲ್ ವಿಭಾಗಗಳೇ ನಮ್ಮ ವಿದ್ಯಾರ್ಥಿಗಳಿಗೆ ಒಳ್ಳೆಯದು. ಅಮೆರಿಕಾ ಇಂಗ್ಲೆಂಡಿಗೆ ಹೋದವರೇ ಮಹಾ ಪ್ರತಿಭಾಶಾಲಿಗಳು ಎಂದು ತಿಳಿಯುವುದೂ ಈಗಿನ ತಂದೆತಾಯಿಗಳ ಮೂಢನಂಬಿಕೆಯೇ ಆಗಿಲ್ಲವೆ? ಹಾಗೆಯೇ ಭಾರತದಲ್ಲಿರುವವರೆಲ್ಲಾ ಮೆಡಿಕಲ್ ಸಾಫ್ಟ್‌ವೇರ್ ಎಂಜನಿಯರಿಂಗ್ ಮುಗಿಸುವವರು ಮಾತ್ರ ಪ್ರತಿಭಾವಂತರು, ಉಳಿದವರು ದಡ್ಡರು. ಎರಡನೆಯ ದರ್ಜೆಯವರು ಎಂದು ಭಾವಿಸುವುದೂ ಇಂದಿನ ದೊಡ್ಡ ಮೂಢನಂಬಿಕೆಯೇ ಆಗಿದೆಯಲ್ಲ. ಹಾಗೇ ಬೆಳ್ಳಗಿರುವವರೆಲ್ಲಾ ರೂಪವಂತರು ಕಪ್ಪಗಿರುವವರೆಲ್ಲಾ ದಡ್ಡ ಶಿಖಾಮಣಿಗಳು ಎಂಬ ವಸಾಹತುಶಾಹಿ ಮೂಢನಂಬಿಕೆಗಳೂ ನಮ್ಮಲ್ಲಿ ಇಲ್ಲವೆ?

ನಿಜ ನಿಜ

ಅದು ಹೋಗಲಿ. ಮದುವೆಯಾದ ಮೇಲೆ ಹೆಂಗಸರು 'ತಾಳಿ ಭಾಗ್ಯ' ಎಂದು ನಂಬುತ್ತಾರಲ್ಲ ಅದು ತಾಳಿ ಹಿಂಸೆಯಲ್ಲವೆ? ಅವಳದೂ ಒಂದು ನೆಲೆಯಲ್ಲಿ ಮೂಢನಂಬಿಕೆ ಅಲ್ಲವೆ?

ಇರಬಹುದು. ನಮ್ಮ ಅಪ್ಪ ಮಂಗಳವಾರದ ದಿನ, ಗ್ರಹಣದ ದಿನ ಕ್ಷೌರಿಕರ ಅಂಗಡಿಗೆ ಹೋಗುವುದಿಲ್ಲ. ಇದೂ ಮೂಢನಂಬಿಕೆಯೇ ಅಲ್ಲವೆ?

ಖಂಡಿತ. ನಿಮ್ಮಮ್ಮ ಈಗಲೂ ರಸ್ತೆಯಲ್ಲಿ ಹೋಗುವಾಗ ಬೆಕ್ಕು ಅಡ್ಡ ಬಂದರೆ ಬೇಜಾರು ಮಾಡಿಕೊಳ್ಳುತ್ತಾಳಲ್ಲ ಏಕೆ?

ಅದೊಂದು ಅಪಶಕುನವಂತೆ..

ಯಾರಿಗೆ ಮಾವ? ಬೆಕ್ಕಿಗೋ ನಮಗೋ?

ಇನ್ನು ಯಾರಿಗೆ ಬೆಕ್ಕಿಗೆ! ಒಂದು ದಿನ ಹಾವು ಎದುರಿಗೆ ಬಂತು.

ಹಾವು ಅಯ್ಯಪ್ಪ!

ಹೌದು, ಪಾಪ ಆ ಹಾವು ಕೂಡಲೇ ಪೊದೆಗೆ ಸರಿದು ಮಾಯವಾಯಿತು. ಏಕೆ ಗೊತ್ತೆ? ಆ ಹಾವಿನ ಅಮ್ಮ ಹೇಳಿ ಕಳಿಸಿದ್ದರಂತೆ..

ಏನಂತ?

ನಾಗರ ಮರಿ, ನಾಗರ ಮರಿ ತುಂಬಾ ಕ್ರೂರಿಗಳಾದ ಮನುಷ್ಯರು ಎದುರಿಗೆ ಬಂದರೆ ಎಲ್ಲಾದರೂ ಹೊಕ್ಕು ಬದುಕಿಕೊ. ಮನುಷ್ಯನಂಥ ಜೀವ ಹಿಂಸಕ ಮತ್ತಾರೂ ಇಲ್ಲ.

ಮಾವ ಇನ್ನೂ ಏನೇನೋ ಹೇಳುತ್ತಿದ್ದರೋ ಗೊತ್ತಿಲ್ಲ. ಅಷ್ಟರಲ್ಲಿ ಅಮ್ಮ ಕರೆದಿದ್ದರಿಂದ ಆನಂದ ಓಡಿಹೋಗುತ್ತಾ ಹೇಳಿದ: ಮಾವ ಬರ್ತೀನಿ. ಆದರೆ ಒಂದು ಮಾತು ನೀವು ರಾಹುಕಾಲದಲ್ಲಿ ಎಲ್ಲೂ ಹೋಗುವುದಿಲ್ಲ ಯಾಕೆ?

ಕತ್ತೆ ಭಡವಾ! ಯಾಕೊ ನಿನಗೆ ಅದೆಲ್ಲಾ? ನಮ್ಮ ಹಿರಿಯರೆಲ್ಲಾ ಹೀಗಂತ ನಂಬಿಸಿದ್ದಾರೆ. ಅವರಿಗೆಲ್ಲಾ ಅವಮಾನ ಮಾಡ್ಬೇಕೇನೋ? ಈಗಿನ ಹುಡುಗರಿಗೆಲ್ಲಾ ದೊಡ್ಡೋರು ಮಾತು ಅಂದರೆ ಯಾಕಿಷ್ಟು ನಿರ್ಲಕ್ಷ್ಯ?

**



## ಧನ್ಯವಾದಗಳು

ನಿಮಗೆಲ್ಲ ತಿಳಿದಿರುವಂತೆ ಅಪರಂಜಿಯನ್ನು ಸದೃಢಗೊಳಿಸಲು ನಮ್ಮ ಅನೇಕ ಸದಸ್ಯರು ತಮ್ಮ ಸಹಾಯ ಹಸ್ತವನ್ನು ಚಾಚುತ್ತಿದ್ದಾರೆ. ಇದೀಗ ಶ್ರೀಮತಿ ಬಿ.ಕೆ. ಲಲಿತ, ಸದಸ್ಯತ್ವದ ಸಂಖ್ಯೆ 3958L (ನಂ.103, 6ನೇ ಅಡ್ಡ ರಸ್ತೆ, ಬೃಂದಾವನ ಬಡಾವಣೆ, 2ನೇ ಹಂತ, ಮೈಸೂರು) ಇವರು ಪತ್ರಿಕೆಗೂ, ಬರಹಗಾರರಿಗೂ, ಸಂಪಾದಕರುಗಳಿಗೂ, ಓದುಗರಿಗೂ ಶುಭ ಹಾರೈಸಿ ಹತ್ತು ಸಾವಿರ ರೂಪಾಯಿಗಳನ್ನು (ರೂ. 10,000/-) ಕೆನರಾ ಬ್ಯಾಂಕ್, ಚೆಕ್ ಸಂಖ್ಯೆ 835800 ಮುಖಾಂತರ ಅಪರಂಜಿಯ ಮಡಿಲಿಗೆ ತುಂಬು ಹೃದಯದಿಂದ ಸಮರ್ಪಿಸಿದ್ದಾರೆ. ಶ್ರೀಮತಿ ಬಿ.ಕೆ. ಲಲಿತ ಅವರಿಗೆ ಕೊರವಂಜಿ ಅಪರಂಜಿ ಟ್ರಸ್ಟ್ ಮತ್ತು ಸಂಪಾದಕ ಮಂಡಳಿ ಆಭಾರಿಯಾಗಿದೆ. ಇಂತಹ ಮನಸ್ಸುಗಳು, ಹೃದಯಗಳು, ತನ್ನ ಮಡಿಲಿಗೆ ಇನ್ನಷ್ಟು ಹರಿದು ಬರಲಿ ಎಂದು ಅಪರಂಜಿ ಆಶಿಸುತ್ತಾಳೆ.

# ಲಾಂಗ್ ಲಿವ್ ಯಾಲಂಟಮ್ಮ

**- ಸಿ.ಆರ್. ಸತ್ಯ**

ನಮ್ಮೂರ ಸಾಹುಕಾರ್ ಅಣ್ಣಪ್ಪನವರು ಭಾರೀ ಶ್ರೀಮಂತರು ಅಂತ ಎಲ್ಲರಿಗೂ ಗೊತ್ತಿರೋ ವಿಷಯವೇ. ಆದರೂ ನಮ್ಮ ಊರಿನಲ್ಲಿ ಇತ್ತೀಚೆಗೆ ಅವರು ಖರ್ಚು ಮಾಡ್ತಿರೋ ವೈಖರಿ ನೋಡ್ತೂ ಅಂದರೆ, ತುಂಬಾ ಆಶ್ಚರ್ಯವಾಗುತ್ತೆ. ಕಳೆದ ವರುಷ ಇಪ್ಪತ್ತೊಂದು ದಿನಗಳ ಅಮೇರಿಕ ಪ್ರವಾಸವನ್ನ ಅವರೂ ಅವರ ಶ್ರೀಮತಿಯವರೂ ಮಾಡಿಕೊಂಡು ಬಂದಮೇಲೆ ಅವರು ಲಕ್ಷಾಂತರ ರೂಪಾಯಿಗಳನ್ನು ಬ್ಯಾಂಕ್‌ನಿಂದ ಹೊರಕ್ಕೆ ಎಳದು, ನಮ್ಮ ಊರಿಗೆ ಒಂದು ಹೊಸ ರಸ್ತೆ ಮಾಡಿಸಿದರು. ಆಮೇಲೆ, ರಸ್ತೆ ಕೊನೆಗೆ ಒಂದು ಚಿಕ್ಕ ದೇವಸ್ಥಾನವನ್ನು ಕಟ್ಟಿಸಿ ಅದರಲ್ಲಿ ಈ ವರುಷ ಫೆಬ್ರವರಿ 14ರಂದು ಪ್ರೇಮದೇವಿ ಯಾಲಂಟಮ್ಮನ ವಿಗ್ರಹವನ್ನು ಅತ್ಯಂತ ವಿಧಿವತ್ತಾಗಿ ಪ್ರತಿಷ್ಠಾಪಿಸಿದರು. ದೇವಿಗೆ ಪ್ರತಿ ನಿತ್ಯ ಪೂಜೆ ಹಾಗೂ ಪ್ರತಿ ವರುಷ ಫೆಬ್ರವರಿ 14ರಂದು ಸಂಭ್ರಮದಿಂದ ಉತ್ಸವ ಮಾಡಿ ಹಾಗೂ ತೇರು ಎಳೆಸಲು ಒಂದು ಲಕ್ಷ ರೂಪಾಯಿ ದತ್ತಿ ನಿಧಿಯನ್ನೂ ಇಟ್ಟು ಅಣ್ಣಪ್ಪನವರೂ ಅವರ ಶ್ರೀಮತಿಯವರೂ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ - ಎಂದೂ ಅವರಿಬ್ಬರಲ್ಲಿ ನಗು ಮುಖವನ್ನೇ ನಾವು ನೋಡುವುದು! ಅವರ ಬಳಿ ಯಾರು ಹೋದರೂ ಸರಿ, ಎಂದೂ ಪ್ರೀತಿಯಿಂದಿರಿ ಅಂತಲೇ ಅವರು ಹರಸುತ್ತಾರೆ.

> **ಯಾಲಂಟಮ್ಮ ಯಾರೂ ಅಂತ ಗೊತ್ತಿಲ್ಲದಿದ್ದರೂ ಅವಳಿಗೆ ದಿನ ನಿತ್ಯ ಪೂಜೆ !**

ಈ ಕಾರಣಗಳಿಂದಾಗಿ ನಮಗೆಲ್ಲರಿಗೂ ಅಣ್ಣಪ್ಪ ದಂಪತಿಗಳೆಂದರೆ ತುಂಬಾ ಗೌರವ ಮತ್ತು ಅಭಿಮಾನವಿದೆ. ಅವರ ಇರುವಿಕೆಯಿಂದ ನಮ್ಮ ಊರಿನಲ್ಲಿ ಶಾಂತಿ, ಸಮಾಧಾನವೂ ಇವೆ ಅಂದರೆ ತಪ್ಪಾಗಲಾರದು. ಆದರೆ, ಇಂತಹ ಹಾರ್ದಿಕ ಪರಿಸರಕ್ಕೆ ಇತ್ತೀಚೆಗೆ ಊರಿನಲ್ಲಿ ಬುದ್ಧಿವಂತ ಅಂತ ಅನ್ನಿಸಿಕೊಂಡಿರೋ ಶಂಕ್ರಪ್ಪ ಕಳಂಕವಾಗಿಬಿಟ್ಟ. ನಾವೆಲ್ಲಾ ಒಂದು ದಿನ ಒಟ್ಟಿಗೆ ಕೂತಿದ್ದಾಗ, ''ನಾನು ನಿಮ್ಮನ್ನ ಒಂದು ಪ್ರಶ್ನೆ ಕೇಳ್ತೀನಿ, ನಿಮ್ಮ ಮಂಡ ತಲೆಗಳಿಗೆ ಏನಾದರೂ ಉತ್ತರ ಸಿಗುತ್ತಾ ನೋಡೋಣ'' ಅಂದ.

''ಕೇಳು'' ಅಂದ್ವಿ.

''ಈ ಯಾಲಂಟಮ್ಮ ಯಾರೂ..?'' ಅಂತ ಕೇಳಿದ.

ನಾವೆಲ್ಲ ಬೆಚ್ಚಿಬಿದ್ವಿ. ''ಏನೋ, ಹೀಗೆ ಕೇಳ್ತೀಯಾ? ಅವಳು ಪ್ರೇಮ ದೇವತೆ ಅಲ್ವೇನೋ? ಊರ ದೇವತೆ ಅಂತ ಸ್ವಲ್ಪಾನೂ ಗೌರವ ಬೇಡ್ವೇನೋ ನಿನಗೆ?'' ಅಂತ ನಾವು ಕೂಗಿದ್ವಿ.

''ನನ್ನ ಪ್ರಶ್ನೆಗೆ ಉತ್ತರ ಕೊಡ್ರೋ. ಯಾಲಂಟಮ್ಮ ಯಾರೂ..?'' ಅಂತ ಮತ್ತೆ ಅದೇ ಪ್ರಶ್ನೆ ಕೇಳಿದ.

''ದೇವತೆ ಅಂದ್ರೆ ದೇವತೆ ಅಷ್ಟೇ!'' ಅಂತ ನಮ್ಮಕಡೆ ಬುದ್ಧಿವಂತ ಉತ್ತರ ಕೊಟ್ಟ.

''ಎಲ್ಲಿಂದ ಬಂದಿದಾಳೆ ಈ ದೇವತೆ?'' ಇದು ಶಂಕ್ರಪ್ಪನ ಎರಡನೇ ಸವಾಲು.

''ದೇವರು ದಿಂಡರುಗಳ ಅಡ್ರೆಸ್ ನಮಗೆ ಹೇಗೋ ತಿಳೀಬೇಕು?'' ಅಂತ ನಮ್ಮ ಬುದ್ಧಿವಂತ ಮರುಸವಾಲ್ ಹಾಕಿದ.

''ಅಂದರೆ, ಈ ಯಾಲಂಟಮ್ಮ ಮಹಾಭಾರತದಿಂದಲೋ, ರಾಮಾಯಣದಿಂದಲೋ, ಭಾಗವತದಿಂದಲೋ, ಎಲ್ಲಿಂದಲೋ ಇಳಿದು ಬಂದಿರಬೇಕು. ಇಲ್ಲದಿದ್ದರೆ, ಅವಳು ಹೇಗೆ ದೇವತೆ ಆಗ್ತಾಳೆ..?'' ಅಂತ ಶಂಕ್ರಪ್ಪ ನಮ್ಮನ್ನ ಕೆದಕಿದ.

''ಗೊತ್ತಿಲ್ಲ'' ಅಂದ್ವಿ.

''ಅಥವಾ, ನಮ್ಮ ಹಳ್ಳಿ ಕಥೆಗಳಲ್ಲೋ, ಹರಿಕಥೆಗಳಲ್ಲೋ ಅವಳ ಹೆಸರು ಕೇಳಿದೀರೇನೋ..?''

''ಕೇಳಿಲ್ಲ''

''ಯಾರಾದರೂ ಹೋಗ್ಲಿ, ಅಣ್ಣಪ್ಪನವರ ಹತ್ತಿರ ಹೋಗಿ ವಿಚಾರಿಸಿದ್ರಾ?''

''ಅಷ್ಟು ಭಕ್ತಿಯಿಂದ ಅವರು ಪೂಜೆ ಪುನಸ್ಕಾರ ನಡಿಸ್ತಿದಾರೆ, ಅವರ ಹತ್ತಿರ ಹೋಗಿ ಈ ಯಾಲಂಟಮ್ಮ ಯಾರು ಅಂತ ನಾವು ಕೇಳೋಕ್ಕೆ ಆಗುತ್ಯೆ?'' ಅಂತ ನಾವು ತಲೆ ಕೆರ್ಕೊಂಡ್ವಿ.

''ಬನ್ನಿ, ನಾನು ಕೇಳ್ತೀನಿ'' ಅಂತ ಶಂಕ್ರಪ್ಪ ಮೇಲಕ್ಕೆ ಎದ್ದ.

''ಅಯ್ಯೋ, ನಾವು ಬರಲ್ಲಪ್ಪ'' ಅಂತ ನಾವು ಹಿಂದೇಟು ಹೊಡೆದ್ವಿ.

''ಹೆದರಬೇಡ್ರೋ ಪೆಕ್ರಗಳಿರಾ. ನಾನು ಈ ಪ್ರಶ್ನೆ ಕೇಳೋದು ಅಣ್ಣಪ್ಪನವರನ್ನಲ್ಲ. ದೇವಸ್ಥಾನದ ಪೂಜಾರಿಯನ್ನ'' ಅಂದ.

''ಹಾಗಾದ್ರೆ ಬರ್ತೀವಿ'' ಅಂತ ಅವನ ಜೊತೆಗೆ ಹೊರಟ್ವಿ.

ಪೂಜಾರಿಗಳು ನಮ್ಮನ್ನು ನೋಡಿ, ಸಂತೋಷದಿಂದ ಯಾಲಂಟಮ್ಮನಿಗೆ ಮಂಗಳಾರತಿ ಮಾಡಿ ನಮಗೆ ಪ್ರಸಾದ ಕೊಟ್ರು. ''ಅಪರೂಪಕ್ಕೆ ಬಂದಿದೀರಿ. ಯಾಲಂಟಮ್ಮನ ಆಶೀರ್ವಾದ ಎಂದಿಗೂ ನಿಮ್ಮ ಮೇಲಿರಲಿ'' ಅಂತ ಹರಿಸಿದರು.

ಶಂಕ್ರಪ್ಪ ''ಈ ಯಾಲಂಟಮ್ಮ ಅಂದರೆ ಯಾವ ದೇವತೆ ಹೆಸರು ಆಚಾರ್ರೇ?'' ಅಂತ ಕೇಳೇಬಿಟ್ಟ.

ಪೂಜಾರಿಗಳು ಒಂದು ನಿಮಿಷ ತಬ್ಬಿಬ್ಬಾಗಿ ನಿಂತರು.

''ನನಗೆ ಗೊತ್ತಿಲ್ಲಪ್ಪ'' ಅಂತ ಅಂದರು.

''ಆಚಾರ್ರೇ, ಯಾಲಂಟಮ್ಮ ಯಾರೂ ಅಂತ ಗೊತ್ತಿಲ್ಲದೆ, ಅವಳಿಗೆ ದಿನ ನಿತ್ಯ ಪೂಜೆ ಮಾಡ್ತಾ ಇದೀರಲ್ಲಾ!'' ಅಂತ ಶಂಕ್ರಪ್ಪ ತನ್ನ ಪ್ರಶ್ನೆ ಹಾಕಿದ.

‘‘ಹೆಸರು ಮುಖ್ಯವಲ್ಲಪ್ಪ. ಒಟ್ಟಿನಲ್ಲಿ ದೈವೀ ಸ್ವರೂಪ ಅಂತ ಭಾವಿಸಿಕೊಂಡು ಪೂಜೆ ಮಾಡೋದೇ ನಮ್ಮ ಧರ್ಮ’’ ಅಂತ ಪೂಜಾರಿ ಮಾತು ತೇಲಿಸಿದರು.

ಶಂಕ್ರಪ್ಪ ಸ್ವಲ್ಪ ಮೊಂಡ. ‘‘ಹಾಗಾದರೆ ನಾನು ಸಾಹುಕಾರ್ ಅಣ್ಣಪ್ಪನವರನ್ನೇ ಕೇಳ್ತೀನಿ’’ ಅಂತ ಅವರ ಮನೆಗೇ ನುಗ್ಗಿದ.

ನಾವೆಲ್ಲಾ ಹೆದರಿಕೊಂಡು ಸ್ವಲ್ಪ ದೂರದಿಂದಲೇ ಮಾತು ಕೇಳಿಸಿಕೊಳ್ಳೋಕ್ಕೆ ನಿಂತ್ವಿ.

ಅಣ್ಣಪ್ಪನವರು ದೂರದಿಂದಲೇ ಶಂಕ್ರಪ್ಪನ್ನ ನೋಡಿ, ‘‘ಈಗ ತಾನೇ ನಮ್ಮ ಸೀನಣ್ಣ ಫೋನ್‌ನಲ್ಲಿ ನೀನು ಹೇಗಿದಿಯಾ ಅಂತ ಕೇಳ್ತಿದ್ದ. ಏನು ಸಮಾಚಾರ?’’ ಅಂತ ಕೇಳಿದ್ರು. ‘‘ನಮಗೆಲ್ಲ ಈ ಯಾಲಂಟಮ್ಮ ಯಾರು ಅಂತ ಗೊತ್ತಾಗ್ತಿಲ್ಲ. ಅದಕ್ಕೆ ನಿಮ್ಮನ್ನೇ ಕೇಳೋಣಾ ಅಂತ ಬಂದ್ವಿ. ಇಂತಹ ಪ್ರಶ್ನೆ ಕೇಳಿದ್ದಕ್ಕೆ ಏನೂ ತಿಳ್ಕೋಬೇಡಿ ಯಜಮಾನ್ರೇ’’ ಅಂತ ಶಂಕ್ರಪ್ಪ ಕೇಳೇಬಿಟ್ಟ.

ಅದಕ್ಕೆ ಅಣ್ಣಪ್ಪನವ್ರು ನಗುತ್ತಾ, ‘‘ಓ, ಅದೇ? ಅದನ್ನ ಹೇಳೋಕ್ಕೇ ನನಗೆ ಆಗೋಲ್ಲಾಪ್ಪ. ಸೀನಣ್ಣ ಹೆಂಗಿದ್ರೂ ಫೋನ್‌ನಲ್ಲಿ ಇದಾನೆ. ಅವ್ನನ್ನೇ ಕೇಳಿಬಿಡು’’ ಅಂತ ಫೋನ್‌ನ ಶಂಕ್ರಪ್ಪನ ಕೈಗೇ ಕೊಟ್ರು. ಸೀನಣ್ಣ ಅವರ ಮಗರಾಯ. ಅಮೇರಿಕಾದಲ್ಲಿಂದ ಮಾತಾಡ್ತಾ ಇದ್ದ. ಅವನು ಹೇಳಿದ್ದು ಹೀಗೆ: ‘‘ನೋಡು ಶಂಕ್ರೂ, ನನ್ನ ಅಪ್ಪ ಅಮ್ಮ ಅಮೇರಿಕಾ ನೋಡ್ತೀವಿ ಅಂತ ಇಲ್ಲಿಗೆ ಬಂದಿದ್ದು ನಿಮಗೆಲ್ಲ ಗೊತ್ತೇ ಇದೆ. ಇಲ್ಲಿ ಫೆಬ್ರವರಿ 14ನೇ ತಾರೀಖು ವ್ಯಾಲಂಟೀನ್ ಡೇ ಅಂತ ಬಹಳ ಉತ್ಸಾಹದಿಂದ ಆಚರಿಸ್ತಾರೆ. ಅವತ್ತು ಪ್ರೇಮಿಗಳು ಒಬ್ಬರಿಗೊಬ್ಬರಿಗೆ, ತಮ್ಮ ಪ್ರೀತೀನಾ ತೋರಿಸಿಕೊಳ್ಳೋಕ್ಕೆ ಅಂತ ಬಣ್ಣ ಬಣ್ಣದ ಹೂವು ಕೊಡ್ತಾರೆ, ಬಟ್ಟೆ, ಉಡುಗೊರೆ ಕೊಡ್ತಾರೆ, ರೋಡ್ನಲ್ಲೆ ಎಲ್ಲರಿಗೂ ಕಾಣೋ ಹಾಗೆ ಮುತ್ತೂ ಕೊಡ್ತಾರೆ – ಇದನ್ನೆಲ್ಲ ನನ್ನ ಅಪ್ಪ ನೋಡಿ, ನನ್ನ ಅಮ್ಮಂಗೆ, ನಮ್ಮ ಊರಿನಲ್ಲೂ ಹೀಗೆ ಇದ್ದರೆ ಎಷ್ಟು ಚೆನ್ನಾಗಿರುತ್ತೆ ಅಲ್ವ? ಅಂತ ಕೇಳಿದ್ರು. ನನ್ನ ಅಮ್ಮ – ನಮ್ಮೂರಿನಲ್ಲಿ ಇವರ ತರಹ ರೋಡಿನಲ್ಲೆಲ್ಲಾ ಮುತ್ತು ಕೊಡೋಕ್ಕೆ ಆಗುತ್ಯೆ? ಆದರೂ ಈ ವ್ಯಾಲಂಟಮ್ಮ ಯಾರೋ ಏನೋ ರೀ. ಅವಳನ್ನ ನೆನಸಿಕೊಂಡು, ಜನ ಎಲ್ಲ ಸಂತೋಷವಾಗಿ ಇರೋದಂತೂ ನಿಜ. ಅವಳ ಹೆಸರಿನಲ್ಲಾದರೂ, ನಮ್ಮ ಊರಿನಲ್ಲಿ ಒಂದು ದೇವಸ್ಥಾನವನ್ನಾದರೂ ಕಟ್ಟಿಸಿಬಿಡಿ. ಅವಳ ಹೆಸರು ಹೇಳ್ಕೊಂಡು ಪ್ರತಿ ವರುಷ ಇವತ್ತಿನ ದಿನ ಎಲ್ಲರೂ ರೋಡಿನಲ್ಲಿ ಇಲ್ಲದಿದ್ದರೂ, ಮನೆ ಒಳಗಡೇನಾದ್ರೂ ಪ್ರೀತಿನಾದರೂ ಮಾಡ್ಕೊಳ್ಳಲಿ ಇನ್ನೇನಾದ್ರೂ ಮಾಡ್ಕೊಳ್ಳಲಿ – ಅಂತ ಹೇಳಿದರು. ಅದಕ್ಕೆ ನನ್ನ ಅಪ್ಪ ನಮ್ಮೂರಿನವರಿಗೆ ಅವಳ ಹೆಸರು ಹೇಳೋದು ಕಷ್ಟ ಆಗಲ್ವೇನೇ? ಅಂತ ಕೇಳಿದ್ರು. ಅದಕ್ಕೆ ನನ್ನ ಅಮ್ಮ – ನೀವು ಹೇಳೋದೂ ಸರೀನೇನೆ. ಒಂದು ಕೆಲಸ ಮಾಡಿ. ಅವಳಿಗೆ ಯಾಲಂಟಮ್ಮ ಅಂತ ಹೆಸರಿಡಿ, ಎಲ್ಲರಿಗೂ ಅವಳ ಹೆಸರು ಹೇಳೋಕ್ಕೆ ಸುಲಭವೇ ಆಗುತ್ತೆ – ಅಂತ ಸಲಹೆ ನೀಡಿದ್ರು. ನನ್ನ ಅಪ್ಪ – ಹಂಗೇ ಆಗ್ಲಿ, ಊರಿಗೆ ಹೋದ ತಕ್ಷಣ ಯಾಲಂಟಮ್ಮನ ಗುಡಿ ಕಟ್ಟಿಸ್ತೀನಿ. ನಮ್ಮೂರ ಜನ ವರ್ಷಕ್ಕೆ ಒಂದು ದಿನದಲ್ಲಾದರೂ ಸಂತೋಷವಾಗಿರಲಿ. ಹುಡುಗರೂ, ಹುಡುಗೀರೂ ರೋಡಿಗೆ ಇಳಿಯಲೀ, ಏನಂತೆ. ನನಗೂನು ಈ ವರ್ಷ ಎಲೆಕ್ಷನ್ನಲ್ಲಿ ವೋಟ್ ಸಿಗೋದೂ ಗ್ಯಾರ್‌ಂಟಿ ಆಗುತ್ತೆ – ಅಂತ ಊರಿಗೆ ಬಂದು ಇಷ್ಟೆಲ್ಲ ಮಾಡಿದ್ದು.’’

ಈ ವರದಿ ಕೇಳಿ, ಶಂಕ್ರಂಗೆ ಸಮಾಧಾನ ಆಯಿತು. ನಮ್ಮ ಗುಂಪಿನಲ್ಲಿ ಇದ್ದ ಬ್ರಹ್ಮಚಾರಿಗಳಿಗಂತೂ ಇನ್ನೂ ಸಂತೋಷವಾಯಿತು. ಫೆಬ್ರವರಿ ಬಂದರೆ, 14ನೇ ತಾರೀಖು ಊರಿನಲ್ಲಿ ಇರೋ ಹುಡುಗೀರಿಗೆಲ್ಲ ಕಣಗಲೆ ಹೂವುಕೊಡಬಹುದು ಅಂತ!

ಯಾಲಂಟಮ್ಮನಿಗೆ ಜಯವಾಗಲೀ ಅಂತ ಎಲ್ಲರೂ ಒಕ್ಕೊರಳಿನಿಂದ ಕೂಗಿದ್ವಿ. ಆಗ ಅಣ್ಣಪ್ಪನವರು, ''ಏಯ್, ಅಣ್ಣಪ್ಪನವರಿಗೂ ಜಯವಾಗಲೀ ಅಂತ ಕೂಗೋದೂ ಮರೀಬೇಡ್ರೋ. ಎಲೆಕ್ಷನ್ ಹತ್ತಿರ ಬಂತ್ರೋ'' ಅಂತ ಜ್ಞಾಪಿಸಿದ್ರು. ಸರಿ ನಮ್ಮದೇನು ಕೊಳ್ಳೆಹೋಗಬೇಕು? ''ಅಣ್ಣಪ್ಪನವರಿಗೂ ಜಯವಾಗಲೀ'' ಅಂತ ಅರಚಿಕೊಂಡು, ಮನೆ ಕಡೆ ಹೊರಟ್ವಿ.

**

---

## ಓದುಗ ಮಿತ್ರರೇ

ನಿಮ್ಮ ಅಪರಂಜಿ ಪತ್ರಿಕೆಗೆ ಮೂವತ್ತು ದಾಟಿ ಮೂವತ್ತೊಂದರ ಹೊಸ್ತಿಲಗೆ ಕಾಲಿಟ್ಟಿದ್ದಾಳೆ. ಈ ಸಂಭ್ರಮವನ್ನು, ಸಡಗರವನ್ನು ನಿಮ್ಮೊಂದಿಗೆ ಹಂಚಿಕೊಳ್ಳದಿದ್ದರೆ ಹೇಗೆ? ಅದಕ್ಕಾಗಿ 6-04-2014 ಭಾನುವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಒಂದು ಸಮಾರಂಭ ಏರ್ಪಾಡು ಮಾಡಿದ್ದೇವೆ. ಅವತ್ತು ಬೇರೆ ಏನೂ ಕೆಲಸ ಇಟ್ಟುಕೊಳ್ಳದೇ ಬಿಡುವಾಗಿದ್ದು ನಮ್ಮೊಂದಿಗೆ ಇದ್ದು ಅಪರಂಜಿಯ ಮೂವತ್ತರ ಸಂಭ್ರಮವನ್ನು ಆನಂದಿಸಿ. ಮಿಕ್ಕ ವಿವರಗಳನ್ನು ಮುಂದಿನ ಅಪರಂಜಿ ಸಂಚಿಕೆಯಲ್ಲಿ ಕೊಡುತ್ತೇವೆ. ನೀವು ತಾರೀಖು ಗುರುತು ಹಾಕಿಕೊಂಡಿರಲಿ ಎಂದು ಈ ಮಾಹಿತಿ.

## ಓದುಗರಲ್ಲಿ ಒಂದು ಕಳಕಳಿಯ ವಿನಂತಿ

ಪ್ರತ್ಯೇಕವಾಗಿ ಆಫೀಸು, ಸಿಬ್ಬಂದಿಯಿಲ್ಲದ ಪತ್ರಿಕೆ ಅಪರಂಜಿ. ನಮ್ಮ ವ್ಯವಹಾರವೆಲ್ಲಾ ಉಪಸಂಪಾದಕರ ಮನೆಯಿಂದಲೇ ಉಚಿತವಾಗಿ ನಡೆಯುತ್ತಿದೆ. ಉಪಸಂಪಾದಕರ ಈ ಔದಾರ್ಯಪೂರ್ಣ ಹಾಸ್ಯಾಭಿಮಾನಕ್ಕೆ ಅವರ ಮನೆಯವರೆಲ್ಲರ ಸಹಕಾರವಿರುವುದು ನಿಜ. ಮನೆಯವರ ಈ ಸೌಜನ್ಯದ ಎಲ್ಲೆಯನ್ನು ಮೀರದಿರುವ ಉದ್ದೇಶದಿಂದ ಈ ಸಲಹೆಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ. ನೀವು ನಮ್ಮನ್ನು ಸಂಪರ್ಕಿಸಬೇಕಾದಾಗ ಹಲವು ನಿಯಮಗಳನ್ನು ಪಾಲಿಸಿರೆಂದು ನಮ್ಮ ವಿನಮ್ರ ಮನವಿ. 1. ಭಾನುವಾರ ಬಿಟ್ಟು ಮಿಕ್ಕ ದಿನಗಳಲ್ಲಿ ಬೆಳಗ್ಗೆ 9 ಘಂಟೆಗೆ ಮುಂಚೆ ಸಂಪರ್ಕಿಸಿ. 2. ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ ಉಪಸಂಪಾದಕರನ್ನು ಮಾತ್ರ ಕೇಳಿ ಅವರೊಂದಿಗೇ ವ್ಯವಹರಿಸಿ. ಸಹಜವಾಗಿ ಇತರರಿಗೆ ಈ ಭಾರ ಹೊರಿಸುವುದು ಅನಗತ್ಯ. 3. ಆದಷ್ಟುಮಟ್ಟಿಗೆ ಎಸ್.ಎಮ್.ಎಸ್. (9886061400/ 9845825061 - ಎಸ್.ಎಮ್.ಎಸ್.ಗೆ ಮಾತ್ರ) ಬಳಸಿ ಅಥವಾ ಪೋಸ್ಟ್‌ಕಾರ್ಡ್ ಕಳಿಸಿ ನಿಮ್ಮ ಅಭಿಪ್ರಾಯ ತಿಳಿಸಿ. ಈ ವಿಷಯದಲ್ಲಿ ತಮ್ಮ ಸಹಕಾರವನ್ನು ಅಪರಂಜಿ ಅಪೇಕ್ಷಿಸುತ್ತದೆ.

# ಒಂದು ನಿಮಿಷ

**- ಎಸ್.ಎನ್. ಸುಬ್ಬರಾವ್ (ರಾಜಾಜಿನಗರ)**

‘‘**ಒಂ**ದು ನಿಮಿಷ’’ದ ಮಹತ್ತನ್ನು ನಾವು ನಿಜವಾಗಿ ತಿಳಿದುಕೊಂಡಿದ್ದೇವಾ? ಪ್ರಾಯಶಃ ಕ್ರೀಡಾಪಟುಗಳು, ಅಥ್ಲೆಟಿಕ್ಸ್‌ನಲ್ಲಿ ನೂರು ಮೀಟರ್, ಇನ್ನೂ ಮೀಟರ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದವರು (ಶ್ರೀಮತಿ ಪಿ.ಟಿ. ಉಷಾ, ಶ್ರೀ ಮಿಲ್ಖಾಸಿಂಗ್ ಮುಂತಾದವರಿಗೆ) ಒಂದು ನಿಮಿಷವೂ ಕಾಲು ನಿಮಿಷವೂ ಮಹತ್ತರವಾದದು.

ಮಕ್ಕಳನ್ನು, ನೀವು ಕರೀರಿ, ‘‘ಒಂದು ನಿಮಿಷ ಬಂದೆ ಎನ್ನುತ್ತಾರೆ’’ ಅದು ಒಂದು ಘಂಟೆಯಾದರೂ ಆಗಬಹುದು.

**ಸಮಯದ ವಿಷಯದಲ್ಲಿ ಎಲ್ಲರೂ ನಿಮಿಷಾಂಬರಧಾರಿಗಳೇ**

ನಿಮ್ಮ ಸ್ನೇಹಿತರಿಗೋ, ನೆಂಟರಿಗೋ ಫೋನ್ ಮಾಡಿ. ಅವರು ಹಲೋ ಅಂತಾರೆ - ನಿಮ್ಮ ಪರಿಚಯ ಮಾಡಿಕೊಳ್ಳಿ - ಅಲ್ಲಿಂದ ಉತ್ತರ ಬರುತ್ತೆ. ‘‘ಓ ನೀವಾ, ಒಂದ್ನಿಮಿಷ ಬಿಟ್ಕೊಂಡು ನಾನೇ ಫೋನ್ ಮಾಡ್ತೀನಿ’’ ಅಂತಾರೆ, 10 ನಿಮಿಷವಾದ್ರೂ ಮಾಡೋಲ್ಲ.

ಯಾರೋ ಗಣ್ಯರು ಸತ್ತಾಗ ಶ್ರದ್ಧಾಂಜಲಿ ಕಾರ್ಯಕ್ರಮ - ‘‘ದಿವಂಗತರ ಸ್ಮರಣಗಾಗಿ ದಯವಿಟ್ಟು ಒಂದು ನಿಮಿಷ ಎಲ್ಲರೂ ಎದ್ದು ನಿಂತು ಮೌನ ಆಚರಿಸೋಣ’’ ಎಂದು ನಿರ್ವಾಹಕರು ಹೇಳುತ್ತಾರೆ - ನೀವು ಎದ್ದು ನಿಲ್ಲುತ್ತೀರ, ಆ ಒಂದು ನಿಮಿಷ ಕಳೆಯೋದೆ ಇಲ್ಲ. ಒಂದು ಗಂಟೆಯಂತೆ ಭಾಸವಾಗುತ್ತೆ - ತಲೆ ತಿರುಗುತ್ತೆ - ಬೀಳುತ್ತೇನೇನೂ ಅನ್ನಿಸುತ್ತೆ. ಅವರು ಧನ್ಯವಾದಗಳು ಎಂದಾಗ ದಬಕ್ಕನೆ ಕುಳಿತುಕೊಳ್ಳುತ್ತೀರ.

ನೀವು ಆಫೀಸ್‌ನಿಂದ ಮನೆಗೆ ಬರ್ತೀರ - ತಲೆನೋವು ಕಾಣಿಸಿಕೊಂಡಾಗ ನಿಮ್ಮ ಮಡದಿಗೆ ‘‘ಯಾಕೋ ತಲೆನೋವು, ಒಂದು ಲೋಟ ಕಾಫಿ ಕೊಡ್ತೀಯ’’ ಅಂತೀರ. ಅವರು ‘‘ಒಂದ್ನಿಮಿಷ’’ ಅಂತಾರೆ. ಅದು ಐದಾವರೂ ಆಗಬಹುದು, ಹತ್ತು ನಿಮಿಷವಾದರೂ ಆಗಬಹುದು, ನಿಮ್ಮ ತಲೆ ಶೂಲೆ ಇನ್ನೂ ಜಾಸ್ತಿಯಾಗುತ್ತೆ - ಏನೂ ಮಾಡೋ ಹಾಗಿಲ್ಲ.

ನಿಮಗೆ ಹಸಿವು - ಊಟದ ಸಮಯ ಆಗಿದೆ. ‘‘ಊಟಕ್ಕೆ ಹಾಕ್ತೀಯ’’ ಅಂತ ಕೇಳ್ತೀರ - ‘‘ಒಂದ್ನಿಮಿಷ ಸಾರಿಗೆ ಒಗ್ಗರಣೆ ಹಾಕ್ತಿದೀನಿ - ಆಯ್ತು, ಅದು ಐದು ನಿಮಿಷವಾದ್ರೂ ಆಗಬಹುದು, ಅರ್ಧಗಂಟೆಯಾದರೂ ಆಗಬಹುದು, ಆದರೆ ನೀವು ಕೋಪ ಮಾಡ್ಕೊಳೋ ಹಾಗಿಲ್ಲ.

ಇನ್ನು ಸಾರ್ವಜನಿಕ ‘ಸುಲಭ್’ ‘ನಿರ್ಮಲ’ ಶೌಚಾಲಯಗಳು, ನಿಮಗೋ ಮಲವಿಸರ್ಜನೆಯ ಒತ್ತಡ - ಒಳಗೆ ಯಾರೋ ಇದ್ದಾರೆ - ನೀವು ಬಾಗಿಲು ಬಡೀತೀರ, ಒಳಗಿಂದ ಉತ್ತರ ‘‘ಒಂದ್ನಿಮಿಷ’’ ಬಂದೆ - ನಿಮಗೆ ತಡ್ಕೊಳಕ್ಕಾಗ್ತಿಲ್ಲ - ಅವರು ಬರೋಹಾಗಿಲ್ಲ - ಒಂದ್ನಿಮಿಷ ಒಂದು ಗಂಟೆ ಆಗ್ಬಹುದು. ನಿಮ್ಮ ಪರಿಸ್ಥಿತಿ - ಪಾಪ!.

ನೀವು ಬಿ.ಎಂ.ಟಿ.ಸಿ. ಬಸ್ನಲ್ಲಿ ಸ್ಟಾಂಡ್‌ನಲ್ಲೇ ಹತ್ತಿದ್ದೀರಿ. ನಿಮಗೆ ಬೇಗ ಹೋಗ್ಬೇಕು - ಡ್ರೈವರ್ ಸೀಟಿನಲ್ಲಿ ಕೂತಿದ್ದಾರೆ - ನೀವು ಹೇಳ್ತೀರಾ! ‘‘ಬೇಗ ಹೊರಡೀಪ್ಪಾ ಟೈಮ್ ಆಗಿದೆ’’

ಒಂದ್ನಿಮಿಷ ಸಾರ್ ಕಂಡಕ್ಟರ್ ಎಂಟ್ರಿ ಹಾಕಿಸ್ಕೊಂಡ್ ಬಂದ್ಬಿಡ್ತಾರೆ, ಹೊರಟು ಬಿಡ್ತೀನಿ'' – ಕಂಡಕ್ಟರ್ ಆರಾಮಾಗಿ, ಹತ್ತು ನಿಮಿಷವಾದ್ಮೇಲೆ ಬರ್ತಾರೆ ''ರೈ'' ಅಂತ ವಿಷಲ್ ಹಾಕ್ತಾರೆ – ನಿಮಗ್ಗೆ ಕೋಪ, ರೋಷ, ಅಸಹಾಯಕತೆ, ಬಸ್ನಲ್ಲಿ ತಡವಾಗುತ್ತೆ – ಆಟೋದಲ್ಲಿ ಹೋಗೋಕೆ ಸಾಕಷ್ಟು ಹಣ ಇಲ್ಲ.

ಭಾನುವಾರ – ನಿಮಗೆ ಆವೊತ್ತೇ ಕಟಿಂಗ್ ಮಾಡಿಕೊಳ್ಳಲು ಸಮಯ. ನಿಮ್ಮ ಆಚಾರ ಪರಿಪಾಲನೆಯಂತೆ ಬೆಳಿಗ್ಗೆ ಕ್ಷೌರಪದ್ಧತಿ ಸೆಲೂನ್‌ನಲ್ಲಿ ಕ್ಷೌರಕಾರ್ಯ ನಡೀತಿದೆ. ಮೊದಲೇ ಇಬ್ಬರು ಬಂದು ಕೂತಿದ್ದಾರೆ. ನೀವು ಕೇಳ್ತೀರಿ, ''ಏನಪ್ಪ ಟೈಮ್ ಆಗುತ್ತೇ, ಸ್ವಲ್ಪ ಅರ್ಜೆಂಟ್ ಇತ್ತು''

ಇಬ್ಬರು ಕೂತಿರೋದು ನೀವು ನೋಡಿದ್ದೀರ.

ಅವ್ನು ಹೇಳ್ತಾನೆ ''ಒಂದ್ನಿಮಿಷ ಸಾರ್ ಆ ಇಬ್ಬರಿಗೆ ಮುಗಿಸಿ ನಮ್ಮನ್ನು ಕರೀತೀನಿ, ಕೂತ್ಕೊಳ್ಳಿ ಸಾರ್''. ನೀವು ಕ್ಷೌರ ಮಾಡಿಸ್ಕೊಳ್ಳಲೇಬೇಕು. ಇಲ್ಲವಾದರೆ ಮತ್ತೊಂದು ವಾರಕ್ಕೆ ಕಾಯ್ಬೇಕು – ಪ್ರಜಾವಾಣಿನೋ ಅಥವಾ ಇನ್ನಾವುದೋ ಪತ್ರಿಕೆ ಮೇಲೆ ಕಣ್ಣು ಹಾಯಿಸ್ತೀರಾ – ಚಿತ್ರಪಟಗಳು, ನಿಮ್ಮ ಪ್ರೀತಿಯ ನಾಯಕ, ನಾಯಿಕೆಯರು, ಅವರ ವಿಶೇಷ ಬಣ್ಣಗಳು ಮನಸ್ಸಿಗೆ ಆಹ್ಲಾದವನ್ನು ತರುತ್ತೆ, ನೀವು ಸಮಯವನ್ನೇ ಮರೆಯುತ್ತೀರಿ. ''ಬನ್ನಿ ಸಾರ್, ಅವರದ್ದು ಆಯ್ತು ಅಂತ ಹೇಳ್ತಾನೆ – ನೀವು ಗಡಿಬಿಡಿಯಿಂದ ಏಳ್ತೀರಿ'' – 'ಒಂದ್ನಿಮಿಷ ಮರೀತೀರಿ''.

ನೀವು ನಿಮ್ಮ ಸ್ನೇಹಿತರ ಮದುವೆಗೆ ಛತ್ರಕ್ಕೆ ಹೋದ್ರಿ – ತಿಂಡಿ ತಿಂದ್ರಿ – ಮದುವೆ ಮಂಟಪದಲ್ಲಿ ಕೂತ್ರಿ – ನಿಮ್ಮ ಸ್ನೇಹಿತ ಮದುವಣಗಿತ್ತಿ – ಒಳ್ಳೆ ಜೋಡಿ – ಮದುವೇ ಮನೆ ಸಂತೆಯಂತೆ ಎಲ್ಲರೂ ಮಾತ್ನಾಡ್ತಿದ್ದಾರೆ – ಮಂತ್ರ, ಗಿಂತ್ರ ಏನೂ ಕೇಳಿಸ್ತಿಲ್ಲ – ಮಂಗಳವಾದ್ಯದವರು ಗಟ್ಟಿಮೇಳ ನುಡಿಸ್ತಾರೆ, ಡಬ–ಡಬ–ಡಬ ಶಬ್ದ. ತಾಳಿ ಕಟ್ಟಿಯಾಯ್ತು. ಎಲ್ಲರೂ ವೇದಿಕೆ ಹತ್ತ್ತಾರೆ. ಶಾಸ್ತ್ರಿಗಳು ''ಒಂದ್ನಿಮಿಷ ತಡೀರಿ, ಇಬ್ಬರನ್ನೂ ಮುಂದೆ ಕೂಡಿಸ್ತೀನಿ, ಇನ್ನೂ ಶಾಸ್ತ್ರ ಇವೆ.

ಆ ಒಂದ್ನಿಮಿಷ ಮೂವತ್ತು ನಿಮಿಷ ಆಗುತ್ತೆ, ಎಲ್ಲರೂ ಉಡುಗೊರೆ ಕೊಟ್ಟು ಹೇಳಿ, ಊಟದ ಮನೆಗೆ ನುಗ್ತಾರೆ – ನೀವು ಲೇಟ್ ಮಾಡ್ಕೊಂಡ್ರಿ, ಎರಡನೇ ಪಂಕ್ತಿಗೆ ಹೋಗ್‌ಬೇಕು. ನಿಮ್ಮ ಸ್ನೇಹಿತ ಯಾರೋ ಸಿಕ್ತಾರೆ, ಅವರು ಏನ್ಸಮಾಚಾರ, ನೀವು ಸಿಗೋದೇ ಅಪರೂಪ. ಒಂದ್ನಿಮಿಷ ಕೂತ್ಕೊಳ್ಳಿ ಅಂತಾರೆ. ನಿಮಗೆ ಬೇಡವಾದರೂ ಕೂತ್ಕೋತೀರ ಉಭಯಕುಶಲೋಪರಿ ನಡೆಯುತ್ತೆ. ನಿಮ್ಮ ಮನಸ್ಸು ಊಟದ ಮನೆ ಕಡೆಗೇ – ಎಲ್ರೂ ತಾಂಬೂಲ ಮೇಯ್ಕೊಂಡು, ಫಲತಾಂಬೂಲದ ಚೀಲಕೆನಲ್ಲಿ ಹಿಡ್ಕೊಂಡು ಬರ್ತೀದ್ದಾರೆ. ನಿಮ್ಮ ಸ್ನೇಹಿತರಿಗೆ ಬೈ ಹೇಳಿ ಊಟದ ಮನೇಕಡೆ ಹೋದ್ರಿ – ಆಗ್ಲೇ ಅಲ್ಲಿ ಸುಮಾರು ಸಂಖ್ಯೆ ಜನ ಊಟ ಮಾಡ್ತಿದ್ದಾರೆ, ಊಟ ಮುಗಿಸ್ತಿದ್ದಾರೆ – ''ನಿಂತಿರೋ ಜನ ಅವರ್ನೇ ನೋಡ್ತಿದ್ದಾರೆ. ''ಗೇಟ್ ಕ್ರ್ಯಾಶ್'' ಊಟ ಮಾಡ್ತಿರೋರು ಸೂಕ್ಷ್ಮಮತಿಗಳಾದ್ರೆ, ಅರ್ಧಕ್ಕೇ ಬಿಟ್ಟು ಏಳ್ತಾರೆ

ಬ್ಯಾಡೇಂದ್ರೆ ಊಟ ಮಾಡ್ತಾನೇ ಇರ್ತಾರೆ – ವ್ಯವಸ್ಥಾಪಕರೂ, ಮೇಲ್ವಿಚಾರಕ್ಕೆ ನಿಂತಿರೋರು ''ಒಂದ್ನಿಮಿಷ'' ಎಲೆತೆಕ್ಸಿ, ಟೇಬಲ್ ಕ್ಲೀನ್ ಮಾಡಿಸ್ತೀವಿ'' ಅಂತಾರೆ, ಆದ್ರೆ ನಿಂತಿರೋರು ಕೇಳ್ತರಾ? ಓಡಿ ಹೋಗಿ ಊಟ ಮಾಡ್ತೀರೋರ ಹಿಂದೇನೆ ನಿಂತ್ಕೋತಾರೆ – ಎಂಜಲು ಎಲೆ ಹಿಂದೇ ಕುರ್ಚಿಯಲ್ಲೇ ಕೂತ್ಕೋತಾರೆ.

ಸೋಮೇಶ್ವರ ಶತಕ ಜ್ಞಾಪಕಕ್ಕೆ ಬರುತ್ತೆ. ''ಎಂಜಲಾ ಎಂಜಲ್ ಎಂಬುವರ ನುಡಿ ಎಂಜಲಲ್ಲವೆ, ಹಾಲು ಕರುವಿನ ಎಂಜಲಲ್ಲವೆ, ವಾರಿ ಜಲಚರ ಎಂಜಲಲ್ಲವೆ''

ಅಷ್ಟೊತ್ತಿಗೆ ನಿಮಗೆ ಜಾಗ ಸಿಗೊಲ್ಲ – ''ಸಾರಿ ಸಾರ್ ಒಂದ್ನಿಮಿಷ, ಈ ಪಂಕ್ತಿ ಮುಗಿದ ತಕ್ಷಣ ಎಲೆ ಹಾಕಿಸ್ತೀವಿ – ನೀವು ಮನೆಗೆ ಹೋಗೋ ಹಾಗಿಲ್ಲ – ಅಡಿಗೆ ಮಾಡಿಲ್ಲ, ಮುದ್ದೆ ಊಟ, 'ಒಂದ್ನಿಮಿಷ ಬರೋದೇ ಇಲ್ಲ'.

ಯಾವುದೊ ಶಾಲೆಯ ವಾರ್ಷಿಕೋತ್ಸವ – ನಿಮ್ಮ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾತ್ರ ವಹಿಸಿದ್ದಾರೆ – ರಾಜಕೀಯ ವ್ಯಕ್ತಿಯೊಬ್ಬರು ಮುಖ್ಯ ಅತಿಥಿಗಳು 'ಗೋವಿಂದ' – ಶಾಲೆಯ ವ್ಯವಸ್ಥಾಪಕರು ಮೈಕಾಸುರನ ಬಳಿ ಬಂದು ಹೇಳ್ತಾರೆ, ''ಗಣ್ಯ ಅತಿಥಿಗಳು'' ''ಒಂದ್ನಿಮಿಷದಲ್ಲಿ ಬರ್ತಾರೆ'' ಆ ಒಂದ್ನಿಮಿಷ ಬರೋದೇ ಇಲ್ಲ – ಮುಂದೆ ಆಗೋದನ್ನು ನೀವೇ ಊಹಿಸಿಕೊಳ್ಳಿ. ಒಂದು ಗಂಟೆ ತಡವಾಗಿ ಬಂದ ಗಣ್ಯರು ಒಂದು ಗಂಟೆ ಮಾತ್ನಾಡ್ತಾರೆ. ಹುಡುಗರು ಸುಸ್ತಾಗಿ ಮೇಕ್ ಅಪ್ ಮಾಡ್ಕೊಂಡು ನಿದ್ದೆಗಣ್ಣಿನಲ್ಲಿ ಕೂತಿದ್ದಾರೆ. ನೀವು ಮನೆಗೆ ಹೋಗೋ ಹಾಗಿಲ್ಲ. ಆಗ ನಿಮಗೆ ಕೇಳಿಸುತ್ತೆ ''ಗಣ್ಯರು ಹೇಳುತ್ತಾರೆ. ಪ್ರೀತಿಯ ಬಂಧುಗಳೇ, ಸಾಂಸ್ಕೃತಿಕ ಕಾರ್ಯಕ್ರಮ ಇದೆ, ನನ್ನ ಮಾತನ್ನು ಮುಗಿಸ್ತೀನಿ'' ಈಗ ನೀವೇ ಹೇಳಿ ಈ ''ಒಂದ್ನಿಮಿಷ'' ಎಂಬ ಪದವನ್ನು ನಿಘಂಟಿನಿಂದ್ಲೇ ತೆಗೆದುಹಾಕಬಹುದಾಂತ.

**

## ಪ್ರಚಾರದ ಹೊಣೆ ಪ್ರಿಯಾಂಕಾ ಗಾಂಧಿಗೆ...?

ಸೊಸೆಯಂತಿರುವ ಸೋನಿಯ,
ಮಗನಂತಿರುವ ರಾಹುಲ್
ಆಯಿತು. ಈಗ ನೀವು
ಮೊಮ್ಮಗಳಂತಿರುವ ಪ್ರಿಯಾಂಕ
ಗಾಂಧಿಯ ಶಾಲಿಗೂ
ಬೀಳ್ತೀರಾ ಚುನಾವಣೆಯಲ್ಲಿ
ನಿಲ್ಲೋದಕ್ಕೆ.........,,,,



# ಸಾಯೋ ಸೀನ್‌ಗೆ ಜೀವ ತುಂಬೋದು....

**- ಕೃಷ್ಣ ಸುಬ್ಬರಾವ್**

ಇತ್ತೀಚೆಗೆ ಕೆ.ಎಚ್. ಕಲಾಸೌಧದಲ್ಲಿ ನೋಡಿದ ನಿಮಿತ್ತ ನಾಟಕ ಕಾಡಲು ಶುರುವಾಯಿತು. ಅನ್ನಿಸಿದ್ದನ್ನು ಹೊರಹಾಕಲಾಗದೇ ಇರುವುದು ಸಾಧ್ಯವಾಗದಿದ್ದಕ್ಕೆ ಈ ಸ್ಪಂದನ. ನಾಟಕದ ವಸ್ತು ಎಲ್ಲರಿಗೂ ಎಲ್ಲಾ ಕಾಲದಲ್ಲೂ ಚಿರಪರಿಚಿತವಾದದ್ದೆ. 'ನಿಮಿತ್ತ' ನಾಟಕವೂ ಒಂದು ಸಾವಿನ ಸುತ್ತ ಹೆಣೆದ ಕಥೆ. ವಿಭಿನ್ನವಾಗಿರುವುದು ಟ್ರೀಟ್‌ಮೆಂಟ್‌ನಲ್ಲಿ ಸಾವನ್ನು ಎದುರಿಸಲು ಸಂಬಂಧಪಟ್ಟವರೆಲ್ಲ ಸಿದ್ಧರಾಗಿದ್ದರು ಎಂದರೆ ಸುಳ್ಳಾಗುತ್ತೆ. ಸಾವನ್ನು ಕಾಯುತ್ತಿದ್ದರೆಂಬುದು ವಾಸ್ತವ. ಹಾಗಂತ ವ್ಯಕ್ತಿಯ ಸಾವಿನಿಂದ ಆಸ್ತಿ ಬರುವುದೆಂಬ ಆಸೆಯಿಂದಲ್ಲ. ಇಲ್ಲಿ ಹಣ ಮುಖ್ಯವಾಗುವುದೇ ಇಲ್ಲ. ಸೂಪರ್ ಸ್ಪೆಶಾಲಿಟಿ ಹಾಸ್ಪಿಟಲ್ ವೆಚ್ಚವನ್ನು ಭರಿಸಲಾಗದೆ ರೋಗಿಯ ಸಾವನ್ನು ಎದುರು ನೋಡುತ್ತಲೂ ಇಲ್ಲ. ಇನ್ನೂ ಮೂರು ನಾಲ್ಕು ತಿಂಗಳು ಇದ್ದರೂ ವಿಮೆ ಸೌಲಭ್ಯವಿದೆ ಎಂಬ ಧೈರ್ಯವಿದೆ. ಆಶ್ಚರ್ಯ ವೆಂದರೆ ಆಸ್ಪತ್ರೆಯವರೇ ಐ.ಸಿ.ಯೂ. ಅಗತ್ಯವಿಲ್ಲವೆಂದರೂ ಹೆಂಡತಿಯೇ ಐ.ಸಿ.ಯೂ. ನಲ್ಲಿರಲಿ ಎಂದು ಕೇಳಿಕೊಳ್ಳುತ್ತಾಳೆ. ಕಾರಣ ಗಂಡನ ಸ್ನೇಹಿತರುಗಳು ಬಂದು ಹಣ ಕೇಳುವುದು ಫೋರ್ಜರಿ ಮಾಡಿಸುವುದು .... ಅಂತಹ ಕೆಲಸ ಮಾಡಿಸಬಹುದೆಂಬ ಹೆದರಿಕೆ.

**ಸಾವಿನಲ್ಲೂ ವೈವಿಧ್ಯತೆ ಸಾಧ್ಯವೇ**

ಅತ್ಯಂತ ಗಂಭೀರವಾದ ನಾಟಕದಲ್ಲಿ ಆಗಾಗ್ಗೆ 'ನಗು' ಹೊಮ್ಮುವುದು ಆಶ್ಚರ್ಯ. ಅದಕ್ಕೆ ಸೇತುರಾಮ್‌ರವರ ವಿಡಂಬನೆಯ ತೀವ್ರತೆ, ಬೇಜವಾಬ್ದಾರಿ ಮನುಷ್ಯ ಪರವಾಗಿಲ್ಲ ಸಹಿಸಿಕೊಳ್ಳಬಹುದು ಆದರೆ ಸ್ವಂತದವರಿಗೆ ಮೋಸ ಮಾಡಿ ಹಣ ವಸೂಲಿ ಮಾಡುವ ವ್ಯಕ್ತಿಯನ್ನು ಮೂವತ್ತೆರಡು ವರ್ಷ ಸಹಿಸಿದ ಹೆಂಡತಿಗೆ ಗಂಡ ಸತ್ತರೆ ಮುಕ್ತಿ. ಮಕ್ಕಳಿಗೆ ಅದು ಕಾರ್ಯವೆನಿಸಿದರೂ ಅಪ್ಪನ ಮಾತಿನಲ್ಲಿ ಸ್ವಲ್ಪವೂ ಪಶ್ಚಾತ್ತಾಪದ ಛಾಯೆಯಿಲ್ಲದ್ದನ್ನು ಕಂಡಾಗ ತಮ್ಮ ತಾಯಿಯ ನಿಲುವು ಸರಿಯೆಂದು ಮತ್ತೆ ವಿದೇಶಕ್ಕೆ ಹೊರಟು ನಿಲ್ಲುತ್ತಾರೆ.

ಸಂಕಟಕ್ಕೆ ಸಿಕ್ಕಿಹಾಕಿಕೊಂಡಾಗಲೆಲ್ಲಾ ಸಹಾಯಕ್ಕೆ ನಿಂತ ತಾಯಿ ಹಾಗೂ ಹೆಂಡತಿ ಇರುವಾಗ ತಾನೇಕೆ ಕಷ್ಟಪಡಬೇಕು. ದುಡ್ಡು ಬೇಕಾದಾಗಲೆಲ್ಲಾ ಚೆಕ್ ಸೈನ್ ಮಾಡುವ ಹೆಂಡತಿ ಇರುವಾಗ 'ತಾನು ಹೀಗೆ ಇರುವುದೇ ಸರಿ' ಎಂಬ ಸಮರ್ಥನೆ. ವಂಚನೆ ಬಗ್ಗೆ ಸ್ವಲ್ಪವೂ ಅಳುಕಿಲ್ಲ, ಪಶ್ಚಾತ್ತಾಪವೂ ಇಲ್ಲ. ಅದೂ ಸಾಯುವ ಗಳಿಗೆಯಲ್ಲೂ, ತನ್ನ ವೈಯುಕ್ತಿಕ ದೈಹಿಕ ಅಗತ್ಯಗಳಿಗೂ ನಡೆದಾಡಲು, ದೇಹಬಾಧೆ ತೀರಿಸಲು ನೆರವಾಗಲು ಸಹಾಯಕರಿರುವಾಗ ತನಗೇನು ಕಮ್ಮಿಯೆಂದು ಖುಷಿ ಪಡುವ ರೋಗಿ. ಫ್ಯಾಮಿಲಿ ಬಗ್ಗೆ ಸಾಕಷ್ಟು ವಿವರಣೆ ತಿಳಿದುಕೊಂಡ. ಹಾಗೆ ಅವನ ಪತ್ನಿಯಿಂದಲೇ ''ಸಾಯಲು ಬಿಟ್ಟುಬಿಡಿ'' ಎಂಬ ಮನದಾಸೆ ಕೇಳಿದ ಮೇಲೂ ತನ್ನ ವೃತ್ತಿಧರ್ಮ ಹಾಗೂ ಹಣ ಸಂಪಾದನೆಯ ಅನಿವಾರ್ಯದಿಂದ ಆದಷ್ಟು ದಿನ ಲೈಫ್ ಸಪೋರ್ಟ್‌ನಿಂದ ಸಾವನ್ನು ಮುಂದೂಡುವ ಹವಣಿಕೆಯಲ್ಲಿರುತ್ತಾನೆ. ಆದರೆ ಪಶ್ಚಾತ್ತಾಪವೇ ಇಲ್ಲದ ವ್ಯಕ್ತಿ ಬದುಕುಳಿಯಲು ಅನರ್ಹನೆಂಬ ತೀರ್ಮಾನಕ್ಕೆ ಬಂದು ಉಸಿರಾಡಲು ವೆಂಟಿಲೇಟರ್ ಸಹಾಯವನ್ನು

ಕಾಡಿಬೇಡಿದರೂ ಕೊಡದೆ, ವೈದ್ಯನಾಗುವುದಕ್ಕಿಂತ ಮನುಷ್ಯನಾಗುವುದು ಮುಖ್ಯವೆಂದು, ರೋಗಿಯನ್ನು ಸಾಯಲು ಬಿಡುತ್ತಾನೆ. ಸಾವು ಜೀವನದ ಕ್ಲೈಮ್ಯಾಕ್ಸ್ ನಿಮಿತ್ತದಲ್ಲೂ ಅದೇ. ಆದರೆ ವಿಭಿನ್ನ. ಸಾಯುವ ಸೀನ್‌ಗೆ ನಿಜವಾಗಿಯೂ ಜೀವತುಂಬಿದ್ದು ಸಿಹಿಕಹಿ ಚಂದ್ರು. ಅಭಿನಯವೆಂದು ನಂಬುವುದು ಕಷ್ಟವಾಗುವಷ್ಟು ನೈಜವಾಗಿತ್ತು.

ಅತ್ತೆ ಸೊಸೆಯರ ಪರಸ್ಪರ ಘೋಷಣೆ ಜಗಳದ ನಡುವೆಯೂ ಅತ್ತೆ ಕಾಫಿ ಕೇಳುವುದು, ಊಟ ಕೇಳುವುದು ಕೈಲಾಸಂ ನಾಟಕಗಳ ನೆನಪು ತರಿಸುವಂತಿತ್ತು. ಹೆಂಡತಿಯ ತಾಳಿ ಮಾರುವುದು ಕುಲದ ಕಸುಬು. ಮಾವ ಮಾಡಿದ್ದನ್ನೇ ತನ್ನ ಗಂಡನು ಮಾಡಿದನೆಂದು ಹೇಳುವಾಗ ಅತ್ತೆಯನ್ನು ಛೇಡಿಸುತ್ತಾ ''ಗಂಡ ಸತ್ಮೇಲೆ ಮತ್ತೊಂದು ತಾಳಿ ಮಾಡಿಸ್ಕೊಂಡರಂತೆ'' ಎಂದು ಸೊಸೆ ಕೇಳುತ್ತಾಳೆ. ಆಗ ಅತ್ತೆ ''ಹೌದೆ, ಗಂಡ ಸತ್ತ ಮೇಲೆ ಹತ್ತನೇ ದಿನ ತಾಳಿ ಕೀಳಲು ಬಂದಾಗ ತಾಳಿ ಇಲ್ಲದಿದ್ದರೆ ಎಲ್ಲ ಕಥೆ ಎಲ್ಲರ ಮುಂದೆ ಹೇಳಬೇಕಲ್ಲ, ಸಂಸಾರದ ಗೌರವ ಕಾಪಾಡಲು ಅವರು ಸತ್ತ ಒಂಬತ್ತನೇ ದಿನ ಒಂದು ಹೊಸ ತಾಳಿ ತರಿಸಿಕೊಂಡೆ ಗುಟ್ಟಾಗಿ...'' ಹೇಳುತ್ತಾಳೆ. ಅನೇಕ ಸಂಪ್ರದಾಯಗಳ ಸುಳಿಯಲ್ಲಿ ಸಿಕ್ಕಿ ಒದ್ದಾಡುವ ಚಿತ್ರಣವಿದೆ.

ದಯಾ ಮರಣದ ಬಗ್ಗೆ ಒಂದು ಮಾತು ಬರುತ್ತೆ. ಅದನ್ನು ಕೇಳುವವರು ರೋಗಿಯನ್ನು ನೋಡಿಕೊಳ್ಳಬೇಕಾದವರು ಅಥವಾ ನೋಡಿಕೊಳ್ಳುವವರು. ಆದರೆ ದಯಾ ಮರಣದ ಭಿಕ್ಷೆ ಕೇಳುವ ಹಕ್ಕು ರೋಗಿಯದಲ್ಲವೆ? ಅವನನ್ನು ಕೇಳಿಬಿಟ್ಟರೆ ಅವನು ಬೇಡವೆಂದು ಬಿಟ್ಟರೆ ಎಂಬ ಭಯ!

ಸಾವೇ ಜೀವನದ ಕ್ಲೈಮ್ಯಾಕ್ಸ್ 'ನಿಮಿತ್ತ'ದಲ್ಲಿ ಸಾವೇ ಕ್ಲೈಮ್ಯಾಕ್ಸ್. ಆದರೂ ವಿಭಿನ್ನವಾಗಿದೆ. ರೋಗಿಯನ್ನು ಸಾಯಲು ಬಿಡುವುದು ಅದನ್ನು ಸೂಪರ್‌ವೈಸ್ ಮಾಡುವುದು ಕೊಲೆಯಂತೆ ಕಾಣುವುದಿಲ್ಲ. ಅದು ಇಲ್ಲಿ ಅನುಕಂಪ. ರೋಗಿಯ ಮೇಲಿನ ಅನುಕಂಪವಲ್ಲ. ರೋಗಿಯ ಪರಿವಾರದ ಮೇಲಿನ ಅನುಕಂಪದಿಂದ ದಯಾ ಮರಣವೂ ಅಲ್ಲ. ಏಕೆಂದರೆ ರೋಗಿಯ ಮುಕ್ತಿ ಉದ್ದೇಶವಲ್ಲ. ವೆಂಟಿಲೇಟರ್ ಕೊಡದೆ 'ಸಾಯಲಿ' ಅನ್ನಿಸುವಷ್ಟು ಕಠಿಣನಾಗುತ್ತಾನೆ ಡಾಕ್ಟರ್. ಇಲ್ಲಿ ವೈದ್ಯನಾಗುವುದಕ್ಕಿಂತ ಮನುಷ್ಯನಾಗುವುದು ಮುಖ್ಯವಾಗುತ್ತೆ. ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾಗಲಿ ಪಶ್ಚಾತ್ತಾಪವಾಗಲಿ ಇಲ್ಲದ ವ್ಯಕ್ತಿ ಬದುಕಲು ಅರ್ಹನಲ್ಲ ಎಂಬ ತೀರ್ಮಾನಕ್ಕೆ ಬರುತ್ತಾನೆ ವೈದ್ಯ. 'ಇದು ಅತಿಯಾಯಿತು' ಎನಿಸದೆ ಇದ್ದುದು ದಕ್ಷ ನಿರೂಪಣೆಯಿಂದಾಗಿ.

ಸೇತುರಾಮ್ ಎಂದರೆ ಬಿಗಿಯಾದ ಸಂಭಾಷಣೆ ಮತ್ತು ಪರಿಣಾಮಕಾರಿ ಎಡಿಟಿಂಗ್. ಮಾತಿನ ಮಂಟಪದಲ್ಲೇ ಎಲ್ಲ ನಡೆಯಬೇಕು ನಿರ್ದೇಶಕರಿಗೆ ಬಗ್ಗುವ ರೀತಿಯಲ್ಲಿ ಅತ್ತೆಯಾಗಿ ಸುಧಾ ಪ್ರಸನ್ನ, ಸೊಸೆಯಾಗಿ ದೀಪ, ಶ್ವೇತ ಶ್ರೀನಿವಾಸನ್ ನೆರವು ನೀಡಿದ್ದಾರೆ. ಗಂಭೀರ ನಾಟಕದಲ್ಲಿ (90 ನಿಮಿಷ) ಪ್ರಶಂಸೆಯ ಚಪ್ಪಾಳೆ ಸದ್ದು ಹಾಗೂ ಅಲ್ಲಲ್ಲಿ 'ನಗು' ಬಿಟ್ಟರೆ ಥಿಯೇಟರ್‌ನಲ್ಲಿ ಪಿನ್‌ಡ್ರಾಪ್ ಸೈಲೆನ್ಸ್. ಬಹುಶಃ ಇಂತಹ ನಾಟಕಕ್ಕೆ ಪ್ರತ್ಯೇಕ ಪ್ರೇಕ್ಷಕರ ವರ್ಗವಿದೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಹೊರಗೆ ಬಂದಾಗ ತಿಳಿದ ವಿಷಯ ಬಂದ ಪ್ರೇಕ್ಷಕರಲ್ಲಿ ಎರಡು ಮೂರನೇ ಬಾರಿಗೆ ಮನೆಯವರನ್ನು, ಸ್ನೇಹಿತರನ್ನು ಕರೆದುಕೊಂಡು ಬರುವ ನೆಪದಲ್ಲಿ ಬಂದದ್ದು.

**

# ಉಪ್ಪಿಟ್ಟಿನ ರುಚಿ

**- ಬೇಲೂರು ರಾಮಮೂರ್ತಿ**

**ತುಂ**ಬಾ ದಿವಸ ಆಗಿತ್ತಲ್ಲ ಅಂತ ಸುಮ ಅವತ್ತು ಉಪ್ಪಿಟ್ಟು ಕೆದಕಿದಳು. ಅಂದ್ರೆ ಪಾಪ ಬೋಳು ಉಪ್ಪಿಟ್ಟೇನು ಮಾಡಿರಲಿಲ್ಲ. ಅದಕ್ಕೆ ಅವರೇಕಾಳು, ತುಂಬಾ ಕಾಯಿ ತುರಿ ಹಾಕಿ ಚೆನ್ನಾಗೇ ಮಾಡಿದ್ದಳು ಅಥವಾ ಚೆನ್ನಾಗೇ ಮಾಡಿದ್ದೀನಿ ಅಂತ ಅವಳಂದುಕೊಂಡಿದ್ದಳು. ಅದೇಕೋ ಉಪ್ಪಿಟ್ಟು ಎನ್ನುವ ಪದ ಕೊಡುವಷ್ಟು ಅಲರ್ಜಿ ಇನ್ಯಾವ ಪದವೂ ಕೊಡೋದಿಲ್ಲ. ಅದಕ್ಕೇ ಕೆಲವು ಮನೆಗಳಲ್ಲಿ ಉಪ್ಪಿಟ್ಟು ಎನ್ನದೆ ಖಾರಾಬಾತ್, ಅವರೇಕಾಳು ಬಾತ್ ಅಂತೆಲ್ಲಾ ಕರೀತಾರೆ. ಹೆಸರು ಏನಾದರೂ ವಸ್ತು ಅದೇ, ರುಚಿ ಅದೇ. ಅವತ್ತು ಆಫೀಸಿಂದ ರಾಜೀವ ಬಂದ ಮೇಲೆ ಸುಮ ತಟ್ಟೇಲಿ ಉಪ್ಪಿಟ್ಟು ಹಾಕಿ ತಂದುಕೊಟ್ಟಳು. ಇದೇನೇ ನಿನಗೆ ಇನ್ನೇನೂ ತಿಂಡಿ ಮಾಡೋಕೆ ತೋಚಲಿಲ್ವಾ ಅಂತ ಅವನ ಮುಖಭಾವವೇ ಹೇಳುತ್ತಿತ್ತು. ಒಂದು ನಿಟ್ಟುಸಿರುಬಿಟ್ಟು ಒಂದು ತುತ್ತು ಉಪ್ಪಿಟ್ಟು ಬಾಯಿಗೆ ಹಾಕಿಕೊಂಡು ಥತ್, ನಾನು ದರ್ಶಿನೀಗೆ ಹೋಗಿ ಮಸಾಲೆದೋಸೆ ತಿಂದುಕೊಂಡುಬರ್ತೀನಿ ಅಂತ ಎದ್ದ. ಸುಮಗೆ ಸಿಟ್ಟು ಬಂತು. ಇದ್ಯಾಕ್ರೀ ಹೀಗನ್ತೀರ. ಎಷ್ಟು ಚೆನ್ನಾಗಿ ಮಾಡಿದೀನಿ. ಇದನ್ನು ಟಿವಿ ವಾಹಿನಿಯವರಿಗೆ ಕೊಟ್ಟಿದ್ದರೆ ಯಾಪಾಟಿ ಹೊಗಳುತ್ತಿದ್ದರೋ ಅಥವಾ ನಮ್ಮ ಯಾರಾದರೂ ರಾಜಕಾರಿಣಿಗೆ ಕೊಟ್ಟಿದ್ದರೆ ಹೇಗೆ ಹೊಗಳುತ್ತಿದ್ದರು ಗೊತ್ತಾ ಅಂತ ತುಟಿಯೂದಿಸಿದಳು. ರಾಜೀವ ಆಚೆ ಹೋದ ಮೇಲೆ ಹೌದು ನಾನೊಂದು ತರಹ ಹೊಸ ರುಚಿಯ ಉಪ್ಪಿಟ್ಟು ಮಾಡಿದೀನಿ ಅಂತ ಟಿವಿ ಸ್ಟೇಷನ್ನಿನವರಿಗೆ ಹೇಳಿದರೆ ಹೇಗಿರುತ್ತೆ ಅಂತ ಆಲೋಚಿಸುತ್ತಾ ಕೂತಳು. ಸ್ವಲ್ಪ ಹೊತ್ತಾದ ಮೇಲೆ ಬೋರು ಅಂತ ಟಿವಿ ಸ್ವಿಚ್ ಆನ್ ಮಾಡಿದಳು. ಹಾಗೇ ಅದರೊಳಗೆ ಮುಳುಗಿಹೋದಳು. ಆಗಲೇ ಬರಬೇಕಾ ಅವಳ ಉಪ್ಪಿಟ್ಟಿನ ರುಚಿಯ ಪ್ರೋಗ್ರಾಂ.

**ಯಾರ್ಯಾರ ಬಾಯಿಗೋ ಉಪ್ಪಿಟ್ಟು ಸಿಕ್ಕರೆ**

ಟಿವಿ ಆ್ಯಂಕರ್ ವೀಕ್ಷಕರೇ ನಿಮಗೆ ಒಂದು ಹೊಸ ರುಚಿಯ ಪರಿಚಯ ಮಾಡಿಕೊಡ್ತೇವೆ. ಮೀನಾಕ್ಷಿ ನಗರದ ಸುಮ ಎನ್ನುವವರು ಇವತ್ತು ಅವರ ಮನೇಲಿ ಹೊಸ ರೀತಿಯ ಉಪ್ಪಿಟ್ಟು ಮಾಡಿದ್ದಾರೆ. ಮೀನಾಕ್ಷಿ ನಗರದ ಸುಮ ಇವತ್ತೇ ಮೊದಲಲ್ಲ ಉಪ್ಪಿಟ್ಟು ಮಾಡಿರೋದು, ಆದರೂ ಮೀನಾಕ್ಷಿ ನಗರದ ಸುಮ ಉಪ್ಪಿಟ್ಟು ಮಾಡಿದ್ದಾರೆ ಎಂದ್ರೆ ಅದೊಂದು ಸುದ್ದಿಯೇ ಇರಬೇಕು. ಈಗ ಮೀನಾಕ್ಷಿ ನಗರದ ಸುಮ ಅವರನ್ನು ನೇರ ಸಂಪರ್ಕ ಮಾಡೋಣ, ಹೇಳಿ ಮೀನಾಕ್ಷಿ ನಗರದ ಸುಮ ಅವರೇ ನೀವು ಈ ರೀತಿಯ ಉಪ್ಪಿಟ್ಟು ಮಾಡೋಕೆ ಏನು ಕಾರಣ, ಇದನ್ನು ಯಾರಿಗೆ ಮೊದಲು ತಿನ್ನಿಸಬೇಕು ಅಂತ ಅಂದುಕೊಂಡಿದ್ರಿ, ನಿಮ್ಮ ಯಜಮಾನರು ತಿಂದರಾ, ತಿಂದು ಮನೇಲೇ ಇದಾರೋ ಇಲ್ಲಾ ಆಸ್ಪತ್ರೆಗೆ ಹೋಗಿದಾರೋ, ಹಲೋ ಮೀನಾಕ್ಷಿ ನಗರದ ಸುಮ ಅವರೇ ನನ್ನ ಮಾತು ಕೇಳ್ತಾ ಇದೆಯಾ, ನಾನು ಟಿವಿ ಸ್ಟೇಷನ್ನಿನಿಂದ

ಮಾತಾಡ್ತಾ ಇರೋದು, ನಿಮ್ಮ ಉಪ್ಪಿಟ್ಟಿನ ಬಗ್ಗೆ ನಮ್ಮ ವೀಕ್ಷಕರಿಗೆ ಪರಿಚಯ ಮಾಡಿಕೊಡೋಣ ಅಂತ ನಮ್ಮ ಆಸೆ. ಹೇಳಿ ಸುಮ ಅವರೇ, ಉಪ್ಪಿಟ್ಟು ಹೇಗೆ ಮಾಡಿದಿರಿ, ಹಲೋ ಸುಮ ಅವರೇ ನನ್ನ ಮಾತು ಕೇಳಿಸ್ತಾ ಇದಿಯಾ, ನಿಮ್ಮ ಮನೆ ಟಿವಿ ವಾಲ್ಯೂಮ್ ಸ್ವಲ್ಪ ಕಡಿಮೆ ಮಾಡಿ, ಈಗ ಕೇಳಿಸ್ತಾ ಇದಿಯಾ, ನಮ್ಮ ಲಕ್ಷಾಂತರ ವೀಕ್ಷಕರು ನಿಮ್ಮ ಮಾತಿಗಾಗಿ ಕಾಯ್ತಾ ಇದಾರೆ, ಸಾರಿ ವೀಕ್ಷಕರೇ ಲೈನ್ ಕಟ್ ಆಯ್ತು, ಮೀನಾಕ್ಷಿ ನಗರದ ಸುಮ ಎನ್ನುವವರು ಇವತ್ತು ಒಂದು ಹೊಸ ರೀತಿಯ ಉಪ್ಪಿಟ್ಟು ಮಾಡಿ ಅದರ ಬಗೆಗೆ ನಮ್ಮ ವೀಕ್ಷಕರಿಗೆ ತಿಳಿಸೋ ಆಸೆ ವ್ಯಕ್ತಪಡಿಸಿದ್ದರು, ಹಾಗಾಗಿ ಇವತ್ತು ನಾವು ಮೀನಾಕ್ಷಿ ನಗರದ ಸುಮ ಎನ್ನುವವರನ್ನು ನಮ್ಮೊಂದಿಗೆ ನೇರ ಸಂಪರ್ಕದಲ್ಲಿರಲು ಕೇಳಿಕೊಂಡಿದ್ದೆವು. ಅವರೂ ನೇರ ಸಂಪರ್ಕದಲ್ಲಿದ್ದರು. ಆದರೂ ಮೀನಾಕ್ಷಿ ನಗರದ ಸುಮ ನಮ್ಮೊಂದಿಗೆ ಮಾತಾಡೋ ಹೊತ್ತಿಗೆ ಲೈನ್ ಕಟ್ ಆಯಿತು. ನಾವು ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ನಿಮಗೆ ಆ ಕುರಿತು ಮಾಹಿತಿ ಒದಗಿಸುತ್ತೇವೆ. ಈಗ ನಮ್ಮ ಪ್ರತಿನಿಧಿ ಶ್ರೀನಿವಾಸ್ ಸುಮ ಮನೆ ಹತ್ತಿರನೇ ಇದಾರೆ. ಹಲೋ ಶ್ರೀನಿವಾಸ್, ನನ್ನ ಧ್ವನಿ ಕೇಳಿಸ್ತಾ ಇದಿಯಾ, ನೀವು ಮೀನಾಕ್ಷಿ ನಗರದ ಸುಮ ಎನ್ನುವವರ ಮನೆ ಹತ್ತಿರ ಇದೀರ, ಅವರು ಒಂದು ಹೊಸ ರೀತಿಯ ಉಪ್ಪಿಟ್ಟು ಮಾಡಿದಾರಂತೆ, ಅದರ ಬಗೆಗೆ ನಿಮಗೆ ಏನಾದರೂ ಮಾಹಿತಿ ಇದೆಯಾ, ಅದನ್ನು ನೀವೇನಾದರೂ ತಿಂದಿರಾ, ಏಕೆಂದ್ರೆ ಇವತ್ತು ಬೆಳಗ್ಗೆ ಮೀನಾಕ್ಷಿ ನಗರದ ಸುಮ ಎನ್ನುವವರು ನಮ್ಮನ್ನು ಸಂಪರ್ಕಿಸಿ ಅವರು ಮಾಡಿದ ಹೊಸ ರೀತಿಯ ಉಪ್ಪಿಟ್ಟು ವಿಚಾರ ತಿಳಿಸಿದರು. ಸಾಮಾನ್ಯವಾಗಿ ಉಪ್ಪಿಟ್ಟು ಎಂದರೆ ಜನರಿಗೆ ಅಲರ್ಜಿ, ಅಂಥಾದ್ರಲ್ಲಿ ಉಪ್ಪಿಟ್ಟಿನ ಬಗೆಗೆ ಏನು ಹೇಳೋದು, ಏನು ಹೇಳೋದು ಅಂತ ಜನರಿಗೆ ತಾತ್ಸಾರ ಭಾವನೆ ಇರುತ್ತೆ. ಆದರೂ ಇದರಲ್ಲೇನೋ ವಿಶೇಷ ಇರಬೇಕು ಅಂತ ನಾವು ಮೀನಾಕ್ಷಿ ನಗರದ ಸುಮ ಎನ್ನುವವರಿಗೆ ಅವಕಾಶ ಕೊಟ್ಟಿದ್ದೆವು. ಹೇಳಿ ಶ್ರೀನಿವಾಸ್ ನಿಮಗೆ ಏನಾದರೂ ಮಾಹಿತಿ ಇದೆಯಾ ಅಂತ ಟಿವಿ ಆ್ಯಂಕರ್ ಬಾಯಿ ಮುಚ್ಚಿಕೊಂಡಳು. ಆಗ ಶ್ರೀನಿವಾಸ್ ಧ್ವನಿ ಕೇಳಿತು. ಮೇಡಂ ನಾಯಿಗಿಂತ ಬಾಲನೇ ದೊಡ್ಡದು ಎನ್ನುವ ಹಾಗೆ ಉತ್ತರಕ್ಕಿಂತ ನಿಮ್ಮ ಪ್ರಶ್ನೆಯೇ ದೊಡ್ಡದಾದರೆ ಹೇಗೆ. ನೀವು ಒಂದೂವರೆ ಮೈಲಿ ಪ್ರಶ್ನೆ ಕೇಳಿದರೆ ನಮಗೆ ಕೊನೆಗೆ ನೀವು ಏನು ಪ್ರಶ್ನೆ ಕೇಳಿದಿರಿ ಅಂತಾನೇ ಮರೆತುಹೋಗುತ್ತೆ. ಆದರೂ ನಾನು ಅನುಭವಿ ಆದ್ದರಿಂದ ಹೇಳ್ತಿದೀನಿ ಕೇಳಿ, ಇವತ್ತು ಈ ಬಡಾವಣೆಯಲ್ಲೆಲ್ಲಾ ಸುದ್ದಿ ಹಬ್ಬಿತು. ಏನಪ್ಪಾ ಅಂದ್ರೆ ಮೀನಾಕ್ಷಿ ನಗರದ ಸುಮ ಎನ್ನುವವರು ಒಂದು ಹೊಸ ರೀತಿಯ ಉಪ್ಪಿಟ್ಟು ಮಾಡಿದಾರೆ ಅಂತ. ಹೀಗಾಗಿ ಜನರಲ್ಲಿ ಒಂದು ರೀತಿ ಕುತೂಹಲ ಉಂಟಾಯಿತು. ಮೀನಾಕ್ಷಿ ನಗರದ ಸುಮ ಎನ್ನುವವರು ಯಾವ ರೀತಿ ಉಪ್ಪಿಟ್ಟು ಮಾಡಿರಬಹುದು ಅಂತ. ಅದಕ್ಕೆ ಕೆಲವರು ಮೀನಾಕ್ಷಿ ನಗರದ ಸುಮ ಎನ್ನುವವರ ಮನೆ ಮುಂದೆ ಹಾಜರಾದರು. ನಾನೂ ಅದೇ ಸಮಯಕ್ಕೆ ಅವರ ಮನೆಗೆ ಹೋದೆ. ನನ್ನ ಕೈಲಿದ್ದ ಕ್ಯಾಮರ ಕಂಡು ಮೊದಲು ನನ್ನನ್ನು ಒಳಗೆ ಬಿಟ್ಟರು, ಹಲೋ ಮೇಡಂ ಕೇಳಿಸ್ತಾ ಇದಿಯಾ, ಅಂತ ಒಂದು ಕ್ಷಣ ಮಾತು ನಿಲ್ಲಿಸಿದ. ಮತ್ತೆ ಟಿವಿ ಆ್ಯಂಕರ್ ಹೇಳಿ ಶ್ರೀನಿವಾಸ್, ಕೇಳಿಸ್ತಾ ಇದೆ ಹೇಳಿ, ನೀವು ಮೀನಾಕ್ಷಿ ನಗರದ ಸುಮ ಎನ್ನುವವರನ್ನು ಭೇಟಿ

ಮಾಡಿದಿರಾ, ಅವರು ಏನು ಹೇಳಿದರು, ಅವರ ಮನೆಗೆ ಇನ್ನೂ ಯಾರ‍್ಯಾರು ಬಂದಿದಾರೆ, ಸ್ಥಳೀಯ ಕಾರ್ಪೊರೇಟರ್ ಅವರೂ, ಎಂ.ಎಲ್.ಎ. ಅವರೂ ಬರುವ ಸೂಚನೆ ಇದೆ ಅಂತ ನಮಗೆ ಸುದ್ದಿ ಬಂದಿದೆ. ಅದಕ್ಕಾಗಿ ಕೇಳ್ತಿದೀನಿ. ಜನಪ್ರತಿನಿಧಿಗಳು ಬರ್ತಾರೆ ಅಂದರೆ ಪೊಲೀಸರು ಬರಲೇಬೇಕು. ಹೇಳಿ ಶ್ರೀನಿವಾಸ್ ಈಗ ಅಲ್ಲಿ ಪೊಲೀಸರು ಏನಾದರೂ ಬಂದಿದಾರಾ, ಬಂದಿದ್ದರೆ ಎಷ್ಟು ಜನ ಬಂದಿದಾರೆ, ಅವರ ಕೈಲಿ ಬರೀ ಲಾಠಿ ಇದೆಯಾ ಇಲ್ಲಾ ಬಂದೂಕೂ ಇದೆಯಾ, ಅಂದು ಮಾತು ನಿಲ್ಲಿಸಿದಳು. ಮತ್ತೆ ಶ್ರೀನಿವಾಸ್ ಧ್ವನಿ ಬಂತು. ಮೇಡಂ ನಿಮ್ಮ ಮಾತು ಅಂದ್ರೆ ನಾಯಿ ಮತ್ತು ಬಾಲ. ನೀವು ಒಂದು ಸಣ್ಣ ಪ್ರಶ್ನೆ ಕೇಳಿ ನಾನು ಉತ್ತರ ಕೊಡಲು ಬಿಡಿ ಮೇಡಂ. ನೀವು ಅಷ್ಟೊಂದು ಮಾತಾಡಿದ್ರೆ ಹೇಗೆ ಅಂದ. ಅದೂ ಅಲ್ದೆ ಹೇಳಿದ್ದನ್ನೇ ಎಷ್ಟು ಸಾರಿ ಹೇಳ್ತೀರ, ನಿಮ್ಮ ನಾಲಿಗೆ ಏನು ಹಳೇ ಗ್ರಾಮಾಫೋನು ರೆಕಾರ್ಡಾ ಅಂತ ಕೇಳಿದ. ಅದಕ್ಕೆ ಆ್ಯಂಕರ್ ಇದೇನು ನೀವೂ ಟಿವಿ ರಿಪೋರ್ಟ್‌ರ್ ಆಗಿ ಹೀಗೆ ಹೇಳ್ತಿದೀರ. ನ್ಯೂಸ್ ಛಾನಲ್‌ನಲ್ಲಿ ಕೆಲಸ ಸಿಗಬೇಕಾದರೆ ಮೊದಲ ಅರ್ಹತೆಯೇ ಬಡಬಡಬಡ ಅಂತ ಮಾತಾಡೋದು, ಹೇಳಿದ್ದನ್ನೇ ಸಾವಿರ ಸಲ ಹೇಳೋದು, ಸುತ್ತಿ ಬಳಸಿ ಅದನ್ನೇ ಮಾತಾಡೋದು. ನಾನು ಹೀಗೆ ಮಾತಾಡ್ತೀನಿ ಅಂತಾನೇ ನನಗೆ ಕೆಲಸ ಕೊಟ್ಟಿರೋದು. ಇರಲಿ ನಮ್ಮ ನಮ್ಮ ಪರ್ಸನಲ್ ವಿಷಯ ಏರ್‌ನಲ್ಲಿ ಹೋಗೋದು ಬೇಡ. ಈಗ ಮೀನಾಕ್ಷಿ ನಗರದ ಸುಮ ಎನ್ನುವವರ ಉಪ್ಪಿಟ್ಟಿನ ಬಗೆಗೆ ಹೇಳಿ ಅಂದು ಮಾತು ನಿಲ್ಲಿಸಿದಳು. ಆಗ ಶ್ರೀನಿವಾಸ್ ಧ್ವನಿ ಬಂತು. ಮೇಡಂ ನನಗೆ ಮಾತಾಡೋಕೆ ಬಿಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್. ಈಗ ನಾನು ಮೀನಾಕ್ಷಿ ನಗರದ ಸುಮ ಎನ್ನುವವರ ಮನೆ ಮುಂದೇ ಇದೀನಿ. ಇಲ್ಲಿಗೆ ನಮ್ಮ ಕ್ಯಾಮರಾಮೆನ್ ಬಂದಿದ್ದರೆ ನಿಮಗೆ ವಿಷಯಲ್ಸ್ ತೋರಿಸಬಹುದಿತ್ತು. ಇಲ್ಲಿ ಯಾರೂ ಬಂದಿಲ್ಲ ಮೇಡಂ. ಸ್ವತಃ ಮೀನಾಕ್ಷಿ ನಗರದ ಸುಮ ಎನ್ನುವವರೇ ಮನೇಲಿಲ್ಲ. ಅವರು ಉಪ್ಪಿಟ್ಟು ಮಾಡಿದ್ದನ್ನು ಕಂಡು ಕೋಪದಿಂದ ಅವರ ಗಂಡ ರಾಜೀವ್ ಎನ್ನುವವರು ದರ್ಶಿನಿಗೆ ಮಸಾಲೆದೋಸೆ ತಿನ್ನೋಕೆ ಹೋದರಂತೆ. ಆಗ ಸುಮ ಕೂಡಾ ಸೀರೆ ಬದಲಿಸಿ ದರ್ಶಿನಿಗೆ ಹೋದರಂತೆ. ಈ ಬಡಾವಣೇಲಿ ಸುಮಾರು ದರ್ಶಿನಿಗಳಿವೆ, ಅವರಿಬ್ಬರು ಯಾವ ದರ್ಶಿನಿಗೆ ಹೋದರು ಅಂತ ಗೊತ್ತಾಗ್ತಿಲ್ಲ. ಇನ್ನು ನೀವು ಹೇಳೋ ಹಾಗೆ ಇಲ್ಲಿ ಯಾವ ಜನಪ್ರತಿನಿಧಿಯೂ ಬಂದಿಲ್ಲ, ಹೀಗಾಗಿ ಪೊಲೀಸಿನವರೂ ಇಲ್ಲ. ನಾನು ಇಲ್ಲೇ ಕಾಯ್ತಿರ್ತೀನಿ. ಮೀನಾಕ್ಷಿ ನಗರದ ಸುಮ ಎನ್ನುವವರು ಬಂದ ತಕ್ಷಣ ಅವರೊಂದಿಗೆ ಮೊದಲು ನಾನು ಮಾತಾಡಿ ನಂತರ ನಿಮಗೂ ಮಾತಾಡಿಸ್ತೇನೆ. ಆಗ ಅವರು ಮಾಡಿದ ಉಪ್ಪಿಟ್ಟಿನ ಬಗೆಗೆ ಎಲ್ಲ ಮಾಹಿತಿಗಳನ್ನೂ ನಮ್ಮ ವೀಕ್ಷಕರಿಗೆ ತಿಳಿಸಿಕೊಡಬಹುದು ಅಂದ. ಮತ್ತೆ ಆ್ಯಂಕರ್ ಧನ್ಯವಾದ ನಿಮ್ಮೆಲ್ಲಾ ಮಾಹಿತಿಗೆ ಶ್ರೀನಿವಾಸ್, ನಾನು ಕಾಯ್ತಿರ್ತೀನಿ, ಮೀನಾಕ್ಷಿ ನಗರದ ಸುಮ ಎನ್ನುವವರು ನಿಮಗೆ ಸಿಕ್ಕ ತಕ್ಷಣ ನಮಗೆ ಮಾಹಿತಿ ದೊರಕಿಸಿ, ಧನ್ಯವಾದಗಳು. ನೋಡಿದ್ರಲ್ಲ ವೀಕ್ಷಕರೆ, ಇವತ್ತು ಬೆಳಗ್ಗೆ ತಾನೇ ನಮಗೆ ಒಂದು ಹೊಸ ಸುದ್ದಿ ಬಂತು ಅದರಲ್ಲಿ ಮೀನಾಕ್ಷಿ ನಗರದ ಸುಮ ಎನ್ನುವವರು ಒಂದು ಹೊಸ ರೀತಿಯ ಉಪ್ಪಿಟ್ಟು ಮಾಡಿದ್ದರು ಅಂತ. ಈ

ಕುರಿತು ನಿಮಗೆ ಮಾಹಿತಿ ಒದಗಿಸಲು ನಮ್ಮ ಪ್ರತಿನಿಧಿ ಶ್ರೀನಿವಾಸ್ ಸ್ವತಃ ಮೀನಾಕ್ಷಿ ನಗರದ ಸುಮ ಎನ್ನುವವರ ಮನೆಗೆ ಹೋದರಂತೆ, ಆಗ ಮೀನಾಕ್ಷಿ ನಗರದ ಸುಮ ಎನ್ನುವವರು ಮನೇಲಿ ಇರದೇ ಅವರ ಗಂಡನ ಜೊತೆಗೆ ದರ್ಶಿನಿಗೆ ಮಸಾಲೆದೋಸೆ ತಿನ್ನೋಕೆ ಹೋಗಿದ್ರಂತೆ. ನಮ್ಮ ಪ್ರತಿನಿಧಿ ಶ್ರೀನಿವಾಸ್ ಸಧ್ಯಕ್ಕೆ ಮೀನಾಕ್ಷಿ ನಗರದ ಸುಮ ಎನ್ನುವವರ ಮನೆಯ ಬಳಿಯೇ ಇದ್ದಾರೆ. ಮೀನಾಕ್ಷಿ ನಗರದ ಸುಮ ಎನ್ನುವವರು ಬಂದ ತಕ್ಷಣ ಅವರನ್ನು ಸಂಪರ್ಕಿಸಿ ಮೀನಾಕ್ಷಿ ನಗರದ ಸುಮ ಎನ್ನುವವರು ಮಾಡಿರುವ ಹೊಸ ರುಚಿಯ ಉಪ್ಪಿಟ್ಟಿನ ಬಗೆಗೆ ನಿಮಗೆ ಮಾಹಿತಿ ಕೊಡುತ್ತೇವೆ. ಈಗ ಒಂದು ಚಿಕ್ಕ ಬ್ರೇಕ್, ಬ್ರೇಕ್‌ನ ನಂತರ ವಾರ್ತೆ ಮುಂದುವರೆಯುತ್ತದೆ.

ಸುಮ ಕಿಸಕ್ಕನೆ ನಕ್ಕಳು. ಒಬ್ಬಳೇ ಇದ್ದದ್ದರಿಂದ ಜೋರಾಗೇ ನಗು ಬಂತು. ಒಂದು ವೇಳೆ ನಾನು ಯಾವುದಾದರೂ ವಾರ್ತಾವಾಹಿನಿಗೆ ನೋಡ್ರೀ ಇಷ್ಟು ಚೆನ್ನಾಗಿ ಉಪ್ಪಿಟ್ಟು ಮಾಡಿದೀನಿ ಇದನ್ನು ನನ್ನ ಗಂಡ ಬೇಡ ಅಂದು ದರ್ಶಿನಿಗೆ ಮಸಾಲೆದೋಸೆ ತಿನ್ನೋಕೆ ಹೋಗಿದಾರೆ ಅಂತ ಏನಾದರೂ ಹೇಳಿದ್ದರೆ ಅವರು ಬಹುಶಃ ಮೇಡಂ ನೀವು ಉಪ್ಪಿಟ್ಟಿನ ಸಮೇತ ನಮ್ಮ ವಾಹಿನಿಗೆ ಬನ್ನಿ, ಹಾಗೆ ನಿಮ್ಮ ಗಂಡನನ್ನೂ ಕರೆಸುವ ಪ್ರಯತ್ನ ಮಾಡ್ತೀವಿ, ಮತ್ತು ಮಹಿಳಾ ಸಂಘದ ಅಧ್ಯಕ್ಷೆಯನ್ನೂ ಕರೆಸುತ್ತೇವೆ, ಒಂದು ಲೈವ್ ಅನಿಸಿದಾಗ ಮತ್ತೆ ನಗು ಬಂತು.

ಟಿವಿಯಲ್ಲಿ ಮುಂದಿನ ತಿಂಗಳು ನಡೆಯುವ ಚುನಾವಣೆಯ ವಿಚಾರ ಪ್ರಸಾರವಾಗುತ್ತಿತ್ತು. ಅದರಲ್ಲಿ ರಾಜಕೀಯ ನಾಯಕನೊಬ್ಬ ತಾನೇನು ಮಾತಾಡಿದರೂ ಅದು ಜನರಿಗೆ ಏನೂ ತಿಳಿಯಬಾರದು ಎನ್ನುವ ಸಂಕಲ್ಪ ಮಾಡಿದವನಂತೆ ಮಾತಾಡುತ್ತಿದ್ದ. ಹುರುಳಿ ಇಲ್ಲ, ಹಪ್ಪಳ ಮೊದಲೇ ಇಲ್ಲ ಎನ್ನುವಂತಿತ್ತು ಅವನ ಮಾತು. ಅವನೇನಾದರೂ ನಮ್ಮನೆಗೆ ಬಂದು ನಮ್ಮಲ್ಲಿ ಮತಯಾಚನೆ ಮಾಡಿದಾಗ ನಾನು ಈ ಉಪ್ಪಿಟ್ಟನ್ನು ಅವರ ಮುಂದೆ ಇರಿಸಿ ನೋಡಿ ಸರ್ ಇಷ್ಟು ಚೆನ್ನಾಗಿ ಉಪ್ಪಿಟ್ಟು ಮಾಡಿದ್ದರೂ ನನ್ನ ಗಂಡ ಮುಖ ಊದಿಸಿಕೊಂಡು ದರ್ಶಿನಿಗೆ ಮಸಾಲೆದೋಸೆ ತಿನ್ನೋಕೆ ಹೋಗಿದಾರಲ್ಲ, ನೀವಾದರೂ ಟೇಸ್ಟ್ ನೋಡಿ ಸರ್ ಈ ಉಪ್ಪಿಟ್ಟು ಚೆನ್ನಾಗಿಲ್ವ ಅಂತ ಕೇಳಿದ್ದರೆ ಅವರು ಏನು ಹೇಳುತ್ತಿದ್ದರೋ ಅಂದುಕೊಂಡಾಗ ಮತ್ತೆ ಸುಮ ಎದುರಿಗೆ ಊಹಾ ಗೋಪುರ ತಲೆಎದ್ದಿತು.

ಉಪ್ಪಿಟ್ಟು ಮುಂದಿಟ್ಟುಕೊಂಡು ರಾಜಕಾರಿಣಿ ಮಾತು ಷುರುಮಾಡುತ್ತಿದರು. ಒಂದು ಚಮಚ ಉಪ್ಪಿಟ್ಟು ಬಾಯಿಗೆ ಹೋಗಿದೆ. ಬರೀ ಬಾಯಿಗೇನು ಬಾಯಿಂದ ಹೊಟ್ಟೆಗೂ ಹೋಗಿದೆ. ಮುಖ ಅರಳಿದೆ. ತುಸು ನಗುಮುಖಮಾಡಿಕೊಂಡು ಅವನು ಹೇಳುತ್ತಿದ್ದಾನೆ. ಏನು ಇವತ್ತು ನಾವು ಈ ಕಡೆ ಚುನಾವಣೆ ಪ್ರಚಾರಕ್ಕೆ ಅಂತ ಬಂದಿದ್ದೆವು, ಏನು ಇವತ್ತು ನಾವು ಮೀನಾಕ್ಷಿ ನಗರದ ಸುಮ ಎನ್ನುವವರ ಮನೆಗೆ ಬಂದು ಅವರಲ್ಲಿ ಮತಯಾಚನೆ ಮಾಡಿದೆವು, ಏನು ಆಗ ಅವರು ನಮ್ಮನ್ನು ಒಳಗೆ ಬರಮಾಡಿಕೊಂಡು, ಏನು ಒಂದು ಕುರ್ಚಿ ತೋರಿಸಿ ಕೂತ್ಕೊಳಿ ಅಂತ ಹೇಳಿ, ಏನು ಇವತ್ತು ಒಂದು ಬೇಜಾರಿನ ಮುಖದಿಂದ ನಮ್ಮನ್ನು ನೋಡಿ ತಾವು ಉಪ್ಪಿಟ್ಟು ಮಾಡಿರುವುದನ್ನೂ ಅದನ್ನು ಅವರ ಗಂಡ ತಿನ್ನದೇ ದರ್ಶಿನಿಗೆ ಮಸಾಲೆ ದೋಸೆ ತಿನ್ನೋಕೆ ಹೋಗಿರುವ ವಿಚಾರವನ್ನು ತಿಳಿಸಿ, ಏನು ಈ ಒಂದು ಉಪ್ಪಿಟ್ಟಿನ

ರುಚಿಯನ್ನು ನೋಡಬೇಕು ಅಂತ ನಮ್ಮಲ್ಲಿ ವಿನಂತಿಸಿಕೊಳ್ಳಲಾಗಿ, ಏನು ಇವತ್ತು ನಾವು ಚುನಾವಣಾ ಪ್ರಚಾರಕ್ಕೆಂದು ಮನೆ ಬಿಟ್ಟಾಗ ಇನ್ನೂ ನನ್ನ ಶ್ರೀಮತಿ ಎದ್ದಿಲ್ಲದ್ದರಿಂದ ತಿಂಡಿ ಇಲ್ಲದೆಯೇ ಹೊರಡಬೇಕಾಗಿ ಬಂದಿತ್ತು. ಮೀನಾಕ್ಷಿನಗರದ ಸುಮ ಎನ್ನುವವರು ನಮ್ಮನ್ನು ಒಳಗೆ ಕರೆದು ಉಪ್ಪಿಟ್ಟು ತಿನ್ನಲು ಹೇಳಿದ್ದು ಹೇಗಾಯ್ತು ಅಂದರೆ, ಏನು ರೋಗಿ ಬಯಸಿದ್ದೂ ಹಾಲು ಅನ್ನ ಡಾಕ್ಟರು ಹೇಳಿದ್ದೂ ಹಾಲು ಅನ್ನ ಅನ್ನೋ ಹಾಗಾಗಿ, ಏನು ಇವತ್ತು ಒಂದು ಚುನಾವಣಾ ಪ್ರಚಾರದ ಮಧ್ಯ ನಾನು ಮೀನಾಕ್ಷಿ ನಗರದ ಸುಮ ಎನ್ನುವವರ ಮನೆಯಲ್ಲೇ ತಿಂಡಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀನಿ. ಏನು ಇವತ್ತು ಈ ಟೀಪಾಯ್ ಮೇಲೆ ಒಂದು ತಟ್ಟೇಲಿ ಉಪ್ಪಿಟ್ಟು ಇದೆ, ಅದು ನಿಜವಾದ ಉಪ್ಪಿಟ್ಟಲ್ಲ, ನಾನಾಗಲೇ ಒಂದು ತುತ್ತು ತಿಂದಿದ್ದೇನೆ. ಏನು ಇವತ್ತು ನನ್ನ ಬಾಯಿಗೆ ಈ ಉಪ್ಪಿಟ್ಟು ಬಿದ್ದಿದೆ, ಅದು ಇದುವರೆವಿಗೂ ನನ್ನ ಜನ್ಮದಲ್ಲಿ ಬಿದ್ದಿರಲಿಲ್ಲ ಅಂತ ಘಂಟಾಘೋಷವಾಗಿ ಹೇಳಲು ಇಚ್ಛೆಪಡ್ತೀನಿ. ಇದಕ್ಕೆ ವಿರೋಧ ಪಕ್ಷದ ಆಕ್ಷೇಪಗಳೇನಾದರೂ ಇದ್ದರೆ ಅವರು ಒಂದು ವಿಚಾರಣಾ ಆಯೋಗವನ್ನು ರಚಿಸುವಂತೆ ಮಾನ್ಯ ಸ್ಪೀಕರ್ ಅವರಲ್ಲಿ ಮನವಿ ಮಾಡಿಕೊಳ್ಳಬಹುದು. ಆದರೆ ಏನು ಇವತ್ತು ನಾನು ಹೇಳ್ತಾ ಇದೀನಿ ಅದು ಅಕ್ಷರಶಃ ಸತ್ಯ. ರಾಜಕಾರಿಣಿಗಳು ಸತ್ಯ ನುಡಿಯುವುದಿಲ್ಲ ಅಥವಾ ಸತ್ಯ ನುಡಿಯಬಾರದು. ಒಂದು ವೇಳೆ ಸತ್ಯ ನುಡಿಯಲು ಷುರು ಮಾಡಿದರೆ ಅವರು ರಾಜಕಾರಣದಲ್ಲಿರಬಾರದು ಎನ್ನುವ ಏನು ಒಂದು ಮಾತು ಇವತ್ತು ಈ ದೇಶದಲ್ಲಿ ಪ್ರಚಲಿತದಲ್ಲಿದೆ ಅದಕ್ಕೆ ನಾನು ಅಪವಾದ. ಏನು ಇವತ್ತು ನಾನು ನಿಜವನ್ನೂ ಹೇಳಿಕೊಂಡು ರಾಜಕಾರಣವನ್ನೂ ಮಾಡಿಕೊಂಡು ಬಂದಿರುವ ಏಕೈಕ ವ್ಯಕ್ತಿ ಅದು ನಾನೇ ಅಂದರೆ ತಪ್ಪಾಗಲಾರದು. ಅದರಿಂದಾಗಿ ಏನು ಇವತ್ತು ನನಗೆ ಈ ಒಂದು ಅವಕಾಶ ಸಿಕ್ಕಿದೆ ಅದಕ್ಕೆ ನಾನು ಭಗವಂತನಲ್ಲಿ ಧನ್ಯವಾದ ಅರ್ಪಿಸ್ತೀನಿ. ಏನು ಇವತ್ತು ನಾನು ಉಪ್ಪಿಟ್ಟನ್ನು ಮುಂದಿಟ್ಕೊಂಡು ಕೂತಿದೀನಿ ಇದನ್ನು ತಿನ್ನಲು ಯೋಗ್ಯತೆ ಬೇಕು ಅನಿಸ್ತಾ ಇದೆ. ನನಗೆ ಆ ಯೋಗ್ಯತೆ ಇದೆ ಅಂದ್ಕೊಂಡಿದೀನಿ. ಏನು ಇವತ್ತು ನನ್ನ ಹಸಿವಿಗೆ ಈ ಉಪ್ಪಿಟ್ಟು ಒಂದು ದಾರಿ ದೀಪವಾಯಿತು, ಅದಕ್ಕೆ ನಾನು ಉಪ್ಪಿಟ್ಟಿಗೆ ಮೊದಲು ಕೃತಜ್ಞನಾಗಿರ್ತೀನಿ ಮತ್ತು ನಂತರ ಇದನ್ನು ಮಾಡಿದವರಿಗೆ ಕೃತಜ್ಞನಾಗಿರ್ತೀನಿ. ಉಪ್ಪಿಟ್ಟು ನಮ್ಮ ದೇಶದ ಸಂಸ್ಕೃತಿ. ಉಪ್ಪಿಟ್ಟವರನ್ನು ಮುಪ್ಪಿನ ತನಕ ನೆನೆ ಎನ್ನೋ ಗಾದೆನೇ ಇದೆಯಲ್ಲ ಅಂತ ರಾಜಕಾರಿಣಿ ಹೇಳುತ್ತಿದ್ದಂತೆ ಅವನ ಶಿಷ್ಯ ರಾಜಕಾರಿಣಿ ಕಿವಿಯಲ್ಲಿ ಸರ್ ಅದು ಉಪ್ಪು ಇಟ್ಟವರನ್ನು ಅಂತ ಉಪ್ಪಿಟ್ಟು ಇಟ್ಟವರನ್ನೆಲ್ಲಾ ಅಂತ ತಿದ್ದಿದ. ಶಿಷ್ಯನ ಕಡೆ ಕೈ ತೋರಿಸಿ, ಅಲ್ಲಯ್ಯಾ ಬರೀ ಉಪ್ಪು ಇಟ್ಟವನನ್ನೇ ಮುಪ್ಪಿನ ತನಕ ನೆನೆ ಎನ್ನುವಾಗ ಇನ್ನು ಉಪ್ಪಿಗೆ ರವೆ, ಕಾಯಿ, ಈರುಳ್ಳಿ, ಉದ್ದಿನಬೇಳೆ, ಕಡ್ಲೆಬೇಳೆ, ಎಣ್ಣೆ ಎಲ್ಲ ಹಾಕಿ ಉಪ್ಪಿಟ್ಟು ಮಾಡಿಕೊಟ್ಟವರನ್ನು ಈ ಜನ್ಮದ ಮುಪ್ಪಿನ ತನಕ ಅಲ್ಲ ಮುಂದಿನ ಜನ್ಮದ ಮುಪ್ಪಿನ ತನಕ ನೆನೆಯಬೇಕು. ನನ್ನ ಮಾತು ಮರೆಸಬೇಡ, ನಾನು ಏನು ಹೇಳ್ತಿದ್ದೆ, ಹಾ. ಏನು ಇವತ್ತು ಈ ಉಪ್ಪಿಟ್ಟಿನ ಮುಖಾಂತರ ನನಗೆ ಮೀನಾಕ್ಷಿ ನಗರದ ಸುಮ ಎನ್ನುವವರ ಪರಿಚಯ ಆಯಿತು. ಏನು ಇವತ್ತು ಅವರು ನನ್ನನ್ನು ಒಳಗೆ ಕರೆದು ಉಪ್ಪಿಟ್ಟು ಕೊಟ್ಟಿದ್ದಾರೆ, ಏನು ನನ್ನ

ಒಂದು ಅಭಿಪ್ರಾಯಕ್ಕಾಗಿ ಕಾಯ್ತಾ ಇದಾರೆ ಅದು ನನಗೆ ಸಂತಸ ತಂದಿದೆ. ನಮ್ಮ ಮನೆಯಲ್ಲಿಯೂ ಇಂಥಾ ಉಪ್ಪಿಟ್ಟನ್ನು ಮಾಡಲು ನಾನು ನನ್ನ ಹೆಂಡ್ತಿಗೆ ಹೇಳ್ತೀನಿ. ಏನು ಅವಳು ನನ್ನ ಮಾತು ಕೇಳ್ತಾಳೆ ಎಂದುಕೊಂಡಿದ್ದೀನಿ. ಏನು ಇವತ್ತು ನಾನು ರಾಜಕಾರಣಕ್ಕೆ ಬಿದ್ದ ಮೇಲೆ ಮನೇ ಸೇರೋದೇ ಅಪರೂಪ ಆಗಿರುವಾಗ ಅವಳಿಗೆ ಯಾವಾಗ ಉಪ್ಪಿಟ್ಟು ಮಾಡಬೇಕು ಎನ್ನುವ ಸಮಸ್ಯೆ ಬರಬಹುದು. ಆದರೂ ಅವಳಿಗೂ ಒಂದು ಸಮಯ ಕೊಟ್ಟು ಉಪ್ಪಿಟ್ಟು ಮಾಡಿಸಿಕೊಂಡು ತಿನ್ನುತ್ತೀನಿ ಅಂತ ಈ ಮುಖಾಂತರ ನಾನು ಘಂಟಾಘೋಷವಾಗಿ ತಿಳಿಸುತ್ತಾ ಏನು ಇವತ್ತು ನೀವು ಜನತಾ ಜನಾರ್ಧನರು ನಾನು ಉಪ್ಪಿಟ್ಟು ತಿನ್ನುವುದನ್ನೇ ಕಣ್ಣು ಅಗಲಿಸಿ ನೋಡ್ತಾ ಇದೀರ ಹಾಗೇ ನಾನು ಮುಖ್ಯಮಂತ್ರಿ ಗಾದಿಗೆ ಏರುವುದನ್ನೂ ಕಣ್ಣು ಅಗಲಿಸಿ ನೋಡುವಂತಾಗಲಿ, ಅಂಥಾ ಪರಿಸ್ಥಿತಿಗೆ ದಾರಿಮಾಡಿಕೊಟ್ಟ ಈ ಉಪ್ಪಿಟ್ಟಿಗೂ ಒಳ್ಳೆಯದಾಗಲಿ ಅಂತ ಹೇಳ್ತಾ ನನ್ನ ಮಾತು ಮುಗಿಸ್ತೀನಿ, ಜೈ ಹಿಂದ್, ಜೈ ಕರ್ನಾಟಕ.

ಊಹಾಲೋಕದಿಂದ ಸುಮ ಹೊರಬಂದಾಗ ಅವಳ ನಗು ಇನ್ನಷ್ಟು ತಾರಕಕ್ಕೇರಿತ್ತು. ಸಧ್ಯ ಮನೇಲಿ ಯಾರೂ ಇಲ್ಲದ್ದು ಒಂಥರಾ ಒಳ್ಳೆಯದೇ ಆಯಿತು ಅಂದುಕೊಂಡಳು. ಅವಳು ಹಾಗೆ ನಗುತ್ತಿರುವಾಗ ರಾಜೀವ ಬಂದ. ಹೆಂಡ್ತಿ ಫಕ ಫಕ ಅಂತ ನಗ್ತಾ ಇದ್ದಿದ್ದನ್ನು ನೋಡಿ ಇದೇನಾಯ್ತೇ ನಿನಗೆ ಅಂದು ಸೋಫಾ ಮೇಲೆ ಕುಕ್ಕರಿಸಿದ.

ಸುಮ ಅವನ ಬಳಿ ಬಂದು ಭುಜ ಹಿಡಿದು ''ರೀ ನೀವು ಉಪ್ಪಿಟ್ಟು ಬೇಡಾ ಅಂದ್ರಲ್ಲ ಅದಕ್ಕೆ ಅದನ್ನು ಟಿವಿ ಸ್ಟೇಷನ್ನಿಗೆ ರಿಪೋರ್ಟ್ ಮಾಡಿದೆ. ಅವರು ಎಂಥಾ ವರದಿ ಬಿತ್ತರ ಮಾಡಿದರು ಗೊತ್ತಾ'' ಅಂದು ನಗುತ್ತಾ ''ಅಷ್ಟೇ ಅಲ್ಲಾರೀ ಚುನಾವಣೆಗೆ ನಿಂತಿದಾರಲ್ಲ ಆ ರಾಜಕಾರಿಣಿ ನಮ್ಮನೆಗೆ ಓಟು ಕೇಳೋಕೆ ಬಂದ್ರು ನಾನು ಅವರಿಗೆ ಉಪ್ಪಿಟ್ಟು ಕೊಟ್ಟೆ. ಅದಕ್ಕೆ ಅವರು ಏನಂದ್ರು ಗೊತ್ತಾ'' ಅಂತ ತನ್ನ ಊಹಾಗೋಪುರದ ಎಲ್ಲ ವಿವರಗಳನ್ನೂ ಕೊಟ್ಟಳು. ಅದನ್ನು ಕೇಳಿ ರಾಜೀವನಿಗೂ ನಗೆ ಬರದಿರಲಿಲ್ಲ. ನಗುತ್ತಲೇ ಒಳಗೆ ಹೊರಟ ಹೆಂಡ್ತೀನ ''ಎತ್ಲಾಗೆ ಹೊರಟೆ'' ಅಂತ ಕೇಳಿದ. ''ನನಗೆ ಅಡಿಗೆ ಮನೇಲಿ ಕೆಲಸ ಇದೆ'' ಅಂದಳು ಸುಮ. ''ಅದೇ ಆ ಉಪ್ಪಿಟ್ಟು ಮಾಡಿದ್ಯಲ್ಲ ಅದು ಆಗೋಯ್ತಾ ಇನ್ನೂ ಇದೆಯಾ'' ಅಂತ ಕೇಳಿದ. ಸುಮ ಕಣ್ಣು ಅಗಲಿಸಿ ''ಯಾಕ್ರೀ'' ಅಂತ ಕೇಳಿದಳು. ''ಹೊಟ್ಟೆ ಹಸೀತಾ ಇದೆ ಅದೇ ಉಪ್ಪಿಟ್ಟೇ ತಗೊಂಡ್ಬಾ'' ಅಂದ. ''ಯಾಕೆ ರಾಯ್ರು ದರ್ಶಿನೀಲಿ ಮಸಾಲೆದೋಸೆ ಮೆತ್ಕೊಂಡು ಬರಲಿಲ್ವಾ'' ಅಂತ ಹುಬ್ಬೇರಿಸಿ ಕೇಳಿದ್ದಕ್ಕೆ ರಾಜೀವ ''ಇಲ್ಲ ಇವತ್ತು ಎಲ್ಲಾ ದರ್ಶಿನಿಗಳು ಸ್ಟ್ರೈಕ್ ಅಂತೆ. ಮಸಾಲೆದೋಸೆ ಹೋಗಲಿ ಒಂದು ತೊಟ್ಟು ಕಾಫಿನೂ ಸಿಗಲಿಲ್ಲ, ನಿನ್ನ ಉಪ್ಪಿಟ್ಟೇ ಕೊಡೆ ಹೊಟ್ಟೆ ಹಸೀತಾ ಇದೆ'' ಅಂತ ತಲೆ ಕೆರೆದ. ಸುಮ ನಗುತ್ತಾ ''ಹಾಗೆ ಬನ್ನಿ ದಾರಿಗೆ, ಹಳೇ ಗಂಡನ ಪಾದವೇ ಗತಿ ಅನ್ನೋ ಹಾಗಾಯ್ತಾ'' ಅಂತ ಕೇಳಿದಾಗ ರಾಜೀವ ಅವಳ ಹತ್ತಿರ ಹೋಗಿ ''ಅದು ಹಳೇ ಗಂಡನ ಅಲ್ಲ ಕಣೆ ಹಳೇ ಹೆಂಡ್ತೀ ಪಾದವೇ ಗತಿ ಅಂತ ನಾವು ಬದಲಾಯಿಸೋಣ'' ಅಂದ. ಸುಮ ತುಂಬಾ ಜಂಭದಿಂದ ಗಂಡನ ಕೈ ತೆಗೆದು ತನ್ನ ಭುಜದ ಮೇಲಿಟ್ಟುಕೊಂಡು ಅವನ ಸಮೇತ ಅಡಿಗೆ ಮನೆಗೆ ಹೊರಟಳು.

**

# ಹಿಗ್ಗುವ ಈ ಪರಿ

**- ನಂನಾಗ್ರಾಜ್**

**ನ**ಮ್ಮ ಖರ್ಚುಗಳು ನಮ್ಮ ಆದಾಯವನ್ನು ಸಂಧಿಸಲು ಹಿಗ್ಗುತ್ತವೆ ಎಂದು ಮ್ಯಾನೇಜ್‌ಮೆಂಟ್ ಪರಿಣಿತರು ಹೇಳುತ್ತಾರೆ. ಆದರೆ ಈ ಹಿಗ್ಗುವಿಕೆ ಇದಕ್ಕೆ ಮಾತ್ರ ಸೀಮಿತವಲ್ಲ. ನಮ್ಮ ದೇಹದ ಅಂಗಾಂಗಳು ಕೂಡ ಹಿಗ್ಗುತ್ತವೆ – ಸಮಯಕ್ಕೆ ತಕ್ಕಂತೆ.

ಗುಂಪಿನಲ್ಲಿದ್ದಾಗ ಗಣ್ಯವ್ಯಕ್ತಿಗಳನ್ನು, ಸಿನಿಮಾ ತಾರೆಯರನ್ನು ನೋಡಲು ನಮ್ಮ ಕತ್ತುಗಳು ಹೇಗೆ ಉದ್ದವಾಗುತ್ತವೆ! ಅದೇ ಸ್ವಚ್ಛ ನೀಲಾಕಾಶದಲ್ಲಿ ಹೊಳೆಯುತ್ತಿರುವ ನಕ್ಷತ್ರಗಳನ್ನು ಹಾಗೂ ತೇಲಿ ಬರುತ್ತಿರುವ ಸುಂದರ ಪೂರ್ಣ ಚಂದಿರನನ್ನು ನೋಡಲು ವಾಲುವುದು ಕೂಡ ಇಲ್ಲ. ಅದೇ ಕತ್ತು ಗುಡಿಯ ಜನಜಂಗುಳಿಯಲ್ಲಿ ದೇವರ ದರ್ಶನಕ್ಕಾಗಿ ಹಾಗೆ ಶ್ರಮಪಡುವುದಿಲ್ಲ. ಆದರೆ ದೂರದಿಂದ ಪ್ರಸಾದ ಸ್ವೀಕರಿಸಲು ಕೈಗಳು ಎಷ್ಟೊಂದು ಚಾಚಿಕೊಳ್ಳುತ್ತವೆ. ನಮ್ಮ ಮುಂದೆ ವೇಗವಾಗಿ ನಡೆಯುತ್ತಿರುವ ಸುಂದರ ಕಾಲುಗಳನ್ನು ಹಿಂಬಾಲಿಸಲು ನಮ್ಮ ಕಾಲುಗಳು ಹಿಗ್ಗದೆ ಇರುತ್ತವೆಯೆ?

**ಸಮಯಕ್ಕೆ ತಕ್ಕಂತೆ ನಮ್ಮ ದೇಹದ ಅಂಗಾಂಗಳು ಕೂಡ ಹಿಗ್ಗುತ್ತವೆ ಎಂಬ ಸಂಗತಿ ನಿಮಗೆ ಗೊತ್ತೆ?**

ನಮ್ಮ ಹೊಟ್ಟೆ ಈ ವಿಷಯದಲ್ಲಿ ಏನು ಕಡಿಮೆಯೆ?

ಮದುವೆ ಊಟದ ಸಮಯದಲ್ಲಿ ಟೇಬಲ್ ಮೇಲೆ ಪೇರಿಸಿರುವ ಪ್ರತಿ ತಿನಿಸಿಗೂ ಹಿಗ್ಗಿ ಹಿಗ್ಗಿ ಜಾಗ ಮಾಡಿಕೊಡುವುದಿಲ್ಲವೆ? ಪುಷ್ಪಕ ವಿಮಾನದಂತೆ!

ಮೂಗು ತನ್ನಷ್ಟಕ್ಕೆ ತಾನು ಇರುವುದೆ? ಸುವಾಸನೆಯನ್ನು ಹೀರಲು ಅಗಲವಾಗಿ ಹಿಗ್ಗಿದರೆ ಬೇರೆಯವರ ವಿಷಯದಲ್ಲಿ ವಿನಾಕಾರಣ ಮೂಗು ತೂರಿಸಲು ಮುಂದಕ್ಕೆ ಹಿಗ್ಗುತ್ತದೆ. ಕೇಳುವುದಕ್ಕಿಂತ ಕದ್ದು ಕೇಳುವುದು ಹೆಚ್ಚು ಖುಷಿ ತರುವುದೆಂದು ನಮ್ಮ ಕಿವಿಯ ಅಭಿಪ್ರಾಯ. ಹಾಗಾಗಿ ಅಕ್ಕಪಕ್ಕದ ತುಣುಕು ಮಾತುಗಳನ್ನು ಕೂಡ ಕೇಳಿ ಸವಿಯಲು ಹಿಗ್ಗುತ್ತಿರುತ್ತದೆ.

ನಾಲಿಗೆಗೆ ತನ್ನ ಮೂಲಭೂತ ಕ್ರಿಯೆಯಾದ ಸ್ವಾದದ ಬಗ್ಗೆ ಅಷ್ಟೇನೂ ಆಸಕ್ತಿ ಇಲ್ಲ. ಆದರೆ ವಾಗ್ಯುದ್ಧಗಳಲ್ಲಿ ಹರಿತ ಹಾಗೂ ಕಠೋರವಾದ ಪದಗಳಿಗೆ ಎಡೆ ಮಾಡಿಕೊಡಲು ಅಪರಿಮಿತವಾಗಿ ಹಿಗ್ಗುತ್ತದೆ.

ನಮ್ಮ ಮಕ್ಕಳು ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದಾಗ ನಮ್ಮ ಹೃದಯ ಹಿಗ್ಗದೆ? ಹಾಗೆಯೇ ಮಗ ಅಪರೂಪಕ್ಕೆ ಹೇರ್ ಕಟ್ ಮಾಡಿಸಿಕೊಂಡಾಗ ಅಥವಾ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಮಕ್ಕಳು ಕುರ್ತಾ ಪೈಜಾಮ ಸೀರೆ ಧರಿಸಿ ಸಂಭ್ರಮದಿಂದ ಓಡಾಡುತ್ತಿದ್ದಾಗ ಕೂಡ ಹಿಗ್ಗುತ್ತದಲ್ಲವೆ? ಇದಕ್ಕೆ ಮಿಗಿಲಾಗಿ ಮೊಬೈಲ್/ನೆಟ್‌ವರ್ಕ್‌ಗಳಿಂದ ಹೊರತಾಗಿರುವ ಮಕ್ಕಳನ್ನು ಕಂಡರೆ ಹೃದಯ ಮತ್ತಷ್ಟು ಹಿಗ್ಗುವುದು.

ಶಾಪಿಂಗ್ ಹೋದ ಮಡದಿ 3-4 ತಾಸುಗಳ ನಂತರ ಖಾಲಿ ಕೈಯಲ್ಲಿ ಹಿಂತಿರುಗಿದರೆ ನಮ್ಮ ದವಡೆಗಳು ಅತ್ಯಾಶ್ಚರ್ಯದಿಂದ ಹಿಗ್ಗುವುದು ಖಚಿತ! ✻✻

# ನಾಯಿಯ ಫೈಸ್ಲಾ

**- ಅನಿತಾ ನರೇಶ್ ಮಂಚಿ**

**ದೂ**ರದ ಕಾಲೇಜು ಎಂದ ಮೇಲೆ ಉಳಿದುಕೊಳ್ಳಲು ವ್ಯವಸ್ಥೆ ಬೇಡವೇ..? ನನ್ನ ಲಗೇಜ್ ಸಮೇತ ಬಂದಿಳಿದದ್ದು ಮೆಸ್‌ಗೆ. ಹೆಸರಾಂತ ಕಾಲೇಜ್ ಆದ ಕಾರಣ ಅದರ ಸುತ್ತಮುತ್ತಲಿದ್ದ ಮನೆಯವರಿಗೆ ಇದೊಂದು ಲಾಭದಾಯಕ ಉದ್ಯೋಗವೇ ಆಗಿತ್ತು. ಮನೆಯಂತೆಯೇ ಇರುವ ಕಾರಣ ಜೈಲಿನ ಸೆಲ್ಲುಗಳಂತಹ ಹಾಸ್ಟೆಲ್ ರೂಮುಗಳನ್ನು ನೆನಪಿಸುತ್ತಿರಲಿಲ್ಲ. ಹಾಸ್ಟೆಲ್ಲಿನ ಎಲ್ಲಾ ಸವಲತ್ತುಗಳನ್ನು ಹೊಂದಿದ್ದರೂ, ಅಲ್ಲಿನಂತೆ ವಾರ್ಡನ್‌ನ ಹೆದರಿಕೆಯಿರಲಿಲ್ಲ. ಮೆಸ್ಸಿನಲ್ಲಿದ್ದವರನ್ನು ಮೇಡಂ ಎನ್ನದೆ ಆಂಟೀ ಎಂದು ಕರೆದು ಪೂಸಿ ಹೊಡೆಯುವ ಸೌಭಾಗ್ಯವನ್ನು ಹೊಂದಿದ್ದೆವು.

ಹುಡುಗಿಯರ ಮೆಸ್ ಎಂದ ಮೇಲೆ ಕೇಳಬೇಕೆ.. ಸದಾ ಮಾತು ಮಾತು ಮಾತು.. ಎಂದೂ ಮುಗಿಯದ ಮಾತಿನ ಪ್ರಪಂಚ ನಮ್ಮದು. ಆಗೆಲ್ಲ ಆಂಟಿ ತಾಳುವಷ್ಟು ತಾಳಿ ನಂತರ ಬಯ್ಯುತ್ತಿದ್ದರು. 'ನೀವೆಂತ ಕಾಲೇಜಿಗೆ ಸೇರಿದ್ದು ಮಾತಾಡ್ಲಿಕ್ಕಾ.. ನಿಮ್ಮ ಪುಸ್ತಕಕ್ಕೆಲ್ಲ ಫಂಗಸ್ ಬಂದಿದೆ ನೋಡಿ. ನನ್ನ ಗ್ರಾಚಾರಕ್ಕೆ ನೀವು ಫೈಲ್ ಆದ್ರೆ ಬರುವ ವರ್ಷ ಒಂದಾದ್ರು ಮಕ್ಕಳು ನನ್ನ ಮನೆಗೆ ಬರ್ಲಿಕ್ಕುಂಟಾ.. ನೀವು ಹೀಗೆ ಮಾಡಿದ್ರೆ ನಾನು ಉಪವಾಸ ಬೀಳ್ಬೇಕಷ್ಟೆ. ನನ್ನ ಕರ್ಮ ನೀವು ಒಳ್ಳೇ ಮಕ್ಕಳು ಅಂತಲ್ವಾ ನಾನು ಸೇರಿಸಿಕೊಂಡದ್ದು.. ನೀವು ಹೀಗೆ ಮಾಡುವುದಾ..' ಎಂದು ತಮ್ಮ ಭಯವನ್ನು ಹೊರ ಹಾಕಿ ನಮ್ಮನ್ನೂ ಹೆದರಿಸುತ್ತಿದ್ದರು.

> 'ಆವೋ ರಾಜ ತುಮ್ಹೆ ಅಂಡಾ ಕೊಡ್ತೀನಿ...' ಎಂದಾಗ ನಮ್ಮ ಶ್ವಾನ ಸುಂದರ ಕಿವಿ ನಿಮಿರಿಸಿ ನಮ್ಮನ್ನು ನೋಡಿ ಬಾಲ ಅಲ್ಲಾಡಿಸುತ್ತಾ ಹತ್ತಿರ ಬಂದಾಗ ನಾವು ಗೆದ್ದಿದ್ದೆವು

ಒಂದೆರಡು ದಿನ ಇಂಟೆನ್ಸಿವ್ ಕೇರ್‌ನಲ್ಲಿರುವ ಪೇಷಂಟಿನಷ್ಟು ಸೀರಿಯಸ್ಸು ಮುಖ ಹೊತ್ತು ಪುಸ್ತಕದೊಳಗೆ ಮುಳುಗುತ್ತಿದ್ದೆವು. ಮತ್ತೆ ನಾಯಿ ಬಾಲ ಡೊಂಕಾಗುತ್ತಿತ್ತು. ನಮ್ಮ ಈ ದಿನಚರಿಗೆ ಇನ್ನಷ್ಟು ರಂಗು ಬಂದಿದ್ದು ಹೊಸ ಹುಡುಗಿಯೊಬ್ಬಳು ಬೊಂಬಾಯಿಯಿಂದ ಎಂಟ್ರಿ ಕೊಟ್ಟಾಗ.

ಆದಿತ್ಯವಾರದ ರಜಾ ದಿನವದು. ಎಂದಿನಂತೆ ಓದುವ ನೆಪದಲ್ಲಿ ಪಿಸಿ ಪಿಸಿ ಹರಟುತ್ತಿದ್ದೆವು. ಹೊರಗಿನ ಬಾಗಿಲು ಬಡಿಯಿತು. ಬಾಗಿಲ ಪಕ್ಕದಲ್ಲೇ ಕುಳಿತಿದ್ದ ನಾನು ಅಂದಿನ ಓದಿಗೆ ಆದ ಸುಖಾಂತದಿಂದಾಗಿ ಸಂತೋಷದಿಂದ ಎದ್ದು ಬಾಗಿಲು ತೆರೆದೆ. ಹೊರಗೆ ಒಬ್ಬಳು ನಮ್ಮದೇ ವಯಸ್ಸಿನ ಹುಡುಗಿ, ಅವಳ ಜೊತೆಯಲ್ಲಿ ಅವಳ ಅಪ್ಪ ಅಮ್ಮ ಆಗಿರಬಹುದು ಎಂದು ನಾನೆಂದುಕೊಂಡ ಮತ್ತಿಬ್ಬರು ನಡು ವಯಸ್ಕರು. ಅವರು

ಹಿಂದಿಯಲ್ಲಿ 'ಮಾಜೀ ಹೆ ಕ್ಯಾ..?' ಎಂದರು. ಹೈಸ್ಕೂಲಿನಲ್ಲಿರುವಾಗ ಬಾಯಿ ಪಾಠ ಮಾಡಿ ಹೇಗೋ ಕಷ್ಟಪಟ್ಟು ಫಸ್ಟ್ ಕ್ಲಾಸಿನ ಹೊಸಿಲೊಳಗೆ ಬಲವಂತವಾಗಿ ಅದನ್ನೆಳೆದು ತಂದ ಸಾಹಸಿ ನಾನು. ಕಸ್ತೂರಿ ಕನ್ನಡ ಮಾತ್ರ ಮಾತನಾಡುತ್ತಿದ್ದ ನನಗೆ ಹಿಂದಿಯಲ್ಲಿ ಮಾತನಾಡುವುದೆಂದರೆ ನೀರಿಳಿಯದ ಗಂಟಲೊಳ್ ಕಡುಬು ತುರುಕಿದಂತೆಯೇ ಸರಿ. ಸಹಾಯಕ್ಕಾಗಿ ಗೆಳತಿಯರ ಮುಖ ನೋಡಿದರೆ ಸರಿ ಸುಮಾರು ನನ್ನಷ್ಟೇ ಭಾಷಾ ಪಾಂಡಿತ್ಯ ಹೊಂದಿದ ಅವರು ಪುಸ್ತಕದೊಳಗೆ ತಮ್ಮ ಮಸ್ತಕ ತೂರಿಸಿ ಗಂಭೀರರಾಗಿದ್ದಾರೆ. ನಾನೇ ಧೈರ್ಯ ತಂದುಕೊಂಡು 'ಆಯಿಯೇ.. ಬೈಟಿಯೇ..' ಎಂದು, ಮರುಕ್ಷಣದಲ್ಲಿ 'ಆಂಟೀ' ಎಂದು ಕೂಗುತ್ತಾ ಅಲ್ಲಿಂದ ಕಾಲು ತೆಗೆದೆ. ಅವರ ಮತ್ತುಳಿದ ಸಂಭಾಷಣೆಗಳೆಲ್ಲಾ ಅವರ ಮಾತೃಭಾಷೆ ಕೊಂಕಣಿಯಲ್ಲೇ ಮುಂದುವರಿದು ಆ ಹುಡುಗಿ ನಮ್ಮ ಮೆಸ್ಸಿನ ಹೊಸ ಸದಸ್ಯಳಾದಳು. ಅವಳ ಅಮ್ಮ ಅವಳನ್ನು ಬಿಟ್ಟು ಅಳುತ್ತಾ ಹೊರನಡೆದರೆ, ಅವರು ಹೊರನಡೆದ ತಕ್ಷಣ ಅವಳು ತನ್ನ ಲಗೇಜಿನ ಮೇಲೆಯೇ ಬೋರಲು ಬಿದ್ದು ಅಳತೊಡಗಿದಳು. ಇದೆಲ್ಲಾ ಮಾಮೂಲಿ ಎಂಬಂತೆ ಆಂಟೀ ತಮ್ಮ ಕೆಲಸ ನೆನಪಿಸಿಕೊಂಡು ಒಳಗೆ ಹೋದರು. ನಮಗೆ ಅವಳನ್ನು ಸುಮ್ಮನೆ ಬಿಡಲಾದೀತೇ.. ಎಷ್ಟೆಂದರು ಅವಳು ನಮ್ಮಂತೆ ದೂರದೂರಿಂದ ಬಂದವಳಲ್ಲವೆ? ಆದರೆ ನಮ್ಮೊಳಗೆ ಗಡಿ ಸಮಸ್ಯೆಯಂತೆ ಭಾಷಾ ಸಮಸ್ಯೆ ಇತ್ತು. ಹಾಗಾಗಿ ನಾವು ಅವಳನ್ನು ಯಾವ ಭಾಷೆಯಲ್ಲಿ ಸಮಾಧಾನಿಸುವುದು ಎಂದು ತಲೆಕೆಡಿಸಿಕೊಳ್ಳತೊಡಗಿದೆವು. ಇದ್ದ ಹದಿನಾಲ್ಕು ಮಂದಿಯೂ ಆಲೋಚಿಸಿ ಅವಳಿಗೆ ಅರ್ಥವಾಗುವ ಹಿಂದಿಯಲ್ಲಿಯೇ ಒಂದೆರಡು ವಾಕ್ಯ ರಚಿಸಿದೆವು. ಅದನ್ನು ಉರು ಹೊಡೆಯಲು ಸಮಯವಿಲ್ಲದ್ದುದರಿಂದ ಹಾಳೆಯೊಂದರಲ್ಲಿ ಬರೆದುಕೊಂಡು ದೊಡ್ಡದಾಗಿ ಓದಿ ಹೇಳಿದೆವು. ಅವಳು ನಮ್ಮ ಈ ಪಜೀತಿಗಳನ್ನು ನೋಡುತ್ತಾ ಅಳುತ್ತಿದ್ದವಳು ಬಿದ್ದು ಬಿದ್ದು ನಗತೊಡಗಿದಳು.

ಸದ್ಯದ ಪರಿಸ್ಥಿತಿ ಸುಧಾರಿಸಿದರೂ ಇನ್ನು ವರ್ಷ ಪೂರ್ತಿ ಅವಳ ಜೊತೆ ಏಗಬೇಕಲ್ಲ ಎಂಬುದೇ ನಮ್ಮ ಚಿಂತೆ. ಈಗ ಅಚ್ಚ ಕನ್ನಡದ ಹುಚ್ಚು ಕಂದಮ್ಮಗಳಾದ ನಾವು ಅವಳಿಗೆ ಕನ್ನಡ ಕಲಿಸುವ ಬಗ್ಗೆ ಆಲೋಚಿಸುವ ಬದಲು ನಾವೆಲ್ಲ ಹಿಂದಿ ಕಲಿಯಲು ಉತ್ಸುಕರಾದೆವು. ಈ ರಾಷ್ಟ್ರ ಭಾಷೆ ಎಂಬ ಕಬ್ಬಿಣದ ಕಡಲೆ ನಮ್ಮೆಲ್ಲರ ಬಾಯಲ್ಲೂ ತುಂಬಿಕೊಂಡಿತು.

ನಮ್ಮೆದುರಿಗಿದ್ದ ಏಕಮಾತ್ರ ಉಪಾಯವೆಂದರೆ ಏಕಲವ್ಯರಾಗುವುದು. ನಮ್ಮ ಗುರು ದ್ರೋಣಾಚಾರ್ಯರು ನಮ್ಮೆದುರು ನ್ಯಾಷನಲ್ ಟಿವಿಯ ರೂಪದಲ್ಲಿ ಕಾಣತೊಡಗಿದರು. ಕುಳಿತಲ್ಲಿ ನಿಂತಲ್ಲಿ ನಮ್ಮ ಶಬ್ದವೇಧಿ ಬಾಣಗಳು ಯಾರ್‍ಯಾರಿಗೋ ತಗಲತೊಡಗಿದವು. ಆಗ ಟಿವಿಯಲ್ಲಿ ಬರುತ್ತಿದ್ದ ರಾಮಾಯಣ ಸೀರಿಯಲ್ಲಿನಿಂದ ಪ್ರೇರಣೆ ಹೊಂದಿ ಮಾತಾಶ್ರೀ, ಪಿತಾಶ್ರೀಗಳಂತೆ ಎಲ್ಲರ ಹೆಸರಿನ ಮುಂದೆ ಶ್ರೀಗಳನ್ನು ಹಚ್ಚಿ ಅವರನ್ನು ಧನ್ಯರಾಗಿಸಿದೆವು.

ನಮ್ಮ ಗೆಳತಿಯೂ ಈಗ ನಮ್ಮ ಸಮಸ್ಯೆಯನ್ನು ಅರ್ಥಮಾಡಿಕೊಂಡು ಅವಳ ಹಿಂದಿಯನ್ನು ಕುಲಗೆಡಿಸಿ ನಮ್ಮ ಲೆವೆಲ್ಲಿನಲ್ಲೇ ಮಾತನಾಡತೊಡಗಿದಳು.

'ಪಾನೀ ಕಾಯ್ತಾ ಇದೆ ಜಲ್ದಿ ನಹಾಕೆ ಬಾ...' ಎಂದರೆ ಎದ್ದು ಸ್ನಾನದ ಮನೆಗೆ ಹೋಗುವಷ್ಟು ಬುದ್ಧಿವಂತಳಾದಳು.

ನಮ್ಮ ಮೆಸ್ಸಿನಲ್ಲಿ ಒಂದು ಪೀಚಲು ಶರೀರಿ ನಾಯಿ ಇತ್ತು. ಅದು ಬ್ಯಾಂಕ್ ಮೆನೇಜರರೊಬ್ಬರ ನಾಯಿಯೆಂದೂ, ಅವರು ವರ್ಗವಾಗಿ ಹೋಗುವಾಗ ನಾಯಿಯನ್ನು ಅನಾಥವಾಗಿ ಇಲ್ಲಿಯೇ ಬಿಟ್ಟು ಹೋಗಿದ್ದರು ಎಂಬ ಇತಿಹಾಸ ಹೊತ್ತ ನಾಯಿ ಅದಾದ ಕಾರಣ ನಮ್ಮೆಲ್ಲರ ಕರುಣೆಗೂ ಅದು ಪಾತ್ರವಾಗಿತ್ತು. ಮತ್ತು ಇಲ್ಲಿ ನಿತ್ಯ ಆಹಾರ ಸಿಗುತ್ತಿದ್ದುದರಿಂದ ಅದು ಇಲ್ಲಿಯೇ ಅತ್ತಿತ್ತ ಸುಳಿಯುತ್ತಾ ಇದ್ದುದರಿಂದಾಗಿ ಇಲ್ಲಿಯದೇ ನಾಯಿ ಎಂಬಂತಾಗಿತ್ತು. ಅದಕ್ಕೆ ಅದರ ಪಾಲಿನ ಆಹಾರವಲ್ಲದೇ ನಮ್ಮೆಲ್ಲರ ಉಳಿಕೆಯ ಆಹಾರವನ್ನು ಹಾಕುತ್ತಿದ್ದೆವು. ಅದು ಎಲ್ಲವನ್ನೂ ಗಬ ಗಬನೆ ನುಂಗಿ ಮತ್ತೆ ನಮ್ಮನ್ನು ನೋಡಿ ಬೊಗಳುತ್ತಿತ್ತು. ನಾವೆಷ್ಟೇ ಬೆಣ್ಣೆ ಹಚ್ಚಿ ದೋಸೆ ತಿನ್ನಿಸಿದರೂ ಅದು ನಮ್ಮನ್ನು ನೋಡಿ ಗುರ್ ರ್ರ್.. ಅನ್ನುತ್ತಲೇ ಇತ್ತು. ಅಷ್ಟೇಕೆ ಮೆಸ್ಸಿನ ಆಂಟಿಯನ್ನು ನೋಡಿಯೂ ಆಗೀಗ ಬೊಗಳಿ ಗದ್ದಲವೆಬ್ಬಿಸುತ್ತಿತ್ತು. ನಾವ್ಯಾರೂ ಆ ನಾಯಿ ಬಾಲ ಅಲ್ಲಾಡಿಸುವುದನ್ನೇ ನೋಡಿರಲಿಲ್ಲ. ಒಮ್ಮೊಮ್ಮೆ ಬಯ್ಯುವವರು ಯಾರೂ ಕಾಣಿಸದೇ ಇದ್ದರೆ ಮನೆಯ ಒಳಗೆ ನುಗ್ಗಿ ಬರುತ್ತಿತ್ತು. ಅದಕ್ಕೆ ತಂಟೆ ಮಾಡಿದರೆ ಹೊಡೆಯಲೆಂದೇ ಆಂಟಿ ಒನಕೆಯಿಂದ ಸ್ವಲ್ಪ ಕಡಿಮೆ ದಪ್ಪದ ಕೋಲೊಂದನ್ನು ತಂದಿರಿಸಿದ್ದರು. ಇದು ಮಲ್ಟಿ ಪರ್ಪಸ್ ಕೋಲು. ನಮ್ಮ ಆಂಟಿ ಕೆಲಸದಲ್ಲಿ ತುಂಬಾ ಚುರುಕು. ನಮ್ಮೆಲ್ಲರಿಗೂ ಹೊತ್ತು ಹೊತ್ತಿಗೆ ರುಚಿ ರುಚಿಯಾಗಿ ಅಡುಗೆ ಮಾಡಿ ಹಾಕುತ್ತಿದ್ದುದಲ್ಲದೇ, ಹಪ್ಪಳ ಸಂಡಿಗೆ ಬಾಳ್ಕಗಳಂತವುಗಳನ್ನು ಮಾಡಿ ಮಾರಾಟ ಮಾಡುತ್ತಿದ್ದರು. ಅದನ್ನು ಒಣಗಲು ಹಾಕಿದ್ದು ಅದು ಹೇಗೆ ಕಾಗೆಗಳಿಗೆ ಗೊತ್ತಾಗುತ್ತಿತ್ತೋ ಏನೋ? ಹುಡುಗರು, ಹುಡುಗಿಯರ ಹಾಸ್ಟೆಲ್ಲಿನ ಮುಂದೆ ಅತ್ತಿತ್ತ ಠಳಾಯಿಸುವಂತೆ ಇವು ಹಾರಾಟ ಪ್ರಾರಂಭಿಸುತ್ತಿದ್ದವು. ಆಗ ಆಂಟಿ ಈ ಕೋಲನ್ನು ನೆಲಕ್ಕೆ ಹೊಡೆದು ದೊಡ್ಡ ಶಬ್ಧವೆಬ್ಬಿಸಿ ಅವುಗಳನ್ನು ಹೆದರಿ ಹಾರುವಂತೆ ಮಾಡುತ್ತಿದ್ದರು. ಮನೆಯೊಳಗೆ ಸೇರಿಕೊಂಡ ಜಿರಲೆಗಳನ್ನು ಹೊಡೆಯಲು, ಅಪರೂಪಕ್ಕೊಮ್ಮೆ ನಮ್ಮ ಕೈಗೆ ಸಿಗುತ್ತಿದ್ದ ಮೂಷಿಕವನ್ನು ಮುಗಿಸಲು ಇದೇ ಕೋಲು ಉಪಯೋಗವಾಗುತ್ತಿತ್ತು. ನನ್ನಂತಹ ಉದ್ದ ಕಮ್ಮಿ ಇರುವವರಿಗೆ ಬಟ್ಟೆ ಹರವಲು ಉಪಯೋಗಿಸಲ್ಪಡುತ್ತಿತ್ತು. ನಾವೇನಾದರೂ ರಾಜ ಮಹಾರಾಜರ ವಂಶಸ್ಥರಾಗಿದ್ದರೆ ಈ ಮಲ್ಟಿ ಪರ್ಪಸ್ ಕೋಲಿಗೆ ಚಿನ್ನದ ಕಟ್ಟು ಹಾಕಿಸುತ್ತಿದ್ದುದರಲ್ಲಿ ಸಂಶಯವೇ ಇರಲಿಲ್ಲ. ಅದು ಯಾರು ಕಣ್ಣುಮುಚ್ಚಿ ಕೈ ನೀಡಿದರೂ ಹಿಂದಿನ ಬಾಗಿಲಿನ ಮೂಲೆಯಲ್ಲಿ ಕೈಗೆ ಸಿಗುವಂತಿರುತ್ತಿತ್ತು. ಮತ್ತು ಯಾರೇ ತೆಗೆದರೂ ಅಲ್ಲೇ ಇಡಬೇಕೆನ್ನುವ ಸುಗ್ರೀವಾಜ್ಞೆಗೂ ಒಳಪಟ್ಟಿತ್ತು.

ಇಂತಿರ್ಪ ಕೋಲು ಒಂದು ದಿನ ಇದ್ದಕ್ಕಿದ್ದಂತೆ ಮಾಯವಾಗಬೇಕೇ.. ನಮ್ಮ ಮೆಸ್ಸಿನ ಆಂಟಿಯಂತೂ ಮೆಸ್ಸಿನ ಹುಡುಗಿಯರು ಕಳೆದು ಹೋಗಿದ್ದರೂ ಇಷ್ಟು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ತಮ್ಮ ದೇಹದ ಭಾಗವೇ ತುಂಡಾಯಿತೇನೋ ಎಂಬಂತಹ ದುಃಖದಲ್ಲಿ ಮುಳುಗಿದ್ದರು. ನಾವೆಲ್ಲರೂ ಎಲ್ಲಾ ಕಡೆ ಹುಡುಕಿ ಬಸವಳಿದೆವು. ನಮ್ಮ ಹಿಂದಿ ಹುಡುಗಿಯೊಬ್ಬಳ ವಿನಃ ಉಳಿದೆಲ್ಲರೂ ಈ ಸಂತಾಪದ ಸಮಯದಲ್ಲಿ ಒಟ್ಟಾಗಿ ನಿಂತಿದ್ದೆವು.

ಅವಳು ಎರಡು ತಿಂಗಳಲ್ಲಿ ಬರುವ ಆದಿತ್ಯವಾರದಲ್ಲಿ ಇದು ಕೊನೆಯ ಆದಿತ್ಯವಾರವಾದ್ದರಿಂದ, ತನ್ನ ಬಟ್ಟೆಗಳನ್ನು ಒಗೆಯಲು ಬಾತ್ ರೂಮ್ ಸೇರಿದ್ದಳು. ಉಳಿದೆಲ್ಲಾ ಆದಿತ್ಯವಾರಗಳಲ್ಲಿ ನಾವು ನಮ್ಮ ಒಂದು ವಾರದ ಬಟ್ಟೆಯನ್ನು ಒಗೆಯುತ್ತಾ ಕಷ್ಟಪಡುತ್ತಿದ್ದರೆ – ಅವಳು ಅವಳ ಹಾಕಿದ ಬಟ್ಟೆಗಳಿಗೆ ಸೆಂಟ್ ಸಿಂಪಡಿಸಿ, ಮಡಚುವ ಕಾಯಕವೆಸಗುತ್ತಿದ್ದಳು. ಈಗ ಬಾತ್ ರೂಮಿನಿಂದ ಅವಳ ಹಿಂದೀ ಹಾಡುಗಳು ನಮ್ಮ ಕಿವಿಯ ತಮಟೆಯನ್ನಪ್ಪಳಿಸುತ್ತಿದ್ದವು. ಅವಳ ಹಾಡುಗಳು ಎಷ್ಟು ಚೆನ್ನಾಗಿದ್ದವೆಂದರೆ, ರೊಮ್ಯಾಂಟಿಕ್ ಹಾಡುಗಳು ಶೋಕಗೀತೆಯಂತೆಯೂ, ಶೋಕಗೀತೆಗಳು ಯಕ್ಷಗಾನದ ಏರುಪದಗಳಂತೆಯೂ ಕೇಳಿಸುತ್ತಿದ್ದವು. ಆದರೆ ನಮ್ಮ ಬಾತ್‌ರೂಮಿನ ಚಿಲಕ ಸರಿ ಇಲ್ಲದ ಕಾರಣ ಎಲ್ಲರೂ ಹಾಡು ಹೇಳುವುದು ಅನಿವಾರ್ಯವಾಗಿತ್ತು.

ಹೊರಗೆ ನಿಂತು 'ಕೋಲ್ ಹೆ ಕ್ಯಾ ನಿನ್ನ ಪಾಸ್' ಅಂತ ವಿಚಾರಿಸಿಕೊಂಡೆವು.. ಅವಳು ನಹೀ.. ಡಂಡಾ ಹೆ ಎಂದು ಕಿರುಚಿ ಹಾಡು ಮುಂದುವರಿಸಿದಳು. ದಂಡಪಿಂಡ ಯಾವುದಿದ್ದರೂ ನಮಗೇನಂತೆ ಎಂದು ನಾವು ಮತ್ತೆ ಕೋಲನ್ನು ಅರಸುತ್ತಾ ಮನೆಯ ಮೂಲೆ ಮೂಲೆ ಸುತ್ತುತ್ತಿದ್ದೆವು. ಇದ್ದಕ್ಕಿದ್ದಂತೇ ಬಾತ್‌ರೂಮಿನಿಂದ ಹಿಂದೀ ಹಾಡಿನ ಜೊತೆ ಟಪ್ ಟಪ್ ಎಂಬ ಸದ್ದು ಹಾಡಿನೊಡನೆ ಶೃತಿಯಂತೆ ಕೇಳಿ ಬರತೊಡಗಿತು. ನಾವೆಲ್ಲಾ ಹೋಗಿ ಬಾತ್‌ರೂಮಿನ ಬಾಗಿಲು ತೆರೆಯುವುದನ್ನು ಕಾದು ನಿಂತೆವು. ಬಾಗಿಲು ತೆರೆಯಿತು. ನಮ್ಮೆಲ್ಲರ ಗದ್ದಲವನ್ನು ಒಳಗಿನಿಂದಲೇ ಕೇಳಿದ್ದ ಅವಳು, 'ಕ್ಯಾ ಹುವಾ ಕ್ಯಾ ಡೂಂಡ್ ರಹೆ ಹೆ ಆಪ್' ಅಂತ ಕೇಳುತ್ತಾ ಹೊರಬಂದಳು. ಅವಳೀಗ ಒನಕೆ ಓಬವ್ವನ ಸ್ಟೈಲಿನಲ್ಲಿ ಕಚ್ಚೆಯ ಬದಲು ಹಾಫ್ ಪ್ಯಾಂಟ್ ಹಾಕಿ ಕೈಯಲ್ಲಿ ಒನಕೆಯ ಬದಲು ಕೋಲು ಹಿಡಿದು ನಿಂತಿದ್ದಳು. ಕಲ್ಲಿನಲ್ಲಿ ಬಟ್ಟೆ ಒಗೆಯುವ ಅಭ್ಯಾಸ ಇಲ್ಲದ ಕಾರಣ ಅವಳು ಕೋಲನ್ನು ಬಟ್ಟೆಗಳಿಗೆ ಬಡಿದು ನಮಗೆ ತಿಳಿಯದ ಹೊಸ ರೀತಿಯಲ್ಲಿ ಬಟ್ಟೆ ಒಗೆಯುತ್ತಿದ್ದಳು. ಇದನ್ನೇ ಹುಡ್ಕಿದ್ದು ಅಂತ ಅವಳ ಕೈಯಲ್ಲಿದ್ದ ಕೋಲನ್ನು ತೋರಿಸಿದೆ. 'ಪೆಹೆಲೆ ಹಿ ಬತಾಯಾತಾನಾ.. ಡಂಡಾ ಹೆ ಮೆರೆ ಪಾಸ್..' ಎಂದು ತಣ್ಣಗೆ ಹೇಳುತ್ತಾ ಬಾಗಿಲ ಮೂಲೆಯಲ್ಲಿಟ್ಟಳು.

ಒಂದು ದಿನ ಬೆಳಗ್ಗೆ ಇದ್ದಕ್ಕಿದ್ದಂತೆ ನಾಯಿ ಕುಂಯ್ ಕುಂಯ್ ಎಂದು ಬಾಲ ಅಲ್ಲಾಡಿಸುತ್ತಾ ಕುಣಿಯುವುದು ಕಾಣಿಸಿತು. ಅದರೆದುರಲ್ಲಿ ನಮ್ಮ ಬಾಂಬೇ ಬೆಡಗಿ ಹುಣಸೇ ಬೀಜದಷ್ಟು ದೊಡ್ಡ ಮಾರೀ ಬಿಸ್ಕೆಟ್ಟಿನ ತುಂಡನ್ನು ಹಿಡಿದು 'ಆವೋ ರಾಜಾ.. ತುಮ್ಹೇ ಬಿಸ್ಕೆಟ್ ಕಿಲಾತೀ ಹೂಂ..' ಎಂದು ನಿಂತಿದ್ದಳು ನಾವು ಇಡೀ ಪ್ಯಾಕೆಟ್ ಬಿಸ್ಕೆಟ್ ಹಾಕಿದರೂ ಬಾಲ ಎತ್ತದೇ ಗುರ್ರ್ ಅನ್ನುವ ನಾಯಿ ಈಗ ಈ ರೀತಿ ವರ್ತಿಸುವುದು ಅಚ್ಚರಿ ತರಿಸಿತು. ಅದು ಅವಳನ್ನು ಎಷ್ಟು ಹಚ್ಚಿಕೊಂಡಿತೆಂದರೆ ಅವಳ ಆಜ್ಞಾನುಸಾರಿಯಾಗಿ ಅವಳು 'ಬೈಟೊ' ಎಂದರೆ ಕುಳಿತು, 'ಉಠೋ' ಎಂದರೆ ನಿಂತು ನಮಗೆ ಅಚ್ಚರಿ ತರಿಸಿತು.

ನಾವೆಲ್ಲರೂ ಈಗ ನಮ್ಮ ಪಾಠ ಪುಸ್ತಕಗಳನ್ನು ಬದಿಗಿಟ್ಟು ನಾಯಿಯ ಈ ನಡವಳಿಕೆಯ ಬಗ್ಗೆ ಸಂಶೋಧನೆ ಪ್ರಾರಂಭಿಸಿದೆವು. ಆ ಸಂಶೋಧನೆ ಎಷ್ಟು ಗಂಭೀರವಾಗಿತ್ತೆಂದರೆ ನಾವು ನಾಯಿಯ ಬಾಲದಂತೆ ಅದರ ಹಿಂದೆಯೇ ಬಿದ್ದಿರುತ್ತಿದ್ದೆವು. ಅದನ್ನು ನಾವೂ ಒಲಿಸಿಕೊಳ್ಳಲು

ಮನೆಯವರು ಗೋಗರೆದು ಕೇಳಿದರೂ ಕೊಡದ ನಮ್ಮ ನಮ್ಮ ಪಾಕೆಟ್ ಮನಿಯನ್ನು ಖರ್ಚು ಮಾಡಿ ನಾಯಿಗಾಗಿ ಬ್ರೆಡ್ಡಿನಿಂದ ಹಿಡಿದು ರಸ್ಕಿನವರೆಗೆ, ಮೊಟ್ಟೆಯಿಂದ ಹಿಡಿದು ಮೂಳೆಯವರೆಗೆ ತಂದು ಹಾಕುತ್ತಿದ್ದೆವು. ಅದಕ್ಕೆ ಖುಷಿ ಆಗಲೆಂದು 'ನಾಯಿ ಮರಿ ನಾಯಿ ಮರಿ' ಪದ್ಯವನ್ನು ಚೆನ್ನಾಗಿ ಕಲಿತು ಹಾಡುತ್ತಿದ್ದೆವು. ಆದರೂ ಅದು ಮೊದಲಿನಂತೆ ನಾವು ಕೊಟ್ಟದ್ದನ್ನು ತಿಂದು ನಮಗೆ 'ಗುರ್ರ್' ಎನ್ನುತ್ತಾ ಇರುತ್ತಿತ್ತು.

ಮೆಸ್ ಹತ್ತಿರವಿದ್ದುದರಿಂದ ಮಧ್ಯಾಹ್ನ ಊಟಕ್ಕೆ ಅಲ್ಲಿಗೆ ಬರುತ್ತಿದ್ದೆವು. ಒಂದು ದಿನ ನಾವು ಮನೆಗೆ ಬರುವಾಗ ಸೂಟ್ ಬೂಟಿನಿಂದ ಅಲಂಕೃತರಾದವರೊಬ್ಬರು ಆಂಟಿಯೊಂದಿಗೆ 'ಅದು ನನ್ನ ನಾಯಿ, ನಾನು ಅದನ್ನೀಗ ತೊಗೊಂಡು ಹೋಗ್ತೀನಿ' ಅಂತ ಪಟ್ಟುಹಿಡಿದು ಕುಳಿತಿದ್ದರು. ಆಂಟಿ ಸಾಧ್ಯವೇ ಇಲ್ಲ ಎಂದು ಖಡಾಖಂಡಿತವಾಗಿ ನುಡಿಯುತ್ತಿದ್ದರು. ನಾಯಿಯೂ ಅವರನ್ನು ಗುರುತು ಹಿಡಿದು ಬಾಲ ಅಲ್ಲಾಡಿಸುತ್ತಿತ್ತು. ಇದು ಮಾತಿನಿಂದ ಬಗೆಹರಿಯುವಂತೆ ಕಾಣುತ್ತಿರಲಿಲ್ಲ. ಕೊನೆಯದಾಗಿ ಅವರು 'ಆಯ್ತು ಹಾಗಿದ್ರೆ.. ನಾಯಿ ನಾನು ಕರೆದಾಗ ನನ್ನ ಕಡೆ ಬಂದರೆ ನನಗೆ... ನಿಮ್ಮ ಕಡೆ ಬಂದರೆ ನಿಮಗೆ... ನಾಯಿಯೇ ಫೈಸ್ಲಾ ಮಾಡ್ಲಿ' ಎಂದು, ಅವರು 'ಆವೋ ರಾಜ ಮೇರೆ ಪಾಸ್..' ಎಂದರು. ನಮಗೀಗ ನಾಯಿಯ ನಡವಳಿಕೆಯ ಮಿಸ್ಟ್ರಿ ಸಾಲ್ವ್ ಆಯ್ತು. ಅದು ಹಿಂದಿ ಭಾಷೆಗೆ ಒಗ್ಗಿದ ನಾಯಿಯಾದ ಕಾರಣ ನಮ್ಮ ಕನ್ನಡ ಅದಕ್ಕೆ ಅರ್ಥವಾಗುತ್ತಿರಲಿಲ್ಲ. ಎಲ್ಲರೂ ಮುಖ ಮುಖ ನೋಡಿಕೊಂಡೆವು. ನಾವು ಸೋಲುವ ಭಯವೂ ಹುಟ್ಟಿಕೊಂಡಿತು. ಆದ್ರೆ ನಾಯಿಯನ್ನು ನಮ್ಮ ಕಡೆ ಉಳಿಸಿಕೊಳ್ಳಬೇಕಿದ್ರೆ ಅದಕ್ಕೆ ಅರ್ಥವಾಗುವ ಹಿಂದಿಯಲ್ಲೇ ಮಾತಾಡಬೇಕಿತ್ತು. ನಮ್ಮ ಹಿಂದೀ ಸುಂದರಿ ಬೇರೆ 'ಇವತ್ತು ಪ್ರಾಕ್ಟಿಕಲ್ಸ್ ಇದೆ, ಕ್ಯಾಂಟೀನಿಗೆ ಹೋಗ್ತೀನಿ' ಅಂತ ಊಟಕ್ಕೆ ಬಂದಿರಲಿಲ್ಲ.. ಸ್ವಲ್ಪ ಹೊತ್ತು ನಮ್ಮ ಎದೆ ಬಡಿತದ ಸದ್ದೇ ನಮಗೆ ಕೇಳುವಂತಹ ಮೌನ.. ಈಗ ನಮ್ಮ ನಡುವಿನಿಂದ ಒಂದು ಸ್ವರ ನಿಧಾನಕ್ಕೆ ಎದ್ದಿತು. 'ಆವೋ ರಾಜ ತುಮ್ಹೆ ಅಂಡಾ ಕೊಡ್ತೀನಿ..' ನಮ್ಮ ಶ್ವಾನ ಸುಂದರನೀಗ ಕಿವಿ ನಿಮಿರಿಸಿ ನಮ್ಮತ್ತ ನೋಡಿತು. ನಮ್ಮನ್ನು ನೋಡಿ ಬಾಲ ಅಲ್ಲಾಡಿಸುತ್ತಾ ಹತ್ತಿರ ಬಂತು. ನಾವೆಲ್ಲಾ ಪರೀಕ್ಷೆಯಲ್ಲಿ ರ್‍ಯಾಂಕ್ ಬಂದರೆ ಇಷ್ಟು ಸಂತೋಷ ಪಡುತ್ತಿದ್ದೆವೋ ಗೊತ್ತಿಲ್ಲ. ಕೈ ಕೈ ಹಿಡಿದು ಕುಣಿದೆವು. ಬಂದವರು ಸುಮ್ಮನೆ ಎದ್ದು ಹೋದರು.

ನಾಯಿ ಕೂಡಾ ತಾನು ಕಲಿತ ಭಾಷೆಗೆ ಕೊಡುವ ಮರ್ಯಾದೆಯನ್ನು ಕಂಡು ನಾವು ನಮ್ಮ ನುಡಿ ಕನ್ನಡವನ್ನು ಹಿಂದಿ ಹುಡುಗಿಗೆ ಚೆನ್ನಾಗಿ ಕಲಿಸಬೇಕೆಂಬ ದೃಢ ನಿರ್ಧಾರಕ್ಕೆ ಬಂದೆವು. ಜೊತೆಗೆ ಹಿಂದಿ ಭಾಷೆಯನ್ನು ತಪ್ಪಿಲ್ಲದೆ ಮಾತನಾಡುವಷ್ಟಾದರೂ ಕಲಿಯಬೇಕೆಂಬ ಹಠವೂ ಹುಟ್ಟಿತು. ಅಂದಿನಿಂದ ನಮ್ಮ ಹರಟೆಯ ಸಮಯವೆಲ್ಲ ಭಾಷಾ ಕಲಿಕೆಯ ಸಮಯವಾಗಿ ಮಾರ್ಪಟ್ಟಿತು. ನಮ್ಮ ಆಂಟಿ ನಮಗೆಲ್ಲಾ ಬಂದ ಒಳ್ಳೆಯ ಬುದ್ಧಿಗಾಗಿ ಸಂತೋಷ ಪಡುತ್ತಾ, ಬರುವ ವರ್ಷ ತಮ್ಮ ಮೆಸ್ಸಿಗೆ ಇನ್ನಷ್ಟು ಹುಡುಗಿಯರು ಬರುವ ಬಗ್ಗೆ ಕನಸು ಕಾಣತೊಡಗಿದರು.

**

# ಕೊರವಂಜಿ ಪದಬಂಧ – 3

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ವ್ಯವಸಾಯಗಾರನಿಗೇ ಏಕೆ ಈ ದುಃಖ? (3)
3. ಅಂಗ ಧರಿಸಿದ ಗಂಡು! (3)
5. ಕದ್ದ ಈ ಸ್ಟೋರಿ ಕನ್ನಡಿಗನದು (2)
6. ಮಂದಿಗೆಲ್ಲಾ ಈತನೇ ಲೀಡರ್ (5)
8. ಕರವನ್ನೇ ಕಡಿಯಲು ಬಂದಿದೆಯಲ್ಲಾ ಈ ಭಲ್ಲೂಕ (3)
9. ನಂಜಿನಿಂದ ಕೂಡಿದ ಸಂಗತಿಯಿದು (3)
12. ರಮಣ ಸಾಯುವ ಸಮಯದಲ್ಲಿ ಬರೆದ ಓಲೆ (5)
13. ವದನದಲ್ಲೇ ಕಂಡದ್ದು ಈ ಕಾಡು (2)
14. ಈ ಚಡ್ಡಿಯನ್ನು ನೋಡಿದ್ದಕ್ಕೇ ತಲ್ಲಣವೇ? (3)
15. ಕೊನೆ ನಿಂತಿದ್ದ ವರನದು ಅನಾವಶ್ಯ ಹೇಳಿಕೆ (3)

*(ಉತ್ತರಕ್ಕೆ 38ನೇ ಪುಟ ನೋಡಿ)*

**ಮೇಲಿಂದ ಕೆಳಕ್ಕೆ**

1. ಕಥೆ ಕೇಳಿದಾಗ ಉಂಟಾದ ನೋವು (2)
3. ಬಹು ದಿನಗಳ ನಂತರ ಜಳಕ ಮಾಡಿದ್ದಕ್ಕೇ ಈ ರೋಮಾಂಚನ (3)
4. ಗರಬಡಿದಂತೆ ನಿಂತಿಹನಲ್ಲಾ ಈ ಹಳ್ಳಿಗ! (3)
5. ಪಂಚತಂತ್ರದ ನರಿ (4)
6. ಜಡಿ ಮಳೆ ಸುರಿಯಲೆಂದು ಹಿಡಿದ ವಂದರಿ (3)
7. ನಾಮ ಹಾಕಿಯೇ ಮಾಡಿದ ಹೆಸರಿಡುವ ಶಾಸ್ತ್ರ (5)
9. ಕೊನೆಗಿದ್ದ ಚಿತ್ರವೇ ವಿಲಕ್ಷಣ! (3)
10. ಮಾನ ಹೊಂದಿದ ಒಡೆಯನಿವನು (4)
11. ಕಚಡಾ ಬಟ್ಟೆ ಧರಿಸಿದ ರೊಡ್ಡ ಇಲ್ಲಿಗೇಕೆ ಬಂದ? (3)
12. ಮಣ ಭಾರದ ಹೆಣ ಸಾಗಿಸಿದ ಸ್ಮಶಾನ (3)
13. ಪ್ರವರ ಹೇಳಿಕೊಂಡ ಮದುವೆ ಗಂಡು (2)

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂನಳ

- ಪೊರಕೆ ನಿಷ್ಕ್ರಿಯವಾದರೆ ಅದೇ ಕಸವಾಗುತ್ತದೆ.
- ಅರೆ! ಮೇಕ್‌ಅಪ್‌ನಲ್ಲಿ ನಿಮ್ಮ ಮುಖ ಒಂದು ಚೂರು ಕಾಣಿಸುತ್ತಿದೆ!
- ಹುಲಿ ಮೈಸೂರು ನೋಡಬೇಕು ಅಂತ ಬರೊಲ್ಲ....
- ನೋಡೋ ಹಾಗಿದ್ದರೆ ಮನುಷ್ಯರ ಮನಸ್ಸು ನೋಡು. ಇಲ್ಲಾ ಅವರ ಥಾಟ್ಸ್ ನೋಡು. ಅವರ ಡ್ರೆಸ್ ನೋಡಬೇಡ.
- ಅನ್ನೋರ ಅಂತಾರ, ಆಡ್ಕೊಳ್ಳೋರು ಆಡ್ಕೊತಾರೆ. ನಮ್ಮ ಎದಿ ಹಿಗ್ಗು ನಮಗಿದ್ರ ಯಾವ ನೋವು ಎಷ್ಟು ಹೊತ್ತಿನ ಅತಿಥಿ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಿಮ್ಮ ಅಹಂ ನಿಮಗೇ ಅರಿವಾಗತೊಡಗಿದರೆ ನೀವು ಅದನ್ನು ಮೀರಿ ನಡೆಯಲು ಹೊರಟಿದ್ದೀರಿ ಎಂದರ್ಥ.
- ಪ್ರಪಂಚ ಹೇಗೆ ನಡೆಯುತ್ತಿದೆ ಎಂಬುದನ್ನರಿಯಲು ತೋರುವ ಕುತೂಹಲವನ್ನೇ ವಿಜ್ಞಾನ ಎಂದು ಕರೆಯುತ್ತಾರೆ.
- ಗ್ರಾಟಿಟ್ಯೂಡ್ ಮಸ್ಟ್ ಬಿ ಅನ್ ಆಟಿಟ್ಯೂಡ್.
- ಬೈನಾಕ್ಯುಲರ್ ಇದ್ದೋರು ಪಕ್ಷಿಗಳನ್ನು ಅರ್ಥಮಾಡಿಕೊಳ್ಳೋಕೆ ಶ್ರಮಿಸುತ್ತಾರೆ. ಕ್ಯಾಮೆರಾ ಇದ್ದೋರು ಯಾವುದಕ್ಕೆ ಏನೇ ಆದ್ರೂ ನನಗೆ ಫೋಟೋ ಸಿಕ್ರೆ ಸಾಕು ಅಂತ ಪರಿಸರ ಹಾಳು ಮಾಡ್ತಾರೆ.
- ಇದೆಲ್ಲಾ ಯಾವಾಗ ಶುರುವಾಯಿತೆಂದರೆ ಅವನು ನನಗೆ ತಿರುಗಿ ಹೊಡೆದಾಗ...
- ಎಡಗಣ್ಣು ಬಲಗಣ್ಣಿಗೆ ಹೇಳಿದ್ದು: ನಮ್ಮಿಬ್ಬರ ಏಕಾಂತದ ಮಧ್ಯೆ ಮೂಗು ತೂರಿಸಿದ್ದು ಯಾರು?
- ದಿ ರೈಟಿಂಗ್ ಆನ್ ದಿ ವಾಲ್ ಮೆ ಬಿ ಎ ಫೋರ್ಜರಿ.
- ಪಠ್ಯಪುಸ್ತಕ ಹಿಡಿದು ಕುಳಿತುಕೊಳ್ಳುವ ಕೊಠಡಿಗಿಂತ ವಿಶ್ವವೇ ಒಂದು ಉತ್ತಮ ತರಗತಿ.
- ನನ್ನ ಪೂರ್ವಿಕರು ನಿನಗೆ ಏನೇ ಮಾಡಿರಬಹುದು ಆದರೆ ಅದರ ಬಗ್ಗೆ ಅವರು ನನ್ನೊಡನೆ ಸಮಾಲೋಚನೆ ಮಾಡಿಲ್ಲ.
- ಬಯಾಲಜಿ ನಿಮಗೆ ಬ್ರೈನ್ ಕೊಡುತ್ತೆ. ಬದುಕು ಅದನ್ನು ಮನಸ್ಸಾಗಿ ಪರಿವರ್ತಿಸುತ್ತದೆ.
- ಬೌಂಡರೀಸ್ ಡೋಂಟ್ ಪ್ರೊಟೆಕ್ಟ್ ಎ ರಿವರ್; ಪೀಪಲ್ ಡು.

# ಸ್ಟಡಿ ಟೂರ್ ಅಥವಾ ಕಸ್ಟಡಿ ಟೂರ್?

**- ಗಣೇಶ ಹೆಗ್ಗಡೆ**

''**ಸ**ರ್, ಏರ್‌ಪೋರ್ಟಿನಿಂದ ಇಂಟೆಲಿಜೆನ್ಸ್ ಎಸ್.ಪಿ. ಲೈನಿನಲ್ಲಿದ್ದಾರೆ. ಮುಖ್ಯ ಮಂತ್ರಿಗಳ ಹತ್ರಾನೆ ಮಾತಾಡ್ಬೇಕು. ತುಂಬಾ ಗಂಭೀರವಾದ ವಿಷಯ ಅನ್ತಿದಾರೆ ಅವ್ರು.''

''ಸರಿ ಕೊಡಿ. ಸಿ.ಎಂ. ಸ್ಪೀಕಿಂಗ್''

**ವಿದೇಶ ಪ್ರವಾಸದಿಂದ ವಾಪಸಾದ ಶಾಸಕರನ್ನು ರಹಸ್ಯವಾಗಿ ಫಾರೆಸ್ಟ್ ಐಬಿಗೆ ಸಾಗಿಸಲು ಕಾರಣ?**

''ಗುಡ್ ಮಾರ್ನಿಂಗ್ ಸರ್. ವಿದೇಶ ಪ್ರವಾಸದಿಂದ ಎಲ್ಲಾ ಶಾಸಕರೂ ಮಧ್ಯ ರಾತ್ರೆ ಸೇಫಾಗಿ ಲ್ಯಾಂಡ್ ಆಗಿದ್ದಾರೆ. ತಮ್ಮ ಆಣತಿ ಪ್ರಕಾರ ಈಗ ಅವರನ್ನೆಲ್ಲಾ ರಹಸ್ಯವಾಗಿ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು ಚಿಕ್ಕಬರಗಿಯಲ್ಲಿರುವ ಫಾರೆಸ್ಟ್ ಐ.ಬಿ.ಗೆ ಸಾಗಿಸಲಾಗಿದೆ ಸರ್. ಯಾರಿಗೂ ಇಲ್ಲೀವರ್ಗೆ ಅನುಮಾನ ಬಂದಂತಿಲ್ಲ.''

''ಥ್ಯಾಂಕ್ ಗಾಡ್. ಇವರುಗಳು ಬರುವ ಸುದ್ದಿ ಗೊತ್ತಾಗಿ, ಹಗಲು-ರಾತ್ರಿ ಟಿ.ವಿ. ಮಾಧ್ಯಮದವರು ಮತ್ತು ಪತ್ರಕರ್ತರು ಹದ್ದಿನ ತರಹ ಕಾಯ್ತಾ ಇದ್ರಲ್ಲಾ, ಅದು ಹ್ಯಾಗ್ರೀ ಅಷ್ಟು ಸುಲಭವಾಗಿ ತಪ್ಪಿಸ್ಕೊಂಡ್ರು? ನನ್ಗೆ ಜೀವವೇ ಹೊರಟು ಹೋಗಿತ್ತು.''

''ನಿಜ ಸರ್. ಒಂದು ಕ್ಷಣ ನಮ್ಮ ಗುಪ್ತಚರ ಇಲಾಖಾ ಸಿಬ್ಬಂದಿಯೇ ಚಳ್ಳೇಹಣ್ಣು ತಿನ್ನುವಂತಾಗಿತ್ತು. ಆದ್ರೆ ನಮ್ಮ ಪಿ.ಸಿ.ಯೊಬ್ಬ ಚಾಣಕ್ಷ. ಏನಾಯ್ತೂಂದ್ರೆ, ಹನ್ನೊಂದು ಜನ ಟೂರಿಸ್ಟ್‌ಗಳು ಬರ್ಮುಡಾ ಚಡ್ಡಿ, ಟಿ ಷರ್ಟ್, ಹಿಪ್ಪಿ ಕಟ್ಟಿನ ತಲೆಗೂದಲು, ಕಿವಿಯಲ್ಲಿ ರಿಂಗ್, ಕೈಯಲ್ಲಿ ಬಾಟಲು (ನೀರಿನ) ಹಿಡಿದು ಇಳಿದಾಗ ನಾವೇ ಯಾಮಾರಿ ಹೋಗಿದ್ವಿ. ಒಬ್ಬ ಟೂರಿಸ್ಟ್ ಮಾತ್ರ, ಪ್ರೆಸ್ ಕ್ಯಾಮರಾ ಕಂಡು ಬೆಚ್ಚಿ ಬಿದ್ದದ್ದನ್ನು ಅಬ್ಸರ್ವ್ ಮಾಡಿದ ಮಫ್ತಿ ಪೇದೆ ಗುಟ್ಟು ರಟ್ಟು ಮಾಡಿದ ಸರ್. ನಾವು ಚುರುಕಾಗಿ ಮುಂದಿನ ಕಾರ್ಯಕ್ಕೆ ಸಿದ್ಧತೆ ಮಾಡಿಕೊಂಡ್ವಿ.''

''ವೆರಿ ಗುಡ್. ಅಲ್ಲಾರಿ, ಹತ್ತು ದಿವಸದಲ್ಲಿ ಇಂಥಹ ಬದಲಾವಣೆಯೇ? ಅವರೆಲ್ಲಾ ವಿದೇಶಿ ಪ್ರವಾಸಕ್ಕೆ ಹೊರಡುವ ಮುನ್ನ ನನ್ನ ಛೇಂಬರ್ರಿಗೇ ಬಂದಿದ್ರು. ಎಲ್ಲರೂ ಖಾದಿ ಪಂಚೆ, ಅರ್ಧ ತೋಳಿನ ಷರ್ಟು ಧರಿಸಿದ್ದರು. ಇಲ್ಲಿಂದಲೇ ಸೀದಾ ವಿಮಾನ ನಿಲ್ದಾಣಕ್ಕೆ ಹೋದದ್ದು.''

''ಎಲ್ಲಾ ಸಹವಾಸ ದೋಷ ಸರ್. ಆದ್ರೆ ನಮ್ಮ ಡಿಪಾರ್ಟ್‌ಮೆಂಟಿನವರಿಗೆ ಈ ಬದಲಾವಣೆ ತುಂಬಾ ಹೆಲ್ಪ್ ಆಯ್ತು. ತಮಾಷೆಯ ವಿಷಯವೆಂದರೆ ಆ ವಿಮಾನ ನಿಲ್ದಾಣದಲ್ಲಿ ಟಿ.ವಿ.ಯವರು, ಪತ್ರಿಕೆಯವರೂ ಇನ್ನೂ ಕಾಯ್ತಾನೇ ಇದ್ದಾರಂತೆ ಸರ್.''




''ರ್‍ರೀ ತುಂಬಾ ಹುಷಾರಗಿರ್‍ರಿ. ಆ ಚಿಕ್ಕಬರಗಿ... ಓಂಕಾರ ಅರಣ್ಯ ಪ್ರದೇಶದಲ್ಲಿ ನರಭಕ್ಷಕ ಹುಲಿಗಳು ತಿರುಗಾಡ್ತಾ ಇದೆಯಂತೆ. ಫಾರೆಸ್ಟು ಡಿಪಾರ್ಟ್‌ಮೆಂಟಿನವರು 'ಇಬ್ಬರನ್ನೂ' ಸರಿಯಾಗಿ ಕಾಯಲಿ.''

''ಖಂಡಿತ ಸರ್.''

★★★★

''ಸರ್ ಚಿಕ್ಕಬರಗಿ ಫಾರೆಸ್ಟ್ ಐ.ಬಿ.ಯಿಂದ ಐ.ಜಿ.ಪಿ. (ಟ್ರೈನಿಂಗ್) ಲೈನಿನಲ್ಲಿದ್ದಾರೆ.''

''ಎಸ್.ಸಿ.ಎಂ. ಹಿಯರ್''

''ಎಲ್ಲಾ ಶಾಸಕರೂ ಇಲ್ಲಿ ಹ್ಯಾಪಿಯಾಗಿದ್ದಾರೆ. ಸಿಚುಯೇಷನ್ ಯಾವಾಗ ಥಣ್ಣಗೆ ಆಗುತ್ತೆ? ನಾವು ನಮ್ಮ ನಮ್ಮ ಸ್ವಕ್ಷೇತ್ರಗಳಿಗೆ ಯಾವಾಗ ಹೋಗ್ತೀವಿ? ಅಂತ ಕೇಳ್ತಿದ್ದಾರೆ.''

''ನನಗೂ ಅವರ ಸಂಕಟ ಅರ್ಥವಾಗುತ್ತೇರಿ. ಆದರೆ ನಾನು ಹೆಲ್ಪ್‌ಲೆಸ್. ಅವರನ್ನೆಲ್ಲಾ ನಾನು 'ಸ್ಟಡಿಟೂರ್'ಗೆ ಅಂತ ಕಳುಹಿಸಿದ್ದು. ಆದ್ರೆ ಗ್ರಹಚಾರ ಹೀಗೆ 'ಕಸ್ಟಡಿ' ಟೂರಾಗಿ ಎಂಡ್ ಆಗೋಯ್ತು.''

''ಸಾರ್. ತಾವು ದಯವಿಟ್ಟು ಹೀಗೆ ವರೀ ಮಾಡ್ಕೋಬ್ಯಾಡಿ. ನಾವು ಸಿಚುಯೇಷನ್ ಹ್ಯಾಂಡಲ್ ಮಾಡ್ತಿದೀವಿ.''

''ಥ್ಯಾಂಕ್ಸ್. ಅಂದಹಾಗೆ ವಿದೇಶದಲ್ಲಿ ಅವರುಗಳು ಇಷ್ಟು ದಿನ ಏನೇನು ಮಾಡಿದ್ರು? ಏನು ಕಲಿತು ಬಂದ್ರು? ಅಂತ ವಿವರಗಳನ್ನು ಸೂಕ್ಷ್ಮವಾಗಿ ಸಂಗ್ರಹಿಸಿ ನನಗೆ ವರದಿ ಮಾಡಿ.

ದೆಹಲಿಯ ಚಿಕ್ಕೆಜಮಾನ್ರು ಕೆಂಡಾಮಂಡಲವಾಗಿದ್ದಾರೆ. ಅವರಿಗೆ ಸಂಜೆಯ ಹೊತ್ತಿಗೆ ವಿಚಾರಗಳನ್ನು ಫ್ಯಾಕ್ಸ್ ಮಾಡ್ಬೇಕು.''

''ಸರ್. ಒಂದು ಡೆವಲೊಪಿಂಗ್ ನ್ಯೂಸ್ ಅಂತಂದ್ರೆ, ಅವರಿಗೆಲ್ಲಾ ನಮ್ಮ ಕೌನ್ಸೆಲಿಂಗ್ ಪ್ರಾರಂಭ ಮಾಡಿದ್ದೇವೆ. ಆಕಸ್ಮಾತ್ ಮಾಧ್ಯಮದವರ/ಪತ್ರಿಕೆಯವರ ಕೈಗೆ ಸಿಕ್ಕಿ ಹಾಕಿಕೊಂಡ್ರೆ ಏನು ಸ್ಟೇಟ್‌ಮೆಂಟು ಕೊಡ್ಬೇಕು ಅಂತ ಹೇಳಿಕೊಟ್ಟಿದ್ದೇವೆ. ಉದಾಹರಣೆಗೆ, ನಮ್ಮ ವಿದೇಶಿ ಪ್ರವಾಸ ಒಂದು ವಿಚಾರ ಪ್ರವಾಸವಾಗಿದ್ದು. ವಿದೇಶದ ಡಿಫೆರೆಂಟು ಮೆಗಾಸಿಟಿಗಳಲ್ಲಿ ಸಾರಿಗೆ ವ್ಯವಸ್ಥೆ, ಕಸ ವಿಲೇವಾರಿ ವ್ಯವಸ್ಥೆ, ಕುಡಿಯುವ (ನೀರಿನ) ವ್ಯವಸ್ಥೆ ಇತ್ಯಾದಿ ವಿಚಾರಗಳ ಅಧ್ಯಯನಕ್ಕೆ ನಮಗೆ ಟೈಮೇ ಸಿಗದಂತಾಯಿತು. ಪ್ರಜೆಗಳು ತಪ್ಪು ತಿಳಿದ ಹಾಗೆ ಯಾವ 'ಬ್ಯೂಟಿ ಪಾರ್ಲರ್'ಗಳಿಗೂ ನಾವು ಭೇಟಿ ಕೊಟ್ಟಿರಲಿಲ್ಲ. ಬದಲಿಗೆ 'ಡ್ಯೂಟಿ ಪಾರ್ಲರ್'ಗಳಿಗೆ ಭೇಟಿ ಕೊಟ್ಟಿದ್ದೆವು. ಅಂತಂದ್ರೆ, ಒಬ್ಬ ಸರ್ಕಾರಿ ನೌಕರ ನಿಗದಿತ ವೇಳೆಯಲ್ಲಿ ಹೇಗೆ 'ಡ್ಯೂಟಿ' ಮಾಡಬೇಕು ಎಂದು ಟ್ರೈನಿಂಗ್ ಕೊಡುವ ಪಾರ್ಲರ್‌ಗಳಿಗೆ ಭೇಟಿ ಕೊಟ್ಟು ವಿವರ ಸಂಗ್ರಹಿಸಿದ್ದೇವೆ. ಯಾವ 'ಮೆಸೇಜು' ಸೆಂಟರುಗಳನ್ನು ನಾವು ಕಣ್ಣೆತ್ತಿ ಸಹಾ ನೋಡಲಿಲ್ಲ. ನಾವು ಹೋಗಿದ್ದು 'ಮೆಸೇಜು' ಸೆಂಟರುಗಳಿಗೆ. ಮಹಾತ್ಮ ಗಾಂಧಿ, ಸ್ವಾಮಿ ವಿವೇಕಾನಂದ, ಮಾರ್ಟಿನ್ ಲೂಥರ್ ಕಿಂಗ್ ಮುಂತಾದ ಗಣ್ಯರ ಸ್ಮರಣಾರ್ಥ ಕಟ್ಟಿರುವ 'ಮೆಸೇಜು' ಸೆಂಟರುಗಳು ಮುಚ್ಚಿದ್ದ ನಮ್ಮ ಕಣ್ಣುಗಳನ್ನು ತೆರೆಸಿವೆ. ಇತಿಹಾಸದ ಪುಟಗಳನ್ನು ತಿರುವು ಹಾಕಿದರೆ... ಈ ಹಿಂದೆ ಹರ್ಷ ಚಕ್ರವರ್ತಿ, ಚಂದ್ರಗುಪ್ತ ಮೌರ್ಯ ಮುಂತಾದವರ ಆಸ್ಥಾನಗಳಿಗೆ, ಹ್ಯೂಯೆಂತ್ಸಾಂಗ್, ಫಾಹಿಯಾನ್ ಮುಂತಾದ ವಿದೇಶೀ ಯಾತ್ರಿಕರು ಭೇಟಿಕೊಟ್ಟು ಅಧ್ಯಯನ ನಡೆಸಿದ್ದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿಲ್ಲವೆ? ಅಂತೆಯೇ ನಾವೂ ಕೂಡ ವಿದೇಶ ಪ್ರವಾಸ ಮಾಡಿ....''

''ವೆರಿ ಗುಡ್. ಐ ಆಮ್ ಪ್ರೌಡ್ ಆಫ್ ಯು ಐ ಸೆ. ಕಂಟಿನ್ಯೂ ಸಚ್ ಕೌನ್ಸೆಲಿಂಗ್. ಇನ್ನೇನಾದ್ರೂ ವರದಿ ಮಾಡೋದಿದ್ರೆ ಬೇಗ ಮಾಡಿ. ಮಧ್ಯಾಹ್ನ ಕ್ಯಾಬಿನೆಟ್ ಮೀಟಿಂಗಿದೆ.''

''ಇದೆ ಸರ್. ಈ ಕೌನ್ಸೆಲಿಂಗ್ ಜತೆ ಫಿಸಿಕಲ್ ಟ್ರೈನಿಂಗೂ ಸಹ ಕೊಡಿಸುವ ಪ್ಲ್ಯಾನು ಹಾಕಿಕೊಂಡಿದ್ದೇವೆ.''

''ಅಂದ್ರೆ?''

''ಸಿಚುಯೇಷನ್ ತೀರಾ ರಿವರ್ಸ್ ಆದ್ರೆ, ಫಾರೆಸ್ಟು ಐ.ಬಿ.ಯ ಹಿಂಬಾಗಿಲಿನಿಂದ ಓಡಿ, ಹಿಂದೆ ಇರುವ ಹತ್ತಡಿ ಎತ್ತರದ ಕಾಂಪೌಂಡು ಗೋಡೆ ಜಿಗಿದು ಪಾರಾಗುವುದು ಹ್ಯಾಗೆ? ಅಂತ ನಮ್ಮ ಕರಾಟೆ ಮಾಸ್ತರು ಟ್ರೈನಿಂಗ್ ಕೊಡ್ತಾರೆ.''

''ಕೊಂಚ ಹುಷಾರೂರಿ. ಅವರುಗಳಿಗೆ ಪಕ್ಷದಿಂದ ಪಕ್ಷಕ್ಕೆ ಹಾರೋದು ಚೆನ್ನಾಗಿ ಗೊತ್ತು. ಆದರೆ ಅಷ್ಟೆತ್ತರದ ಕಾಂಪೌಂಡು ಹಾ.. ರೋ.. ದು ಅಂದರೆ? ಎನಿ ವೇ ಆಲ್ ದಿ ಬೆಸ್ಟ್.''

''ಥ್ಯಾಂಕ್ಸ್ ಸರ್.''

★★★★

''ಸರ್. ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ದೊಡ್ಡಮನಿಯವರು ಚಿಕ್ಕಬರಗಿಯಿಂದ ಕಾಲ್ ಮಾಡ್ತಿದ್ದಾರೆ. ಯಾಕೋ ತೀರಾ ಭಯಗೊಂಡಂತಿದೆ.''

''ಹೇಳ್ರೀ ಮಿಸ್ಟರ್ ದೊಡ್ಡಮನಿ. ನರಭಕ್ಷಕ ಹುಲಿಗಳೇನಾದ್ರು ಸೆರೆಸಿಕ್ಕವೇನ್ರಿ?''

''ಸರ್. ಒಂದು ಷಾಕಿಂಗ್ ನ್ಯೂಸ್ ಇದೆ.''

''ಬೇಗ ಹೇಳ್ರಿ. ಆ ಹುಲಿ ಇನ್ನೊಂದು ಜೀವ ತೊಗೊಂಡ್ತೇನ್ರಿ?''

''ಛೇ.. ಛೇ.. ಗಾಬರಿಯಾಗ್ಬೇಡಿ ಸರ್. ಒಂದು ತಿಂಗಳಿನಿಂದ ಈ ಪ್ರದೇಶದಲ್ಲಿ ಸತಾಯಿಸುತ್ತಿದ್ದ ನರಭಕ್ಷಕ ಹುಲಿಗಳೆಲ್ಲಾ ತಮ್ಮ ಟೆರಿಟೆರಿಯನ್ನೇ ಬಿಟ್ಟು ಓಡಿ ಹೋಗಿವೆ ಸರ್. ಈ ಶಾಸಕರ ತಂಡ ಬಂದ ದಿನವೇ ಈ ಘಟನೆ ನಡೆದಿದೆ ಅಂತ ನಮ್ಮ ವಾಚರ್‌ಗಳು ವರದಿ ಕೊಟ್ಟಿದ್ದಾರೆ ಸರ್.''

''ಗುಡ್ ನ್ಯೂಸ್ ಅಲ್ವೇನ್ರೀ. ಮತ್ಯಾಕೆ ಚಿಂತೆ?''

''ಸುತ್ತ ಮುತ್ತಲಿನ ಜನರಿಗೆ ಯಾಕೋ ಗುಮಾನಿ ಬಂದಿರೋ ಹಾಗಿದೆ ಸರ್. ನರ ಭಕ್ಷಕ ಹುಲಿಗಳೇನೋ ಹೊರಟು ಹೋಗಿವೆ. ಬದಲಿಗೆ ನರರ ಟ್ಯಾಕ್ಸ್ ಭಕ್ಷಕ ಹುಲಿಗಳು ಬಂದಿವೆ. ಇವು ಇನ್ನೂ ಡೇಂಜರ್, ತುಂಬಾ ಹುಷಾರ್‍ರಾಗಿರ್ಬೇಕೂಂತ ಗುಟ್ಟಾಗಿ ಮಾತಾಡ್ಕೋತಿದಾರಂತೆ ಸರ್.''

''ಹ್ಞಾಂ ! ! !''

**




ನನ್ನ ಯಜಮಾನರು ಸಂಕ್ರಾಂತಿ ಎಳ್ಳು ತಿನ್ನೋದಿಲ್ಲ. ಯಾಕೆಂದರೆ ಚುನಾವಣೆ ಬಂತಲ್ಲ ಜನರಿಗೆ ಒಳ್ಳೆಯ ಮಾತಿನಲ್ಲಿ ಭರವಸೆ ಕೊಡುವುದಕ್ಕೆ ಆಗಲ್ಲ ಅಂತ.

# ಅಕ್ರಮ - ಸಕ್ರಮ

**- ವೈ.ಎನ್. ಗುಂಡೂರಾವ್**

**ಸ್ಕೂ**ಲಿಗೆ ಹೋಗುವ ಮಕ್ಕಳಿಗೊಂದಿಷ್ಟು ಡಬ್ಬಿಗೆ ತಿಂಡಿ, ಆಫೀಸಿಗೆ ಹೋಗುವ ಗಂಡನ ಡಬ್ಬಿಗೊಂದಿಷ್ಟು ಊಟ, ತುಂಬಿಸಿ ಕಳುಹಿಸಿಬಿಟ್ಟರೆ ಅಂದಿನ ಬಹುಪಾಲು ಕೆಲಸ ಮುಗಿದಂತೆ ಎಂದು ನಿರ್ಧರಿಸಿ, ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗುವ ಸೀರಿಯಲ್‌ಗಳಲ್ಲಿ ತಲೆ ತೂರಿಸಿಬಿಟ್ಟರೆ, ಈ ಸೀರಿಯಲ್‌ಗಳಿಂದ ಮುಕ್ತಿ ಎಂದರೆ ರಾತ್ರಿ ಹನ್ನೊಂದು ಗಂಟೆಯ ನಂತರವೇ.

ಹಲವಾರು ಚಾನಲ್‌ಗಳು ಪ್ರಾರಂಭವಾಗಿರುವುದು ಮಧ್ಯಮವರ್ಗದ ಮಹಿಳೆಯರ ಪಾಲಿಗಂತು ವರದಾನವೇ ಆಗಿದೆ. ಯಾವುದೇ ಚಾನಲ್ ಒತ್ತಿದರೂ ಒಂದಿಲ್ಲೊಂದು ಸಾಂಸಾರಿಕ ಚಿತ್ರಣದ ಧಾರಾವಾಹಿಗಳು ಪ್ರಸಾರವಾಗುತ್ತಲೇ ಇರುತ್ತವೆ. ಇದು ಇಷ್ಟ ಇಲ್ಲದಿದ್ದರೆ ಮತ್ತೊಂದು ಚಾನಲ್ - ಹೀಗೆ ಹಲವು ಹತ್ತು ಚಾನಲ್‌ಗಳನ್ನು ಒತ್ತುತ್ತಾ, ಒತ್ತುತ್ತಾ ತಿಂಡಿ, ಕಾಫಿ, ಊಟ ಎಲ್ಲವನ್ನೂ ಟಿವಿ ಪರದೆಯ ಮುಂದೆಯೇ ಸಾಂಗೋಪಾಂಗವಾಗಿ ಮಾಡುವ ಮಹಿಳೆಯರಿಗೇನೂ ಕಡಿಮೆಯಿಲ್ಲ. 'ಏನು, ಬರೇ ತಿಂದ್ಕೊಂಡೆ ಕೂತಿರ್ತಾರೆ ಹೆಂಗಸರು, ತಿಂಡಿ, ಅಡುಗೆ ಮಾಡೋದು ಬೇಡ್ವಾ?' ಎನ್ನಬಹುದು. ಅದಕ್ಕೆಲ್ಲ ಬ್ರೇಕ್‌ಟೈಂ ಅಡ್ವರ್‌ಟೈಸ್‌ಮೆಂಟ್‌ಗಳಿದ್ದೇ ಇರುತ್ತವಲ್ಲ!

ಇತ್ತೀಚಿನ ಧಾರಾವಾಹಿಗಳಲ್ಲಂತೂ ಲೇಡಿ ಬಾಸ್‌ಣಿಯರೇ ಜಾಸ್ತಿ. ಆಡಳಿತಾತ್ಮಕ ವಿಷಯಗಳಲ್ಲಿ ಹೆಂಗಸರು ಪಾಲ್ಗೊಳ್ಳಬೇಕೆಂಬುದನ್ನು ಟಿವಿಯಲ್ಲಿ ತೋರಿಸುತ್ತಾರೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಆದರೆ ಯಾವ ವಿದ್ಯಾರ್ಹತೆಯೂ ಇಲ್ಲದೆ, ನಿನ್ನೆ ಸಾರಿನ ಪಾತ್ರೆಯಲ್ಲಿ ಸೌಟು ಅಲ್ಲಾಡಿಸುತ್ತಿದ್ದಾಕೆ ಇಂದು ಗಂಡನ ಬದಲಿಗೆ 'ಸಿಇಒ' ಆಗಿ ಛೇಂಬರ್‌ನಲ್ಲಿ ರಾರಾಜಿಸಿದರೆ ನೋಡುಗರಿಗೆ ಹೇಗಾಗಬೇಡ? ಇಂಥದ್ದನ್ನೆಲ್ಲ ಸಹಿಸಿಕೊಳ್ಳಬೇಕು, ಸಹಿಸಿಕೊಂಡೇ, ಸಹಿಸಿಕೊಳ್ಳುತ್ತಾರೆಂಬ ನಂಬಿಕೆಯಿಂದಲೇ ತಾನೇ ಈ ಧಾರಾವಾಹಿಗಳನ್ನು ವರ್ಷಾನುಗಟ್ಟಲೆ ಎಳೆದೆಳೆದು ಹಾಕುತ್ತಿರುವುದು.

ಹೋಗಲಿ ಮಾಲೀಕಳಾಗಿ ದುಡಿಯುವ ಮಹಿಳೆಯು ತನ್ನ ಆದರ್ಶದಿಂದ ಆಡಳಿತ ನಡೆಸಿ ಸಮಾಜಕ್ಕೆ ಯಾವುದಾದರೊಂದು ಸಂದೇಶ ರವಾನಿಸುತ್ತಾಳೆಂದು ಭಾವಿಸುತ್ತೀರಾ? ಉಹ್ಹೂಂ! ಕೈಗೆ ಸಿಕ್ಕಿದ ಆಡಳಿತದಿಂದ ತನ್ನಂತೆ ವಹಿವಾಟು ನಡೆಸುವ ಮತ್ತೊಬ್ಬ ಮಾಲೀಕನನ್ನು/ಳನ್ನು ಮಣಿಸಲು ಹೂಡುವ ತಂತ್ರಗಳನ್ನು ನೋಡಬೇಕು! ಯಾವ ಕಾರ್ಪೋರೇಟ್ ವಲಯದಲ್ಲಿಯೂ ನಡೆಯಲಾರದ, ಊಹಿಸಲಾರದ ಘಟನೆಗಳು. ತನ್ನ ಪ್ರತಿಸ್ಪರ್ಧಿಯ ಕಚೇರಿಯಲ್ಲಿಯೇ ತನಗೆ ಬೇಕಾದವರನ್ನು ನೆಟ್ಟು, ಮಾಲೀಕನನ್ನು ಮಟ್ಟಹಾಕುವುದರಲ್ಲಿ ಹೆಣೆಯುವ ತಂತ್ರಗಾರಿಕೆಯು ಬೆಚ್ಚಿಬೀಳಿಸುವಂತಿರುತ್ತದೆ. ಆಫೀಸಿನಿಂದ ಹಣ ತೆಗೆದುಕೊಂಡು ಬ್ಯಾಂಕಿಗೆ ಕಟ್ಟಲು ಹೋಗುವ ಹಾದಿಯಲ್ಲಿ ಕಾದಿದ್ದು

ಹಣ ಎಗರಿಸುವ, ಸ್ಕೂಲಿಗೆ ತೆರಳುವ ಯಜಮಾನರ ಮಕ್ಕಳನ್ನು ಕಿಡ್ನಾಪ್ ಮಾಡಿಸುವ, ಇವುಗಳೂ ಸಾಲದೆನ್ನುವಂತೆ ಬಾಸ್‌ಣಿಯರೇ ಪಿಸ್ತೂಲು ಹಿಡಿದು ಪ್ರತಿಸ್ಪರ್ಧಿಯನ್ನು ಮಣಿಸಲು ನೇರವಾಗಿಯೇ ಅಖಾಡಾಕ್ಕೆ ಇಳಿಯುವ ಪಾತ್ರಧಾರಿ ಮಹಿಳಾಮಣಿಗಳಿಗೇನೂ ಕಡಿಮೆಯಿಲ್ಲ.

ಇದು ಕಚೇರಿಯಲ್ಲಿ ನಡೆಯುವ ಸಾಹಸಮಯ ಸನ್ನಿವೇಶಗಳ ಚಿತ್ರಣಗಳಾದರೆ, ಸಾಂಸಾರಿಕ ವಿಷಯಗಳನ್ನು ತೆಗೆದುಕೊಂಡರೆ ಬಹುಪಾಲು ಧಾರಾವಾಹಿಗಳ ಮೂಲ ಮಂತ್ರವು ಒಂದೇ ಆಗಿರುತ್ತದೆ.

ಒಂದೇ ಸೂರಿನಡಿ ಬಾಳುತ್ತಿದ್ದರೂ ತೆರೆಮರೆಯಲ್ಲಿ ಮನೆಯ ಯಜಮಾನ/ ಯಜಮಾನಿಯನ್ನು ಮಣಿಸಲು ನಡೆಸುವ ತಂತ್ರಗಾರಿಕೆಗಳಿಗೇನೂ ಕಡಿಮೆಯಿರುವುದಿಲ್ಲ. ಮನೆಗೆ ಬಂದು ಹೊಕ್ಕಿಕೊಳ್ಳುವ ಗಂಡನ ತಂಗಿ ಅಥವಾ ಹೆಂಡತಿಯ ತಂಗಿಯ ಆರ್ಭಟಗಳನ್ನು ನೋಡಲಾಗುವುದಿಲ್ಲ. ಸಂಸಾರದಲ್ಲಿ ಎಷ್ಟೇ ಅನ್ಯಾಯಗಳು ನಡೆಯುತ್ತಿದೆ ಎಂದು ತಿಳಿದಿದ್ದರೂ, ಬಾಯಿ ಬಿಗಿದುಕೊಂಡೇ ಸಾಗುವ ಯಜಮಾನ/ಯಜಮಾನಿತಿ, ಮನೆಗೆ ಬಂದು ಸೇರಿಕೊಂಡು ಮನೆಯ ನೆಮ್ಮದಿಯನ್ನು ಪ್ರತಿ ಹಂತದಲ್ಲೂ ಹಾಳುಗೆಡಹಲು ಹುನ್ನಾರ ನಡೆಸುವ ವಿಲನ್‌ಗಳ ಆಟಾಟೋಪವನ್ನು ಮನೆಯ ಯಜಮಾನಿ ತಾಳ್ಮೆಯಿಂದ ಸಹಿಸುವ ಧಾರಾವಾಹಿಗಳು ಒಂದು ರೀತಿಯದಾದರೆ, ಮತ್ತೊಂದು ರೀತಿಯದೆಂದರೆ ಗಂಡನಿಗೊಂದು ಅಕ್ರಮ ಸಂಬಂಧ ಹುಟ್ಟುಹಾಕುವುದು.

ಈ ಅಕ್ರಮ ಸಂಬಂಧವು ನಿಜ ಹೆಂಡತಿಯ ಅರಿವಿಗೆ ಬರಲು ವರ್ಷಾನುಗಟ್ಟಲೆ ಎಳೆದು, ಅರಿವಿಗೆ ಬಂದನಂತರ ಗಂಡಹೆಂಡರಿಬ್ಬರೂ ಉತ್ತರ–ದಕ್ಷಿಣ ಧ್ರುವಗಳಾಗಿ ವರ್ಷಾನುಗಟ್ಟಲೆ ಒಂದೇ ಸೂರಿನಡಿ ಬೈದಾಡಿಕೊಂಡೇ ಬದುಕುವುದು ಹಾಗಿರಲಿ ಈ ಅಕ್ರಮ ಹೆಂಡತಿ ಕೆಲವು ವೇಳೆ ಎಷ್ಟೊಂದು ಪವರ್‌ಫುಲ್ ಎಂದರೆ ನೇರವಾಗಿ ಮನೆಗೆ ನುಗ್ಗಿ ಬಂದು ಕುಳಿತು, ನಿಜ ಹೆಂಡತಿಯನ್ನೇ ಗಂಡನು ಸಂಶಯಿಸುವಂತೆ ಮಾಡಿ ಮನೆಯಿಂದ ಹೊರಹಾಕುವ ಧಾರಾವಾಹಿಗಳಿಗೇನೂ ಕಡಿಮೆಯಿಲ್ಲ. ಇದಕ್ಕೆ ಮತಿಗೆಟ್ಟ ಮನೆಯವರೆಲ್ಲರ ಸಹಕಾರವೂ ಇದ್ದೇ ಇರುತ್ತದಲ್ಲಾ!

ಪ್ರಬಲ ಮನರಂಜನೆಯ ಮಾಧ್ಯಮವಾಗಬೇಕಿದ್ದ ಟಿವಿ ಚಾನಲ್‌ಗಳು ಈ ರೀತಿಯ ಮನೆಮುರುಕ ಧಾರಾವಾಹಿಗಳನ್ನು ಪ್ರಸರ ಮಾಡಿ ಒಂದಿಷ್ಟು ಟಿಆರ್‌ಪಿಯನ್ನು ಹೆಚ್ಚಿಸಿಕೊಂಡು ಹಣ ಸಂಪಾದನೆಯ ದಾರಿ ಹಿಡಿಯುತ್ತವೆಯೇ ವಿನಃ ಮತ್ತೇನೂ ಇಲ್ಲ.

ನನ್ನದೊಂದು ಪ್ರಶ್ನೆ. ಜನರ ಒಳಿತಿಗಾಗಿ ಸರಕಾರವು ಹಲವಾರು ಬಾಬ್ತುಗಳಲ್ಲಿ ಅಕ್ರಮಗಳನ್ನು ಸಕ್ರಮ ಮಾಡಹೊರಟಿರುವುದು ಸರಿಯಷ್ಟೇ. ಈ ಧಾರಾವಾಹಿಗಳಲ್ಲಿ ಬರುವ ಅಕ್ರಮ ಸಂಬಂಧಗಳನ್ನು ಸಕ್ರಮ ಮಾಡಿಬಿಟ್ಟರೆ!?

**




ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

ಹುರುಳಿಕಟ್ಟು

# ಇಪ್ಪತ್ತಕ್ಕೆ ಮಾರ್ಕ್ಸ್.... ಅರವತ್ತಕ್ಕೆ ರಾಘವೇಂದ್ರಸ್ವಾಮಿ....!

- ಎಚ್. ಗೋಪಾಲಕೃಷ್ಣ

**ಮೊ**ನ್ನೆ ನನ್ನ ಹಳೆಯ ಸಹೋದ್ಯೋಗಿಯೊಬ್ಬರು ಅಚಾನಕ್ಕಾಗಿ ಭೇಟಿಯಾದರು. ಅವರಾಗಿ ಅವರೇ ಹೇಗಿದ್ದೀರೀ ಎಂದು ಮಾತನಾಡಿಸಿದ್ದರಿಂದ,ಅವರೇ ಪರಿಚಯ ಮಾಡಿಕೊಂಡಿದ್ದರಿಂದ ಅವರ ಗುರುತು ಸಿಕ್ಕಿತು ! ಇಲ್ಲವಾದರೆ ಅವರು ನನಗೆ ದೂರವೇ ಉಳಿದುಬಿಡುತ್ತಿದ್ದರು... ಜತೆಯಲ್ಲಿಯೇ ಸುಮಾರು ವರ್ಷ ದುಡಿದವರು ಹೀಗೆ ಮರೆಯುತ್ತಾರೆ ಎಂದರೆ ಆಶ್ಚರ್ಯವಾಗುವುದಿಲ್ಲವೇ ? ಆ ಕಾರಣಕ್ಕೆ ಮನಸ್ಸು ಯೋಚನೆಗೆ ತೊಡಗಿತು. ಅವರು ಕೆಲಸ ಮಾಡುವಾಗ್ಗೆ ಅವರ ಬಟ್ಟೆ ಬರೆ ಮಾತುಕತೆ ಎಲ್ಲವೂ ಒಂದು ರೀತಿಯದ್ದಾಗಿತ್ತು. ಮೊನ್ನೆ ಅವರನ್ನು ನೋಡಿದಾಗ ಅವರು ಸಂಪೂರ್ಣವಾಗಿ ಬದಲಾಗಿದ್ದರು - ಮೆಟಾಮಾರ್ಫಸಿಸ್ ನ ಹಾಗೆ ! ನಿವೃತ್ತಿಗೆ ಮೊದಲು ತುಂಬಾ ಠಾಕು ಠೀಕಾಗಿ ಕೆಲಸಕ್ಕೆ ಅವರು ಬರುತ್ತಿದ್ದರು. ಸುಕ್ಕು ಕಾಣದ ಪ್ಯಾಂಟು, ಅದರೊಳಗೆ ಹುದುಗಿಸಿದ್ದ ಗೆರೆ ಮಾಸದ ಷರ್ಟು, ಮಿರ ಮಿರ ಮಿಂಚುವ ಶೂಗಳು.. ಒಪ್ಪವಾಗಿ ಬಾಚಿರುತ್ತಿದ್ದ ತಲೆಕೂದಲು, ಬಣ್ಣ ಹಚ್ಚಿರುತ್ತಿದ್ದ ಕೂದಲು ಮತ್ತು ಫ್ರೆಂಚ್ ಮೀಸೆ.... ಹೀಗೆ ಇದ್ದ ಅವರ ಡ್ರೆಸ್ ಕೋಡು ಈಗ ಸಂಪೂರ್ಣವಾಗಿ ಬೇರೆಯದೇ ರೂಪು ತಳೆದಿತ್ತು.

**ಅರವತ್ತಾದ ಮೇಲೆ ಆಧ್ಯಾತ್ಮ : ದೇವರಿಗೇ ಗೊತ್ತು**

ಮಾಸಲು ಮೇಲುಕೋಟೆ ಪಂಚೆ, ಅದರ ಮೇಲೆ ಒಂದು ಅರೆ ತೋಳಿನ ಜುಬ್ಬಾ, ತಲೆಯ ಹಿಂಭಾಗದಲ್ಲಿ ಕಂಡೂ ಕಾಣದ ಹಾಗೆ ಕ್ರಾಪಿನ ಮಧ್ಯೆ ಇಣುಕುತ್ತಿದ್ದ ಸಣ್ಣ ಜುಟ್ಟು ! ಹಣೆ ಮೇಲೆ ಮುದ್ರೆ, ಅಕ್ಷತೆ ಕಿವಿ ಹಿಂಭಾಗದಲ್ಲಿ ತೆಳುವಾಗಿ ಲೇಪಿಸಿದ ಗಂಧ...ಅವರ ವೇಷ ಭೂಷಣ ಬದಲಾಗಿತ್ತು, ಮನುಷ್ಯ ಹೀಗೆ ರಿಟೈರ್ ಆದ ಎರಡೇ ವರ್ಷದಲ್ಲಿ ಹೀಗೆ ಬದಲಾಗಲು ಸಾಧ್ಯವೇ ಅನಿಸಿಬಿಟ್ಟಿತು. ಅದಕ್ಕಿಂತ ಮಿಗಿಲಾದ ಆಶ್ಚರ್ಯಅಂದರೆ ಅವರು ನಂಬಿದ್ದ ತತ್ವಗಳಿಗೂ ಈಗಿನ ಅವರ ವೇಷಕ್ಕೂ , ವೇಷದ ಮೂಲಕ ಆಚರಿಸಬಹುದಾದ ಸಂಪ್ರದಾಯಗಳಿಗೂ ಇದ್ದ ಅಗಾಧವಾದ ಬದಲಾವಣೆ.

ಹಳೇ ಸ್ನೇಹಿತರೇ ಅಲ್ಲವೇ. ಉಭಯಕುಶಲೋಪರಿಯಾದ ಮೇಲೆ ಹತ್ತಿರದಲ್ಲೇ ಕಾಫಿ ಹೀರಲು ಹೊರಟೆವು. ನಮ್ಮ ಹಳೆಯ ನೆನಪುಗಳನ್ನು ಕೆದಕಿ ಹಂಚಿಕೊಂಡೆವು,ನಮ್ಮ ಹೋರಾಟಗಳು,ನಾವು ರೂಪಿಸಿದ ನಮ್ಮ ಮುಂದಿನ ಪೀಳಿಗೆ,ನಾವು ಹಾಕಿಕೊಟ್ಟ ಹೆದ್ದಾರಿ,ನಮ್ಮ ಆಗಿನ ಚಳವಳಿ...... ಹೀಗೆ ಹಲವು ವಿಷಯದ ಸುತ್ತಾ ಮಾತು ಹರಿಯಿತು.

ನಾವೆಲ್ಲಾ ಒಂದು ಕಾಲದಲ್ಲಿ ಮಾರ್ಕ್ಸ್ ಓದಿಕೊಂಡವರು,ಆತನನ್ನು ಅಪ್ಪಿ ಕೊಂಡವರು, ಜಾತಿ ವ್ಯವಸ್ಥೆ ಕಿತ್ತಿ ಬಿಸಾಕಿಬಿಡಬೇಕು ಅಂತ ಭಾಷಣ ಬೀರಿದ್ದೋರು,ಕೆಲವರು ಹಾಗೇ ನಡೆದುಕೊಂಡವರೂ ಸಹ...! ಈಗ ಏಕ್ ದಂ ಈ ಬದಲಾವಣೆ ಅಂದರೆ ನಾವು ಆಗ ಮಾಡಿದ್ದು ತಪ್ಪು ಅಂತಲೇ ಅಥವಾ ಸತ್ಯದ ಗೋಚರತೆಯೇ ? ಇದೇ ಸಮಯದಲ್ಲೇ ಅವರ ಮನಸ್ಸು ಅರಿಯಲು ನನ್ನ ಸಂದೇಹ ಅವರಲ್ಲಿ ಹೇಳಿಕೊಂಡೆ-

ನಾವು ಹಾದು ಬಂದ ಹಾದಿ ಸರಿಇರಲಿಲ್ಲವೇ ಅಥವಾ ನಮ್ಮ ಆಗಿನ ಬದ್ಧತೆಗಳು ಶಿಥಿಲವಾಗಿದೆಯೇ ?

ಮಾತು ಅವರಿಗೆ ನೇರವಾಗಿ ತಟ್ಟಿತು ಅಂತ ಕಾಣುತ್ತೆ-ಅವರೆಂದರು ಆ ಕಾಲದಲ್ಲಿ ಅದು ಸರಿ ಅನಿಸಿತ್ತು,ಈಗ ಇದು ಸರಿ ಅನಸುತ್ತೆ...

ಹಾಗಂದರೆ....

ನೋಡು ಪ್ರಪಂಚದ ಅನುಭವ ಇಲ್ಲದ ಆಗ ನಾವು ಪ್ರಪಂಚ ಬದಲಾಯಿಸಬಹುದು ಅನಸುತ್ತೆ,ಹಿಂದಿನವರು ಹಾಕಿಕೊಟ್ಟ ದಾರಿ ಸರಿ ಇಲ್ಲ ಅನಸುತ್ತೆ,ಸಮಾಜವನ್ನು ಬದಲಾಯಿಸಲೇ ಬೇಕು ಅನ್ನಸುತ್ತೆ.ಆಗೇನು ಮಾಡುತ್ತೀವಿ ? ನಮ್ಮ ನಮ್ಮ ಪರಿಧಿಯೊಳಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬದಲಾವಣೆ ತರಲು ಪ್ರಾಮಾಣಿಕ ಪ್ರಯತ್ನ ಪಡುತ್ತೇವೆ.ಪ್ರಯತ್ನ ಪ್ರಾಮಾಣಿಕವಾಗಿದ್ದರೂ ಹಳೇ ಸಂಪ್ರದಾಯಗಳು ಅಷ್ಟು ಬೇಗ ಮರೆಯಾಗೋದಿಲ್ಲ. ಅದರ ಜತೆಗೆ ನಮ್ಮ ಎಲ್ಲಾ ನಡವಳಿಕೆಗಳನ್ನೂ ಸಂಶಯದಿಂದ ನೋಡುವವರು ಇದ್ದೇ ಇರ್ತಾರೆ,ಅವರೇ ನಮಗೆ ತೊಡರುಗಾಲು ಹಾಕಿದರೂ ಹಾಕಿದರೇ. ಇದೆಲ್ಲಾ ಬಿಡು ನನ್ನ ಹತ್ತಿರದವರೇ ನನ್ನ ಬದ್ಧತೆಗಳಿಗೆ ಬೆಂಬಲ ನೀಡದೇ ಹೋದರೆ ನೀನೇನು ಮಾಡುಕ್ಕೆ ಆಗುತ್ತೆ ?ಹಠ ಹಿಡಿದು ನನ್ನ ಇತಿಮಿತಿಯಲ್ಲಿ ಕೆಲವು ಸುಧಾರಣೆ ತರೋದಿಕ್ಕೆ ಪ್ರಯತ್ನ ಪಡ್ತೀ.. ಆದರೆ ಪ್ರಯತ್ನ ಸಫಲವಾದರೆ ಬೇರೆಯವರೂ ನನ್ನ ಪ್ರಯೋಗ ಒಪ್ರೋ ಕಲ್ಲೇಟು ಬೀಳುತ್ವೆ..ಕಲ್ಲೇಟು ತಿಂದಿರೋರೇ ಹೆಚ್ಚಿರೋದರಿಂದ ಅವರೇ ನಮಗೆ ಮಾಡಲ್ ಗಳು-ಅದರಿಂದ ಏನಾಗುತ್ತೆ ಗೊತ್ತಾ ? ಯಾರೂ ಯಾವರೀತಿಯ ಬದಲಾವಣೆಗಳಿಗೂ ರಿಸ್ಕೇ ತಗೊಳಲ್ಲ..

ಅಲ್ಲಪ್ಪಾ ನಾನು ನಮ್ಮ ಬದಲಾವಣೆ ಬಗ್ಗೆ ಕೇಳ್ತಾ ಇದೀನೀ...

ಅದಕ್ಕೇ ಬಂದೆ.. ಅದನ್ನೇ ಹೇಳುಕ್ಕೆ ಹೊರಟೆ...

ನಾವು ನಮ್ಮ ಜೀವನ ಶುರು ಮಾಡಿದಾಗ ನಮಗೆ ಸಮಾಜ ಬದಲಾಯಿಸಬೇಕು ಅನ್ನುವ ಕಮಿಟ್ ಮೆಂಟು ಇತ್ತು. ಸರಿ ,ಅದಕ್ಕೆ ಏನೇನು ಮಾಡಬೇಕು ಅನ್ನುವ ಮೂಲಭೂತವಾದ ಶಿಕ್ಷಣವೇ ನಮಗೆ ಇರಲಿಲ್ಲ,ಯಾರೂ ನಮಗೆ ಮಾರ್ಗದರ್ಶನ ಮಾಡೋರೂ ಇರಲಿಲ್ಲ. ನಮ್ಮ ನಮ್ಮ ಬುದ್ಧಿ ಓಡಿದ ಹಾಗೆ ನಮಗೆ ತೋಚಿದ ಹಾಗೆ ನಾವೂನೂ ಬದಲಾವಣೆಗಳಿಗೆ

ಪ್ರಯತ್ನಿಸಿದೆವು. ಒಟ್ಟಿನಲ್ಲಿ ನಾವು ಅಂದುಕೊಂಡಷ್ಟು ಕ್ರಾಂತಿ ಅಂತ ಆಗದೇ ಇದ್ದರೂ ಅಲ್ಪ ಸ್ವಲ್ಪ ಬದಲಾವಣೆ ಆಗಿದೆ ಅಲ್ವಾ ?

ಹೌದಲ್ಲವೇ ಅನಿಸಿತು,ತಲೆಯಾಡಿಸಿದೆ.

ನೋಡು ಬದಲಾವಣೆಯೇ ಜೀವನದ ನಿಯಮ ಅಂತ ಹಿಂದಿನವರು ಹೇಳುತ್ತಿದ್ದರು. ಅದರಿಂದ ಪ್ರತೀ ಪೀಳಿಗೆಯೂ ಯಾವುದಾದರೂ ಬದಲಾವಣೆ ತರ್ತಾನೇ ಇರುತ್ವೆ. ನಾವೂ ಅದರಲ್ಲಿ ಸೇರಿದ್ದೆವು ಅದು ದಿಟ ಅಲ್ವಾ ?

ಮತ್ತೆ ಗೋಣು ಆಡಿಸಿದೆ.

ನಾವು ಅಂದುಕೊಂಡಷ್ಟು ವೇಗವಾಗಿ ಯಾವುದೂ ಬದಲಾವಣೆ ಆಗೋಲ್ಲ.ಅದರ ಸಂಗಡವಷ್ಠ ನಾವು ನಂಬಿದ್ದ ಪ್ರಿನ್ಸಿಪಲ್ಲುಗಳು ಕೊಂಚ ರಿ ಫೈನ್ ಆಗುತ್ತಲೇ ಇರುತ್ತೆ. ಹೀಗೆ ರಿ ಫೈನ್ ಆದಾಗ ಮತ್ತೆ ಸುಮಾರು ಸಲ ನಾವು ಹಳೇ ಮೌಲ್ಯಗಳನ್ನೇ ಅಪ್ಪ ಬೇಕಾಗುತ್ತೆ.. ಒಂದು ಕಾಲದಲ್ಲಿ ಮಾನವ ಸಮಾಜದ ಬದಲಾಯಿಸ್ತೀವಿ ಅಂತ ಹೊರಟೋರು ನಾವು..ಾಗಿನ ಅವಶ್ಯಕತೆ ಅದಿತ್ತು. ಜೀವ ಮಾಗಿದ ಮೇಲೆ ಬುದ್ಧಿ ಬಲಿತ ಮೇಲೆ ಕೂಡ ನಾವು ಮಕ್ಕಳಥರಹಾನೇ ಇರ್ತೀವಿ ಅಂದರೆ ಆಗುತ್ಯೇ ?ವಯಸ್ಸಾಗ್ತಾ ಆಗ್ತಾ ಮನುಷ್ಯ ಪಕ್ವ ಆಗ್ತಾನೆ ಅಂತಾರೆ ನೋಡು ಇದಕ್ಕೇನೇ... ಯೌವನದಲ್ಲಿ ಇದ್ದ ತೀವ್ರ ಭಾವನೆಗಳು ಮುಪ್ಪು ಹತ್ತಿರ ಬರುತ್ತಾ ಸರಿಯುತ್ತೆ ನಾವು ಯಾವುದರ ವಿರುದ್ಧ ಇದ್ದೆವೋ ಅದೇ ಹತ್ತಿರವಾಗೋ ಹಾಗೆ ಆಗಿಬಿಡುತ್ತೆ... ಈಗ ನಮಗೆ ಆಗಿರೋದೂ ಹಾಗೇನೇ.. ಅಲ್ಲದೇ ಒಂದು ಗೊತ್ತಾ ?

ಯಾವುದು ನಮಗೆ ಗೊತ್ತಿಲ್ಲದೇ ಇರುವ ಈ ಒಂದು ಅಂತ ಆಶ್ಚರ್ಯ ಪಡುತ್ತಾ ಯಾವುದಪ್ಪಾ ದೊರೆ ಆ ಒಂದು..? ಅಂದೆ !

ಅಲ್ಲವೋ ಇಪ್ಪತ್ತಕ್ಕೆ ಮಾರ್ಕ್ಸ್ ಅಪ್ಪಿಕೊಳ್ಳದವನು ಅರವತ್ತಕ್ಕೆ ರಾಘವೇಂದ್ರಸ್ವಾಮಿ ಫಾಲೋಯರು ಆಗದವನು ಅಂದರೆ ಅವನಲ್ಲಿ ಅದೇನೋ ಐಬು ಇದೆ ಅಂತ ಅಲ್ವಾ ?

**

---

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ವ್ಯಸನ 3. ಪುಲ್ಲಿಂಗ 5. ಕಥೆ 6. ಜನನಾಯಕ 8. ಕರಡಿ 9. ವಿಷಯ 12. ಮರಣಪತ್ರ 13. ವನ 14. ಚಲ್ಲಣ 15. ಪ್ರವರ

**ಮೇಲಿಂದ ಕೆಳಕ್ಕೆ**

1. ವ್ಯಥೆ 3. ಪುಳಕ 4. ಗಮಾರ 5. ಕರಟಕ 6. ಜರಡಿ 7. ನಾಮಕರಣ 9. ವಿಚಿತ್ರ 10. ಯಜಮಾನ 11. ಎಡಚ 12. ಮಸಣ 13. ವರ

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

– ಎಚ್ಚೆನ್ಎ

## ಡೆಫನಿಷನ್

**ಹಿಂ**ದೆಲ್ಲಾ ಮಧ್ಯಮ ವರ್ಗದವರು 'ಯಾವಾಗ ಬೇಕಾದ್ರೂ ಬಾ ಊಟಕ್ಕೆ ನೊ ಪ್ರಾಬ್ಲಮ್' ಎನ್ನುತ್ತಿದ್ದರು. ನಂತರ 'ಫೋನ್ ಮಾಡಿ ಬಾ' ಎಂದಾಯಿತು. ಈಗಂತೂ 'ಫೋನ್ ಮಾಡು ಸಾಕು' ಬಾರದಿದ್ದರೂ ನಡೆಯುತ್ತೆ ಎಂಬರ್ಥ ಬರುವಂತೆ ಮಾತನಾಡುತ್ತಾರೆ. ಹಣದುಬ್ಬರಕ್ಕೆ ಇದಕ್ಕಿಂತ ಒಳ್ಳೇ ಡೆಫನಿಷನ್ ಬೇಕೆ?

★★★

## ಅಶ್ವ ನಿಷ್ಠೆ

**ನಾ**ಯಿಯ ನಿಷ್ಠೆಯ ಬಗ್ಗೆ ಹಲವಾರು ಕತೆಗಳಿವೆ. ಆದರೆ ಕುದುರೆಯ ನಿಷ್ಠೆಯ ಬಗ್ಗೆ ಕೇಳಿದ್ದೀರಾ? ಒಡೆಯನನ್ನು ಹೊತ್ತೊಯ್ಯುತ್ತಿರುವಾಗ ತನಗೆ ನೋವಾಗುತ್ತಿದ್ದರೂ ಸಹ ಅದು ಅವನನ್ನು ಬಿಟ್ಟುಕೊಡುವುದಿಲ್ಲವಂತೆ. ಕೊನೆ ಉಸಿರು ಇರುವವರೆಗೂ ಓಡುತ್ತಲೇ ಇದ್ದು ಸ್ವಾಮಿನಿಷ್ಠೆಯನ್ನು ಪ್ರದರ್ಶಿಸುತ್ತದೆ ಎಂದು ಅಶ್ವ ತಜ್ಞರು ಹೇಳುತ್ತಾರೆ. ಹಾಗೆಯೇ ಕುದುರೆ ತನ್ನ ನೋವನ್ನು ಯಾರ ಮುಂದೆಯೂ ತೋಡಿಕೊಳ್ಳುವುದಿಲ್ಲವಂತೆ. ಕಾಡಿನ ರಾಜ ಸಿಂಹ ಕಾಲಿಗೆ ಮುಳ್ಳು ಸಿಕ್ಕಿಕೊಂಡರೆ ನೋವಿನಿಂದ ಕಿರುಚುತ್ತದೆ. ಆದರೆ ಕುದುರೆ ಮಾತ್ರ ತನ್ನ ಪಾಡಿಗೆ ತಾನು ನೋವನ್ನು ಅನುಭವಿಸುತ್ತದೆ ಎಂದು ಹೇಳುತ್ತಾರೆ. ಇಂದು ರಾಹುಲ್‌ಜೀಗೆ ಇಂತಹ ನಿಷ್ಠಾವಂತ ಹಿಂಬಾಲಕರು ಬೇಕಾಗಿದ್ದಾರೆ. ಆದರೆ ಎಲ್ಲಿ ತರುವುದು?

★★★

## ಅವರೇ ಅಂಪೈರ್

**ಎ**ಲ್ಲಾ ಆಟಗಳಿಗೂ ಅದನ್ನು ನಿಯಂತ್ರಿಸಲು ಅಂಪೈರ್‌ಗಳಿರುತ್ತಾರೆ. ಅವರ ತೀರ್ಪೇ ಅಂತಿಮ, ಅದನ್ನು ಪ್ರಶ್ನಿಸುವಂತಿಲ್ಲ. 11 ಮಂದಿ ಆಟಗಾರರಿರುವ ತಂಡಕ್ಕೆ ಅಂಪೈರ್ ಬೆಂಬಲ ಸಿಕ್ಕಿದರೆ ಅದು 12 ಮಂದಿ ತಂಡವಾಗುತ್ತದೆ. ಆದರೆ ಅಂಪೈರೇ ಇಲ್ಲದ ಕ್ರೀಡೆಯೊಂದಿದೆ. ಯಾವುದು ಗೊತ್ತೆ? ಗಾಲ್ಫ್, ಅದರಲ್ಲಿ ಆಟಗಾರರೇ ಅಂಪೈರ್‌ಗಳೂ ಸಹ. ಅವರೇ ತಮ್ಮ ಆಟವನ್ನು ನಿಯಂತ್ರಿಸಿ ತಪ್ಪಾದಾಗ ಅವರೇ ದಂಡ ವಿಧಿಸಿಕೊಳ್ಳುತ್ತಾರಂತೆ. ಈ ಆಟದಲ್ಲಿರುವಷ್ಟು ಸ್ವನಿಯಂತ್ರಣ, ಶಿಸ್ತು, ಪ್ರಾಮಾಣಿಕತೆ, ಬೇರೆ ಯಾವ ಆಟದಲ್ಲೂ ಕಂಡು ಬರದು ಎಂದು ಹೇಳಲಾಗಿದೆ. ನಮ್ಮ ಚುನಾವಣೆಗಳೂ ಹೀಗೇ ನಡೆದರೆ ಶೇಷನ್‌ನಂತಹವರು ಚಾಟಿ ಬೀಸಬೇಕಾಗಿ ಬರುವುದಿಲ್ಲ.

★★★

## ಪುನರಾವರ್ತನೆ

**ಪಾ**ಕಿಸ್ತಾನದಲ್ಲಿ ಏನು ಪುನರಾವರ್ತನೆ ಆಗುತ್ತಿರುತ್ತದೆ ಎಂದು ಕೇಳಿದರೆ ಉತ್ತರ ಏನಿರಬಹುದು? ಚರಿತ್ರೆ ಎನ್ನುತ್ತಾರೆ ಆ ದೇಶದ ಅಂಕಣಕಾರರೊಬ್ಬರು. ವ್ಹಾ! ವ್ಹಾ! ವೆಲ್

ಸೆಡ್. ಹೊಸ ಪ್ರಧಾನಿ, ಸೈನ್ಯಕ್ಕೆ ಹೊಸ ಮುಖ್ಯಸ್ಥ. ವಿಲ್ ಹಿಸ್ಟರಿ ರಿಪೀಟ್ ಇಟ್ ಸೆಲ್ಫ್? ಕಾದು ನೋಡಿ.

★★★

## ಲೈಸನ್ಸ್ ಟು ಡ್ರಿಂಕ್

**ಜೇ**ಮ್ಸ್ ಬಾಂಡ್ ಚಿತ್ರಗಳನ್ನು ನೋಡಿಯೇ ಇರುವ ನೀವು ಅವುಗಳಲ್ಲಿ ಅವನು ಕುಡಿಯುವುದನ್ನು ಗಮನಿಸಿಯೇ ಇರುತ್ತೀರಿ. ಆದರೆ ಅದರಲ್ಲಿ ಏನಾದರೂ ವೈಶಿಷ್ಟ್ಯವನ್ನು ಗಮನಿಸಿದ್ದೀರಾ? ನೋಡಿ ಅದು ಇಲ್ಲಿದೆ. ಅದೇನೆಂದರೆ ಜೇಮ್ಸ್ ಬಾಂಡ್ ಸಾಮಾನ್ಯ ಮನುಷ್ಯನೊಬ್ಬ ಕುಡಿಯುವುದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಮದ್ಯ ಕುಡಿಯುತ್ತಾನಂತೆ. ಹೀಗೆಂದು ಒಂದು ಅಧ್ಯಯನ ತಿಳಿಸಿದೆ. ನಿಜ ಜೀವನದಲ್ಲಿ ಬಾಂಡ್ ಇದ್ದಿದ್ದು ಅವನು ಹೀಗೆ ಕುಡಿಯುತ್ತಿದ್ದರೆ ಅವನಂದ ಪಿಸ್ತೂಲ್ ಹಿಡಿಯುವುದಿರಲಿ ಮದ್ಯ ತುಂಬಿದ ಗ್ಲಾಸ್ ಸಹ ಹಿಡಿಯಲು ಆಗುತ್ತಿರಲಿಲ್ಲ ಎಂದು ತಜ್ಞರು ಹೇಳಿದ್ದಾರೆ. ಆದರೆ ಜೇಮ್ಸ್ ಬಾಂಡ್‌ಜಿಗೆ ಅವನ ಸೃಷ್ಟಿಕರ್ತ ಫ್ಲೆಮಿಂಗ್ ಲೈಸನ್ಸ್ ಟು ಕಿಲ್ ಜತೆಗೆ ಲೈಸನ್ಸ್ ಟು ಡ್ರಿಂಕ್ (ಅನ್ ಲಿಮಿಟೆಡ್) ಸಹ ಕೊಟ್ಟಿದ್ದ. ಆದುದರಿಂದಲೇ ಟ್ರತ್ ಹ್ಯಾಸ್ ಟು ಬಿ ರಿಯಲಿಸ್ಟಿಕ್ ನಾಟ್ ಫಿಕ್ಷನ್ ಎಂದು ಹೇಳಿರುವುದು.

★★★

## ಮರೆಯದಿರಿ

**ಮ**ರೆವು ರೋಗದಿಂದ ಪಾರಾಗಬೇಕೆ? ಹಾಗಿದ್ದರೆ ವ್ಯಾಯಾಮ ಮಾಡಿ ಎಂದು ಅಧ್ಯಯನವೊಂದು ತಿಳಿಸಿದೆ. ವ್ಯಾಯಾಮ ಎಂದರೆ ವಾಕಿಂಗ್ ಮಾಡಿದರೂ ನಡೆಯುತ್ತೆ. ಮೂರು ಕಾಸೂ ಖರ್ಚಿಲ್ಲದ ಚಿಕಿತ್ಸೆ ಇದು ಎಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಮರೆವು ರೋಗದಿಂದ ಪಾರಾಗಲು ವ್ಯಾಯಾಮ ಮಾಡುವುದನ್ನು ಮರೆಯದಿರಿ.

★★★

## ನಮ್ಮಂತೆಯೇ ಅವರು

**ವಿ**ದೇಶಕ್ಕೆ ಹೋದಾಗ ಸಭ್ಯರಾಗಿರಿ. ಎಲ್ಲೆಂದರಲ್ಲಿ ಉಗುಳಬೇಡಿ. ಕಸ ಎಸೆದು ಗಲೀಜು ಮಾಡಬೇಡಿ. ಸರಿಯಾಗಿ ಬಟ್ಟೆ ಧರಿಸಿರಿ. ಇತರ ಹೆಣ್ಣು ಮಕ್ಕಳತ್ತ ದುರುಗುಟ್ಟುತ್ತಾ ನೋಡದಿರಿ. ಮೆಲ್ಲಗೆ ಮಾತನಾಡಿ, ಹೊಟೇಲಿಗೆ ಹೋದಾಗ ಸಭ್ಯತೆಯಿಂದ ವರ್ತಿಸಿ... ಇತ್ಯಾದಿ. ಆದರೆ ಈ ಉಪದೇಶ ಯಾರಿಂದ ಯಾರಿಗೆ ಎಂದಿರಾ? ಭಾರತ ಸರ್ಕಾರ ಭಾರತೀಯರಿಗೆ ಕೊಟ್ಟಿದೆ ಎಂದು ನೀವು ಭಾವಿಸಿದ್ದರೆ ಅದು ಶುದ್ಧ ಸುಳ್ಳು. ಏಕೆಂದರೆ ಈ ಸಲಹೆ ಸೂಚನೆಗಳು ನೀಡಿರುವುದು ಚೀನಾ ಸರ್ಕಾರ ವಿದೇಶ ಪ್ರವಾಸ ಮಾಡುವ ತನ್ನ ಪ್ರಜೆಗಳಿಗೆ! ಪರವಾಗಿಲ್ಲ ಹಾಗಿದ್ದರೆ ನಮ್ಮಂತೆಯೇ ಅವರು ಎಂದು ಹೇಳಬಹುದು.

★★★